ಗುರಿ, ನೀತಿ, ನಿಯಮ ಮತ್ತು ಸಂಘಟನೆ

AIMS, POLICY, RULES & ORGANISATION

ಭಾಗ – II

ಮರಿಗಳ ವಿಭಾಗ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

#39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು 560 001
ದೂ.: 080–22260017, 22267470, shq@bsgkarnataka.org
shanthigruha@scout.org.in, shantigruha@bsgkarnataka.org
www.bsgkarnataka.org

ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ

ದಯಾ ಕರ್ ದಾನ್ ಭಕ್ತೀ ಕಾ
ಹಮೇ ಪರಮಾತ್ಮಾ ದೇನಾ ।
ದಯಾ ಕರನಾ ಹಮಾರೀ
ಆತ್ಮಾ ಮೆ ಶುದ್ಧತಾ ದೇನಾ ॥

ಹಮಾರೆ ಧ್ಯಾನ್ ಮೆ ಆವೋ
ಪ್ರಭು, ಆಂಖೋಮೆ ಬಸ್ ಜಾವೋ ।
ಅಂಧೇರೆ ದಿಲ್ ಮೆ ಆಕರ್ ಕೆ
ಪರಂಜ್ಯೋತಿ ಜಗಾದೇನಾ ॥

ಬಹಾ ದೋ ಪ್ರೇಮ್ ಕೀ ಗಂಗಾ,
ದಿಲೋ ಮೆ ಪ್ರೇಮ್ ಕಾ ಸಾಗರ್ ।
ಹಮೆ ಆಪಸ್ ಮೆ ಮಿಲ್ ಜುಲ್ ಕರ್
ಪ್ರಭು, ರೆಹನಾ ಸಿಖಾದೇನಾ ॥

ಹಮಾರಾ ಕರ್ಮ್ ಹೋ ಸೇವಾ,
ಹಮಾರಾ ಧರ್ಮ್ ಹೋ ಸೇವಾ ।
ಸದಾ ಈಮಾನ್ ಹೋ ಸೇವಾ,
ವಹ್ ಸೇವಕ್ ಚರ್ ಬನಾದೇನಾ ॥

ವತನ್ ಕೆ ವಾಸತೆ ಜೀನಾ,
ವತನ್ ಕೆ ವಾಸತೆ ಮರನಾ ।
ವತನ್ ಪರ್ ಜಾನ್ ಫಿದಾ ಕರ್‌ನಾ
ಪ್ರಭು, ಹಮ್‌ಕೋ ಸಿಖಾ ದೇನಾ
॥ ದಯಾಕರ್ ॥

ಧ್ವಜಗೀತೆ

ಭಾರತ್ ಸ್ಕೌಟ್ ಗೈಡ್ ಝಂಡಾ
ಊಂಚಾ ಸದಾ ರಹೇಗಾ ।
ಊಂಚಾ ಸದಾ ರಹೇಗಾ ಝಂಡಾ
ಊಂಚಾ ಸದಾ ರಹೇಗಾ ॥

ನೀಲಾ ರಂಗ್ ಗಗನ್ ಸಾ ವಿಸ್ತೃತ
ಭಾತೃ ಭಾವ್ ಫೈಲಾತಾ ।
ತ್ರಿದಲ ಕಮಲನಿತ್ ತೀನ್
ಪ್ರತಿಜ್ಞಾವೊಂ ಕೀ ಯಾದ್ ದಿಲಾತಾ ।
ಔರ್ ಚಕ್ರ ಕಹತಾಹೈ
ಪ್ರತಿಪಲ್ ಆಗೆ ಕದಂ ಬಢೇಗಾ ॥

ಊಂಚಾ ಸದಾ ರಹೇಗಾ ಝಂಡಾ
ಊಂಚಾ ಸದಾ ರಹೇಗಾ ।
ಭಾರತ್ ಸ್ಕೌಟ್ ಗೈಡ್ ಝಂಡಾ
ಊಂಚಾ ಸದಾ ರಹೇಗಾ ॥

ಗುರಿ, ನೀತಿ, ನಿಯಮಗಳು ಮತ್ತು ಸಂಘಟನೆ

ಎ.ಪಿ.ಆರ್.ಓ. – ಭಾಗ 2

ಸ್ಕೌಟ್ ಶಾಖೆ

ಮರಿಗಳ ವಿಭಾಗ

ಮೊದಲ ಅನುವಾದ

ದಿ॥ ಮು. ವೆಂಕಟಕೃಷ್ಣಪ್ಪ, ಶಿಡ್ಲಘಟ್ಟ

30–11–2014ರಲ್ಲಿ ನಡೆದ ರಾಷ್ಟ್ರೀಯ ಪರಿಷತ್ತಿನಲ್ಲಿ ಅನುಮೋದನೆ ಪಡೆದ ತಿದ್ದುಪಡಿಗಳ ಅಳವಡಿಕೆ

ರಾ. ಚಂದ್ರಶೇಖರನ್
ಮಾಜಿ ರಾಜ್ಯ ಸ್ಥಾನಿಕ ಆಯುಕ್ತರು, (ಪ್ರಕಟಣೆಗಳು)
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕಾರ್ಯಾಲಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ನಂ. 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು–560 001

ಪ್ರಕಾಶಕರು
ರಾಜ್ಯ ಕಾರ್ಯಾಲಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ನಂ. 39, ಶಾಂತಿಗೃಹ
ಅರಮನೆ ರಸ್ತೆ
ಬೆಂಗಳೂರು-560 001

ಮೊದಲನೆ ಮುದ್ರಣ	: 1975
ಎರಡನೆ ಮುದ್ರಣ	: 1988
ಮೂರನೆ ಮುದ್ರಣ	: 2005
ನಾಲ್ಕನೆ ಮುದ್ರಣ	: 2013
ಐದನೇ ಮುದ್ರಣ	: 2021
ಪುಸ್ತಕದ ಆಕಾರ	: 1/8 ಡೆಮ್ಮಿ
ಪುಟಗಳು	: viii + 54 = 62
ಬಳಸಿದ ಕಾಗದ	: 70 ಜಿ.ಎಸ್.ಎಮ್
ಪ್ರತಿಗಳು	: 500
ಬೆಲೆ	: ₹ 25/- (25 ರೂಪಾಯಿಗಳು)

ಎಲ್ಲಾ ಹಕ್ಕುಗಳು : ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆಗೆ ಸೇರಿದ್ದು

ಮುದ್ರಣ :
ಸತ್ಯಶ್ರೀ
ಪ್ರಿಂಟರ್ಸ್ ಪ್ರೈ. ಲಿ.
ಬೆಂಗಳೂರು-26
ದೂ : 080-2674 8811
satyasriprn@gmail.com

ರಾಜ್ಯ ಮುಖ್ಯ ಆಯುಕ್ತರ ನುಡಿ

ಸ್ಕೌಟ್-ಗೈಡ್, ಚಳವಳಿ ಅಂತಾರಾಷ್ಟ್ರೀಯ ಜಾಗತಿಕ ಯುವ ಸಂಘಟನೆ. 2 ಕೋಟಿ 80 ಲಕ್ಷಕ್ಕೂ ಮೀರಿದ ಸಮವಸ್ತ್ರಧಾರಿಗಳುಳ್ಳ ಈ ಚಳವಳಿಯು 216 ರಾಷ್ಟ್ರಗಳಲ್ಲಿ ಹರಡಿ ವಿಶ್ವವ್ಯಾಪಿಯಾದ ಅಸ್ತಿತ್ವವನ್ನು ಹೊಂದಿದೆ. ಮರಿಗಳು/ಹಕ್ಕಿಗಳು (ಕಬ್ಸ್/ಬುಲ್‌ಬುಲ್ಸ್) ಈ ಯುವ ಸಂಘಟನೆಯ ಕಿರಿಯರ ವಿಭಾಗವಾಗಿದೆ.

ಯುವ ಸಮುದಾಯಕ್ಕೆ ಸಾಮಾಜಿಕ ಹೊಣೆಗಾರಿಕೆ ಹಾಗೂ ಜೀವನ ಮೌಲ್ಯಗಳ ಬೆಳವಣಿಗೆಗೆ ಸಂಪೂರ್ಣ ಸಹಕಾರಿಯಾಗಿರುವ ಸ್ಕೌಟ್-ಗೈಡ್ ಚಳವಳಿಯನ್ನು ಹೆಚ್ಚಾಗಿ ಬೆಳಸಬೇಕೆಂಬುದೇ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಸಾವಿರಾರು ಕಾರ್ಯಕರ್ತರುಗಳ ಹೆಬ್ಬಯಕೆ.

ಇದೀಗ ತಾನೇ ಶತಮಾನೋತ್ಸವವನ್ನು ಆಚರಿಸಿದ ಮರಿಗಳು/ಹಕ್ಕಿಗಳ ವಿಭಾಗವು ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ತನ್ನ ಘಟಕಗಳನ್ನು ಹೊಂದುವ ಉದ್ದೇಶ, ಆಶಯಗಳು ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕಿರಿಯರ ವಿಭಾಗದ ಕಾರ್ಯಕರ್ತರುಗಳು ಹಾಗೂ ಪದಾಧಿಕಾರಿಗಳ ಉದ್ದೇಶವಾಗಿದೆ.

ಈ ಮಹತ್ತರ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಹಲವಾರು ಅಂಶಗಳಲ್ಲಿ ಕನ್ನಡದಲ್ಲಿ ಚಳವಳಿಯ ಎಲ್ಲಾ ವಿಭಾಗಗಳ ಪ್ರಕಟಣೆಗಳನ್ನು ರಚಿಸಿ, ಭಾಷಾಂತರಿಸಿ, ಸಮಾಜಕ್ಕೆ ಹಾಗೂ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಸಹಸ್ರಾರು ಕಬ್ ಮಾಸ್ಟರುಗಳು, ಫ್ಲಾಕ್ ಲೀಡರುಗಳಿಗೆ ಒದಗಿಸುವುದು ಮತ್ತು ಅವರುಗಳ ಕಾರ್ಯಕ್ಷಮತೆಯ ಬೆಳವಣಿಗೆಯಲ್ಲಿ ಅನುಕೂಲವಾಗುವ ಕನ್ನಡ ಮಾಧ್ಯಮದ ಸ್ಕೌಟ್-ಗೈಡ್ ಚಳವಳಿಯ ವಿವಿಧ ಹಂತದ ಮಾಹಿತಿಗಳು-ನೀತಿ-ನಿಯಮಾವಳಿಗಳು ಹಾಗೂ ಬೋಧನಾ ಸಮಾರ್ಥ್ಯಕ್ಕೆ ಅನುಕೂಲಕರವಾದ ಹಸ್ತಪ್ರತಿಗಳು ಹಾಗೂ ಪುಸ್ತಕಗಳನ್ನು ಪ್ರಕಟಿಸಲು ತೀರ್ಮಾನಿಸಲಾಯಿತು. ಈ ದಿಸೆಯಲ್ಲಿ ಈ ಪುಸ್ತಕ ಮಹತ್ವಪೂರ್ಣ ಹೆಜ್ಜೆಯಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಆರಂಭವಾದಂದಿನಿಂದ ಕಳೆದ ಹಲವಾರು ದಶಕಗಳಲ್ಲಿ ಇದರ ಗುರಿ, ಉದ್ದೇಶ ನಿಯಮಗಳು ಹಾಗೂ ಆಧಾರ

ವಾಗಿರುವ ವಿವರಗಳು ಇಂಗ್ಲೀಷಿನಲ್ಲಿ ಮಾತ್ರ (ಎ.ಪಿ.ಆರ್.ಓ.) ಕಾರ್ಯಕರ್ತರುಗಳಿಗೆ ಹಾಗೂ ತರಬೇತುದಾರರುಗಳಿಗೆ ಲಭ್ಯವಿದ್ದವು. ಅಲ್ಲಿಂದೀಚೆಗೆ ಎಂದರೆ 1975 ರಿಂದೀಚೆಗೆ ನಿಯಮಾವಳಿಯು ಕನ್ನಡದಲ್ಲಿ ಲಭ್ಯವಿರುವುದು ಸಂತಸದ ಸಂಗತಿಯಾಗಿದೆ.

ರಾಜ್ಯದಲ್ಲಿ ಕನ್ನಡವನ್ನು ಬೋಧನೆಗೆ ಬಳಸಬೇಕೆಂದು ನಿರ್ಧರಿಸಿದ ಪ್ರಕಾರ, 1975ರಲ್ಲಿ ಮರಿಗಳ ವಿಭಾಗಕ್ಕೆ ಸಂಬಂಧಿಸಿದ ನಿಯಮಾವಳಿ ಪುಸ್ತಕವನ್ನು ಕನ್ನಡದಲ್ಲಿ ಸಿದ್ಧಪಡಿಸಲಾಯಿತು. ತದನ್ವಯ ಸ್ಕೌಟ್ ಶಾಖೆಯ ಪೂರಕ ಅಂಗವಾದ ಮರಿಗಳು ಮತ್ತು ಮರಿಗಳ ಹಿಂಡುಗಳಿಗೆ ಅವಶ್ಯಕವಾದ ಅಂಶಗಳನ್ನು ಸಮಗ್ರ ಭಾಗಗಳಿಂದ ಆಯ್ದುಕೊಂಡು ವಿವರಿಸಲಾಗಿ ಅದು ಲಭ್ಯವಾಯಿತು.

ಅದೇ ಮೊದಲ ಬಾರಿಗೆ 1975ರಲ್ಲಿ ಭಾಷಾಂತರ ಮಾಡಿ **"ಮರಿಗಳ ನಿಯಮಾವಳಿ ಪುಸ್ತಕ"** ಪ್ರಕಟಿಸಲು ಕಾರಣರಾದ, ರಾಜ್ಯದ ತರಬೇತಿ ತಂಡದ ಹಿರಿಯ ನಾಯಕರಾಗಿದ್ದ ದಿ॥ ಮು. ವೆಂಕಟಕೃಷ್ಣಪ್ಪ ಅವರನ್ನು ಅಶ್ರುಪೂರ್ವಕವಾಗಿ ಸ್ಮರಿಸುತ್ತೇನೆ ಮತ್ತು ಅವರಿಗೆ ಸಹಾಯಕರಾಗಿದ್ದ ಶ್ರೀ ರಾ. ಚಂದ್ರಶೇಖರನ್ ಅವರನ್ನು ಅಭಿನಂದಿಸುತ್ತೇನೆ.

ಕಾಲಕಾಲಕ್ಕೆ ಆಗಿರುವ ಬದಲಾವಣೆಗಳನ್ನು ಅಳವಡಿಸುತ್ತಾ, ಇದೀಗ ಐದನೆಯ ಬಾರಿಗೆ ಈ ಪುಸ್ತಕವನ್ನು ಮುದ್ರಣಕ್ಕೆ ತಯಾರಿಸಿರುವ ಮರಿಗಳ ವಿಭಾಗದ ಹಿರಿಯ ತರಬೇತುದಾರರಾದ ಶ್ರೀ ರಾ. ಚಂದ್ರಶೇಖರನ್ ಅವರನ್ನೂ ಸ್ಕೌಟ್ ವಿಭಾಗದ ಹಿರಿಯ ತರಬೇತುದಾರರೂ ಸ್ಥಾನಿಕ ಆಯುಕ್ತರೂ ಆದ ಶ್ರೀ ಶ್ರೀನಿವಾಸನ್ ಅವರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇತ್ತೀಚಿನ ತಿದ್ದುಪಡಿಗಳ ಈ ಕಿರುಪುಸ್ತಿಕೆಯನ್ನು ಪ್ರಕಟಿಸಲು ಶ್ರಮಿಸಿರುವ ರಾಜ್ಯ ಸಂಸ್ಥೆಯ ಪ್ರಕಟಣಾ ವಿಭಾಗ ಸಮಿತಿಯ ಅಧ್ಯಕ್ಷರು ಹಾಗೂ ಹಿರಿಯ ಸಾಹಿತಿಗಳಾಗಿರುವ ಶ್ರೀ ಗೊ.ರು. ಚನ್ನಬಸಪ್ಪ ಅವರಿಗೆ, ರಾಜ್ಯದ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರಿಗೂ ಮತ್ತು ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ರಾಜ್ಯ ಕಾರ್ಯಕಾರಿ ಸಮಿತಿಗೆ ಹಾಗೂ ಅಂದವಾಗಿ ಮುದ್ರಿಸಿದ ಸತ್ಯಶ್ರೀ ಪ್ರಿಂಟರ್ಸ್ ಪ್ರೈ.ಲಿ.ನ ಮಾಲೀಕರಾದ ಶ್ರೀ ಎಲ್. ಲಿಂಗಪ್ಪನವರಿಗೆ ಸಿಬ್ಬಂದಿಗಳಿಗೆ ರಾಜ್ಯ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

ಬೆಂಗಳೂರು-01 **ಪಿ.ಜಿ.ಆರ್. ಸಿಂಧ್ಯ**

25-08-2021 **ರಾಜ್ಯ ಮುಖ್ಯ ಆಯುಕ್ತರು**

ಆಶಯ ನುಡಿ

ಸ್ಕೌಟ್ ಚಳವಳಿಗೆ ಸಂಬಂಧಿಸಿದ "ಗುರಿ, ನೀತಿ, ನಿಯಮಗಳು ಮತ್ತು ಸಂಘಟನೆ (ಭಾಗ–2) ಕುರಿತ ಈ ಪುಸ್ತಕ ಐದನೆಯ ಮುದ್ರಣ ಕಂಡಿದೆ ಎನ್ನುವುದೇ ಇದರ ಉಪಯುಕ್ತತೆಯನ್ನು ತಿಳಿಸುತ್ತದೆ. ಯಾವುದೇ ಚಳವಳಿಯಲ್ಲಿ ಕಾರ್ಯ ನಿರ್ವಾಹಕರಾಗಿ ಸೇವೆ ಸಲ್ಲಿಸುವವರಿಗೆ ತಮ್ಮ ಕ್ಷೇತ್ರ ಕಾರ್ಯಕ್ಕೆ ಮಾರ್ಗದರ್ಶಕ ವಾಗುವ ಸಾಹಿತ್ಯ ಬೇಕಾಗುತ್ತದೆ. ಈ ಅಗತ್ಯವನ್ನು ಪೂರೈಸಲು ಭಾರತ್ ಸ್ಕೌಟ್ಸ್–ಗೈಡ್ಸ್‌ನ ಕರ್ನಾಟಕ ಸಂಸ್ಥೆಯು ಅದರ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ನೇತೃತ್ವದಲ್ಲಿ ವಹಿಸಿರುವ ಶ್ರದ್ಧಾಸಕ್ತಿಗಳು ಅಭಿಮಾನ ಪೂರ್ಣವಾದವು.

ಪ್ರಸ್ತುತ ಪುಸ್ತಕ ಸ್ಕೌಟ್ 'ಮರಿ'ಗಳಿಗೆ ಸಂಬಂಧಿಸಿದ್ದು. ಮರಿ ಮತ್ತು ಮರಿಗಳ ಹಿಂಡುಗಳ ಸ್ವರೂಪ, ಕಾರ್ಯಕ್ರಮಗಳು, ಮರಿ ಹಿಂಡುಗಳ ಕಬ್ ಮತ್ತು ಸಹಾಯಕ ಕಬ್ ಮಾಸ್ಟರುಗಳ ಅರ್ಹತೆ, ಸಮವಸ್ತ್ರ, ಮರಿಗಳ ಷಟ್ಕ ಪದ್ಧತಿ, ಪ್ರವೇಶ ಪರಿಕ್ಷಾಂಶಗಳು, ಪ್ರಗತಿಪರ ಯೋಜನೆಗಳು, ಪ್ರಥಮದಿಂದ ಚತುರ್ಥ ಚರಣ್ ಹಂತದ ಪರೀಕ್ಷೆಗಳು, ಪ್ರವೀಣತಾ ಪದಕಗಳು, ಮರಿಗಳ ಶಿಬಿರಗಳು – ಹೀಗೆ ಸ್ಕೌಟ್ ಮರಿಗಳು ಮತ್ತು ಅವರ ಮಾಸ್ಟರುಗಳು ತಿಳಿದಿರಬೇಕಾದ ಎಲ್ಲಾ ಅಂಶಗಳನ್ನು ಚಳವಳಿಯ ರಾಷ್ಟ್ರೀಯ ಪರಿಷತ್ತಿನಿಂದ ಅನುಮೋದನೆಗೊಂಡ ತಿದ್ದುಪಡಿಗಳನ್ನೆಲ್ಲ ಅಳವಡಿಸಿ, ರಾಜ್ಯ ಸ್ಕೌಟ್–ಗೈಡ್‌ನ ಮಾಜಿ ಸ್ಥಾನಿಕ ಆಯುಕ್ತರು, ಚಳವಳಿಯ ತಾಂತ್ರಿಕ ಹಾಗೂ ಪ್ರಾಯೋಗಿಕ ವಿಷಯಗಳ ಭಂಡಾರವೂ ಆಗಿರುವ ಶ್ರೀ ರಾ. ಚಂದ್ರಶೇಖರನ್ ಅವರು ತಮ್ಮ ಈ ಅನುವಾದದಲ್ಲಿ ತುಂಬ ಖಚಿತವಾದ ವಿವರಣೆಯನ್ನು ನೀಡಿದ್ದಾರೆ.

ಸ್ಕೌಟ್ ಚಳವಳಿಯಲ್ಲಿ 5 ರಿಂದ 10 ವರ್ಷಗಳೊಳಗಿನ ಸ್ಕೌಟ್ ಮಕ್ಕಳನ್ನು 'ಮರಿಗಳು' ಎಂದು ಕರೆಯಲಾಗುತ್ತದೆ. ಇದು ಹುಟ್ಟಿದ ಸಸಿಯ ಗಿಡದ ಹಂತ ಎನ್ನಬಹುದು. ಈ ಹಂತದಲ್ಲಿ ಗಿಡದ ಆರೈಕೆ ಎಷ್ಟು ದೃಢವಾಗಿದ್ದರೆ ಅದು ಮುಂದೆ ಅಷ್ಟು ದೃಢವಾದ ಮರವಾಗುತ್ತದೆ. ವ್ಯಕ್ತಿಯನ್ನು ಸಮಾಜಯೋಗ್ಯನನ್ನಾಗಿ

ಬೆಳೆಸಬೇಕಾದರೆ ಈ ಬಾಲ್ಯದ ಹಂತ ಅತ್ಯಂತ ಮುಖ್ಯವಾಗುತ್ತದೆ. ವ್ಯಕ್ತಿ ವಿಕಾಸದ ಮೊದಲ ಹಂತವೇ ಇದು.

ಈ ದೃಷ್ಟಿಯಿಂದ ಸ್ಕೌಟ್ ಮರಿಗಳ ತರಬೇತಿ ತುಂಬ ಮಹತ್ವ ಪಡೆಯುತ್ತದೆ. ಈ ಪುಸ್ತಿಕೆ ಚಳವಳಿಯ ರಾಷ್ಟ್ರೀಯ ಪರಿಷತ್ತಿನ ಪ್ರಕಟಣೆಯ ಕೇವಲ ಅನುವಾದವಷ್ಟೇ ಅಲ್ಲ; ಅನುವಾದಕರಾದ ಶ್ರೀ ರಾ. ಚಂದ್ರಶೇಖರನ್ ಅವರು ತಮ್ಮ ನಾಲ್ಕೈದು ದಶಕಗಳ ಅನುಭವದ ಅಂತಃಸತ್ವವನ್ನು ಇಲ್ಲಿ ತುಂಬಿಕೊಟ್ಟಿದ್ದಾರೆ.

ಈ ಕೃತಿಯ ಪ್ರಯೋಜನವನ್ನು ಪಡೆದು ನಮ್ಮ ಕಬ್ ಮಾಸ್ಟರುಗಳು ಶ್ರೇಷ್ಠ 'ಮರಿ'ಗಳನ್ನು ಸಜ್ಜುಗೊಳಿಸುವಂತಾಗಲಿ ಎಂದು ಆಶಿಸುತ್ತೇನೆ.

ಗೊ.ರು. ಚನ್ನಬಸಪ್ಪ
ಅಧ್ಯಕ್ಷರು, ಪ್ರಕಟಣೆಗಳ ಸಮಿತಿ

ವಿಷಯಾನುಕ್ರಮಣಿಕೆ

ಮರಿಗಳ ವಿಭಾಗ 1–2

ಆ. 1. ಮರಿ 2–28

2. ಮರಿಗಳ ಹಿಂಡು
3. ಕಬ್ ಮಾಸ್ಟರು, ಸಹಾಯಕ ಕಬ್ ಮಾಸ್ಟರುಗಳು
4. ಕಬ್ ಮಾಸ್ಟರು, ಸಹಾಯಕ ಕಬ್ ಮಾಸ್ಟರುಗಳ ಅರ್ಹತೆ
5. ಕಬ್ ಮಾಸ್ಟರು, ಸಹಾಯಕ ಕಬ್ ಮಾಸ್ಟರುಗಳಿಗೆ ಸಮವಸ್ತ್ರ
6. ಷಟ್ಕ ಪದ್ಧತಿ, ಹಿರಿಯ ಆರಾಳಿ (ಅಣ್ಣ), ಆರಾಳಿ, ದ್ವಿತೀಯಕ
7. ಮರಿ – "ಪ್ರವೇಶ್" ಪರೀಕ್ಷಾಂಶಗಳು
8. ಮರಿಗಳ ಸಮವಸ್ತ್ರ
9. ಮರಿಗಳ ಪ್ರಗತಿಪರ ಯೋಜನೆ
10. ಪ್ರಥಮ ಚರಣ್ ಪರೀಕ್ಷೆಗಳು
11. ದ್ವಿತೀಯ ಚರಣ್ ಪರೀಕ್ಷೆಗಳು
12. ತೃತೀಯ ಚರಣ್ ಪರೀಕ್ಷೆಗಳು
13. ಚತುರ್ಥ ಚರಣ್ ಪರೀಕ್ಷೆಗಳು
14. ಮರಿಗಳ ಪ್ರವೀಣತಾ ಪದಕಗಳು
15. "ಚಿನ್ನದ ಬಾಣ" ಪದಕ
16. ಮರಿಗಳಿಗೆ ಶಿಬಿರಗಳು

1. ಪ್ರವೀಣತಾ ಪದಕಗಳು – ಅನುಬಂಧ–1 29

2. ಮರಿಗಳ ಪ್ರವೀಣತಾ ಪದಕಗಳು 30

2. ಪ್ರವೀಣತಾ ಪದಗಳು – ಅನುಬಂಧ–1 31

ಗುಂಪು–1 ಸಚ್ಚಾರಿತ್ರ್ಯ

1. ಸಂಗ್ರಾಹರ
2. ತೋಟಗಾರ
3. ಸಂವೀಕ್ಷಕ
4. ಮನರಂಜಕ
5. ಕತೆ ಹೇಳುವ
6. ನಾನು ಮುಕ್ತವಾಗಿರುವಿಕೆ

ಗುಂಪು–2 ದೈಹಿಕ ಆರೋಗ್ಯ
1. ಕ್ರೀಡಾಪಟು
2. ಸೈಕಲ್
3. ಈಜುಗಾರ
4. ತಂಡ ಆಟಗಾರ
ಗುಂಪು–3 ಕರಕುಶಲತೆ
1. ಚಿತ್ರಗಾರ
2. ಗೃಹ ಕಲೆಗಾರ
3. ಆಟಿಕೆ ಮಾಡುವವ
4. ಪುಸ್ತಕ ರಟ್ಟು ಕಟ್ಟುವುದು
ಗುಂಪು–4 ಸೇವೆ
1. ಬಾಣಸಿಗ
2. ಪ್ರಥಮ ಚಿಕಿತ್ಸಕ
3. ಮಾರ್ಗದರ್ಶಿ
4. ಮನೆ ತೈನಾತಿ
ಗುಂಪು–5 ರಕ್ಷಣೆ ಮತ್ತು ತಾಂತ್ರಿಕತೆ
1. ವಿಶ್ವ ಸಂರಕ್ಷಣೆ
2. ಪರಂಪರೆ ಮರಿ

ವಿಶೇಷ ವಿಭಾಗಗಳು–ಅನುಬಂಧ–2	46
ಗುರಿ, ನೀತಿ, ನಿಯಮ ಮತ್ತು ಸಂಘಟನೆ–ಅನುಬಂಧ–3	47
ಮರಗಿಳ ವಿಭಾಗ – ನಿರೂಪಣೆ	48
ವಿಶೇಷ ಶಾಖೆಗಳು	49
ಅ) ವಿಸ್ತೃತ ಸ್ಕೌಟಿಂಗ್	49
ಆ) ಸಾಗರ ಸ್ಕೌಟಿಂಗ್ ಶಾಖೆ	49
ಇ) ವಾಯು ಸ್ಕೌಟಿಂಗ್ ಶಾಲೆ	50
ಈ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಾಹಸ ಕ್ಲಬ್	51
ಉದ್ದೇಶಗಳು	51
ಸಮಿತಿಯ ಕರ್ತವ್ಯಗಳು	52
ಸಾಹಸ ಕ್ಲಬ್‌ನ ಸದಸ್ಯರಿಗೆ ಸಮವಸ್ತ್ರ	52
ಕ್ಲಬ್‌ನ ಕಾರ್ಯಕ್ರಮ	53
ಮುಂದುವರೆದ ಸಾಹಸ ಚಟುವಟಿಕೆಗಳು	53
ಸಾಹಸ ಕ್ಲಬ್ ನಾಯಕನ ಅರ್ಹತೆಗಳು	54

ಅಧ್ಯಾಯ 1

ಮರಿಗಳ ವಿಭಾಗ

ಅ. ಮರಿಗಳ ಕಾರ್ಯಕ್ರಮದ 14 ಆದರ್ಶಗಳು

ಬಾಲಕನು ಮರಿಗಳ ಕಾರ್ಯಕ್ರಮ ಪ್ರಕಾರ, ಎಲ್ಲವನ್ನೂ ಪೂರ್ಣಗೊಳಿಸುವ ವೇಳೆಗೆ, ಅವನು ಈ ಕೆಳಕಂಡ ಆದರ್ಶಗಳನ್ನು ಪಾಲಿಸಲು ಸಶಕ್ತನಾಗಿರುವುದು ಮರಿಗಳ ವಿಭಾಗದ ಉದ್ದೇಶವಾಗಿದೆ.

1. ಸಚ್ಚಾರಿತ್ರ್ಯಕ್ಕೆ ದಾರಿ ಮಾಡುವ ಸ್ವಭಾವವನ್ನು ರೂಢಿಸಿಕೊಳ್ಳುತ್ತಾನೆ.

2. ಉತ್ತಮ ಪೌರನಾಗುವ ಬಗ್ಗೆ ತಿಳುವಳಿಕೆ ಹೊಂದಲು ಪ್ರಯತ್ನಿಸುತ್ತಾನೆ.

3. ಮುಂದೆ ಉತ್ತಮ ಸ್ಕೌಟ್ ಮತ್ತು ಉತ್ತಮ ಬಾಲಕನೆನಿಸಿಕೊಳ್ಳಲು ಅವಶ್ಯಕವಾದ ಮರಿಗಳ ಕೌಶಲಗಳನ್ನು ಸಕ್ರಿಯವಾಗಿ ಕಲಿಯುತ್ತಾನೆ.

4. ಅವನ ಸರ್ವಾಂಗೀಣ ಬೆಳವಣಿಗೆಗೆ ಅವಶ್ಯಕವಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾನೆ.

5. ದಿನಕ್ಕೊಂದು ಉಪಕಾರ ಮಾಡುತ್ತಾನೆ.

6. ಪ್ರಕೃತಿ ರಮ್ಯತೆಗೆ ಆಕರ್ಷಿತನಾಗುತ್ತಾನೆ. ಆರಾಧಕನಾಗುತ್ತಾನೆ. ದೇವರು/ ಧರ್ಮದ ಬಗ್ಗೆ ಅರಿವುಳ್ಳವನಾಗುತ್ತಾನೆ.

7. ಸೃಜನಾತ್ಮಕ ಕೌಶಲಗಳನ್ನು ಪ್ರದರ್ಶಿಸುತ್ತಾನೆ.

8. ತನಗೆ ಆಸಕ್ತಿಯುಳ್ಳ ವಸ್ತುಗಳನ್ನು ಸಂಗ್ರಹಿಸುತ್ತಾನೆ ಮತ್ತು ಅವುಗಳನ್ನು ಸೂಕ್ತ ರೀತಿಯಲ್ಲಿ ಜೋಪಾನ ಮಾಡುತ್ತಾನೆ.

9. ಹಿರಿಯರ ಬಗ್ಗೆ ಗೌರವವನ್ನುಳ್ಳವನಾಗುತ್ತಾನೆ. ಕುಟುಂಬದ ಕಿರಿಯರು ಮತ್ತು ನೆರೆಯೊರೆಯವರ ಬಗ್ಗೆ ಪ್ರೀತಿಯುಳ್ಳವನಾಗಿರುತ್ತಾನೆ ಮತ್ತು ಸಹಕಾರ ಮನೋಭಾವವುಳ್ಳವನಾಗಿ, ಅದನ್ನು ಯುಕ್ತ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ.

10. ತನ್ನ ಸಾಹಸಪ್ರವೃತ್ತಿಯನ್ನು ತೃಪ್ತಿ ಪಡಿಸಿಕೊಳ್ಳುತ್ತಾನೆ.

11. ಕುಟುಂಬದ ಸಂಪ್ರದಾಯಗಳನ್ನು ಗೌರವಿಸುತ್ತಾನೆ. ಅದರ ಧಾರ್ಮಿಕ –ಸಾಮಾಜಿಕ ಅಥವಾ ಪಾರಂಪರಿಕ ಮೌಲ್ಯಗಳನ್ನು ಗುರುತಿಸುತ್ತಾನೆ ಮತ್ತು ಅವುಗಳನ್ನು ಅನುಸರಿಸಲು ಪ್ರಯತ್ನಿಸುತ್ತಾನೆ.

12. ಪ್ರಕೃತಿ/ಪರಿಸರವನ್ನೂ ಸಾರ್ವಜನಿಕ ಸ್ವತ್ತನ್ನೂ ಸಂರಕ್ಷಿಸಬೇಕಾದುದನ್ನು ಅರಿತವನಾಗಿರುತ್ತಾನೆ.

13. ಹಿರಿಯರಿಗೆ ವಿಧೇಯನಾಗಿರುತ್ತಾನೆ ಮತ್ತು ಅವರ ಅನುಪಸ್ಥಿತಿಯಲ್ಲಿ ಸಹ ಅವರ ಹೇಳಿಕೆಯನ್ನು ಪಾಲಿಸುತ್ತಾನೆ.

14. ತನ್ನ ರಾಜ್ಯ, ಜನರು ಮತ್ತು ಸಂಸ್ಕೃತಿಯನ್ನು ತಿಳಿದವನಾಗಿರುತ್ತಾನೆ.

ಅ) 1. ಮರಿ (ಕಬ್):

ಐದು ವರ್ಷ ವಯಸ್ಸಾಗಿದ್ದು ಹತ್ತು ವರ್ಷ ತುಂಬದೆ ಇರುವ ಭಾರತ ರಾಷ್ಟ್ರದ ಪ್ರಜೆಯಾಗಿರುವ ಬಾಲಕನು 'ಮರಿ' ಆಗಲು ಅರ್ಹನು. ಈ ಅರ್ಹತೆ ಪೂರೈಸಲು ಆತನು ಮರಿಯ ಪ್ರತಿಜ್ಞೆ ಮತ್ತು ಮರಿಯ ನಿಮಯವನ್ನು ಅಂಗೀಕರಿಸಬೇಕು: ಹಾಗೂ ಮರಿಗಳ ಹಿಂಡು (ಕಬ್ ಪ್ಯಾಕ್) ಒಂದಕ್ಕೆ ಸದಸ್ಯನಾಗಿ ಸೇರಿರಬೇಕು.

2. ಮರಿಗಳ ಹಿಂಡು (ಕಬ್ ಪ್ಯಾಕ್)

i ಮರಿಗಳ ಹಿಂಡಿನಲ್ಲಿ ಹನ್ನೆರಡಕ್ಕಿಂತ ಕಡಿಮೆ ಇಲ್ಲದಂತೆ, ಇಪ್ಪತ್ತನಾಲ್ಕಕ್ಕೆ ಮೀರದಂತೆ ಮರಿಗಳು ಇರತಕ್ಕದ್ದು.

ii ಮರಿಗಳ ಹಿಂಡು (ಪ್ಯಾಕ್), ಸ್ಕೌಟ್‌ದಳ (ಟ್ರೂಪ್) ಮತ್ತು ರೋವರ್ ತಂಡ (ಕ್ರೂ) ಇರುವ ಮಂಡಲ (ಗ್ರೂಪ್)ದ ಒಂದು ಅಂಗವಾಗಿ ಮರಿಗಳ ಹಿಂಡು ಇರತಕ್ಕದ್ದು. ಈ ರೀತಿಯ ಮಂಡಲ (ಗ್ರೂಪ್) ಇಲ್ಲದ ಕಡೆ 'ಮರಿಗಳ ಹಿಂಡು' ತಾನೇ ಒಂದು ಗ್ರೂಪ್ (ಮಂಡಲ) ಎಂದು ಪರಿಗಣಿಸಲ್ಪಡುವುದು.

iii ಪ್ರತಿ ಮರಿಗಳ ಹಿಂಡೂ ಸಹ ಸೂಕ್ತ ನಿರ್ದೇಶಿತ ರೀತಿಯಲ್ಲಿ ನೋಂದಾಯಿಸಲ್ಪಟ್ಟು (ರಿಜಿಸ್ಟರ್ ಆಗಿ) ಇರತಕ್ಕದ್ದು.

iv ಪ್ರತಿ ಮರಿಗಳ ಹಿಂಡು ಒಂದು ಹೆಸರನ್ನು ಪಡೆದಿರತಕ್ಕದ್ದು, ಸದರಿ ಹಿಂಡು ಒಂದು ಮಂಡಲದ ಅಂಗವಾಗಿರುವಾಗ ಆ ಮಂಡಲದ ಹೆಸರೇ ಹಿಂಡಿಗೂ ಸಲ್ಲುವುದು. ಸ್ಥಳ, ಸಂಸ್ಥೆ, ಭಾರತದ ವೀರಪುರುಷರ

ಹೆಸರುಗಳನ್ನು ಇಟ್ಟುಕೊಳ್ಳಬಹುದು ಸ್ಥಳೀಯ ಸಂಸ್ಥೆಯಾಗಲಿ ಜಿಲ್ಲಾ ಸಂಸ್ಥೆಯಾಗಲಿ ನೀಡುವ ಕ್ರಮಸಂಖ್ಯೆಯೊಂದನ್ನು ಸಹ ಪ್ರತಿ ಮಂಡಲವೂ ಪಡೆದಿರತಕ್ಕದ್ದು.

3. ಕಬ್‌ಮಾಸ್ಟರ್/ಮಹಿಳಾ ಕಬ್ ಮಾಸ್ಟರ್ ಮತ್ತು ಸಹಾಯಕ ಕಬ್‌ಮಾಸ್ಟರ್

i ಪ್ರತಿ ಮರಿಗಳ ಹಿಂಡಿಗೂ ಒಬ್ಬ ಕಬ್ ಮಾಸ್ಟರ್/ಮಹಿಳಾ ಕಬ್ ಮಾಸ್ಟರ್ ಇರತಕ್ಕದ್ದು. ಹಿಂಡಿನಲ್ಲಿ ಒಂದಕ್ಕಿಂತ ಹೆಚ್ಚು ಸಹಾಯಕ ಕಬ್ ಮಾಸ್ಟರ್ / ಮಹಿಳಾ ಕಬ್ ಮಾಸ್ಟರರು ಇರಬಹುದು.

ii ಮಂಡಲ ಇರುವ ಕಡೆ ಮಂಡಲನಾಯಕ (ಗ್ರೂಪ್ ಲೀಡರ್)ನ ಸಾಮಾನ್ಯ ಮೇಲ್ವಿಚಾರಣೆಗೆ ಒಳಪಟ್ಟು ಕಬ್ ಮಾಸ್ಟರ್ ಮತ್ತು ಸಹಾಯಕ ಕಬ್ ಮಾಸ್ಟರ್ ಅಥವಾ ಮಹಿಳಾ ಕಬ್ ಮಾಸ್ಟರ್, ಸಹಾಯಕ ಕಬ್ ಮಾಸ್ಟರ್ / ಸಹಾಯಕ ಮಹಿಳಾ ಕಬ್ ಮಾಸ್ಟರ್‌ಗಳು ಕಾರ್ಯ ನಿರ್ವಹಿಸತಕ್ಕದ್ದು. ಮರಿಗಳ ಹಿಂಡಿನ ವಿದ್ಯಮಾನಗಳ ನಿರ್ವಹಣೆಗೆ ಕಬ್ ಮಾಸ್ಟರ್ / ಮಹಿಳಾ ಕಬ್ ಮಾಸ್ಟರ್ ಜವಾಬ್ದಾರರಾಗಿರತಕ್ಕದ್ದು. ಸಹಾಯಕ ಕಬ್ ಮಾಸ್ಟರ್, ಸಹಾಯಕ ಮಹಿಳಾ ಕಬ್ ಮಾಸ್ಟರ್‌ಗಳು, ಕಬ್ ಮಾಸ್ಟರ್‌ಗೆ / ಸಹಾಯಕ ಮಹಿಳಾ ಕಬ್ ಮಾಸ್ಟರ್‌ಗೆ ಸಹಾಯ ಮಾಡತಕ್ಕದ್ದು.

iii ಸಂದರ್ಭಾನುಸಾರ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ ಮತ್ತು ಸಂಬಂಧಿಸಿದ ಜಿಲ್ಲಾ ಆಯುಕ್ತರರ ಶಿಫಾರಸಿನಂತೆ, ಸಂಬಂಧಿಸಿದ ರಾಜ್ಯ ಆಯುಕ್ತರ ಸಲಹೆ ಪಡೆದು, ರಾಜ್ಯ ಮುಖ್ಯ ಆಯುಕ್ತರು/ ಕಬ್ ಮಾಸ್ಟರ್‌ಗಳನ್ನೂ ಮತ್ತು ಸಹಾಯಕ ಕಬ್ ಮಾಸ್ಟರುಗಳನ್ನೂ/ ಮಹಿಳಾ ಕಬ್ ಮಾಸ್ಟರ್, ಸಹಾಯಕ ಮಹಿಳಾ ಕಬ್ ಮಾಸ್ಟರ್‌ಗಳನ್ನು ನೇಮಿಸತಕ್ಕದ್ದು.

iv ನಿಯಮಿಸಲ್ಪಟ್ಟ ಬಳಿಕ ಕಬ್ ಮಾಸ್ಟರ್ ಮತ್ತು ಸಹಾಯಕ ಕಬ್ ಮಾಸ್ಟರ್/ಮಹಿಳಾ ಕಬ್ ಮಾಸ್ಟರ್, ಸಹಾಯಕ ಮಹಿಳಾ ಕಬ್ ಮಾಸ್ಟರ್ ಪ್ರತಿಯೊಬ್ಬರಿಗೂ ಒಂದು ಅಧಿಕಾರ ಪತ್ರ (ವಾರಂಟ್‌ನ್ನು) ನೀಡತಕ್ಕದ್ದು.

4. ಕಬ್‌ಮಾಸ್ಟರ್ ಮತ್ತು ಸಹಾಯಕ ಕಬ್ ಮಾಸ್ಟರರ ಅರ್ಹತೆಗಳು

i ಪುರುಷರೂ ಸ್ತ್ರೀಯರೂ ಉಭಯರೂ ಕಬ್ ಮಾಸ್ಟರ್‌ಗಳು ಮತ್ತು ಸಹಾಯಕ ಕಬ್ ಮಾಸ್ಟರ್‌ಗಳು ಆಗಲು ಅರ್ಹರು.

ii. ಹದಿನೆಂಟು ವರ್ಷ ವಯಸ್ಸು ತುಂಬಿರುವವರು ಕಬ್ ಮಾಸ್ಟರ್ ಅಥವಾ ಸಹಾಯಕ ಕಬ್ ಮಾಸ್ಟರ್ ಆಗಿ ನಿಯಮಿತರಾಗಲು ಅರ್ಹರು.

iii. ಅವರು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆ ಮುಗಿಸಿದ ಪ್ರಮಾಣ ಪತ್ರ ಹೊಂದಿರಬೇಕು. ವಿಶೇಷ ಪರಿಸ್ಥಿತಿಗಳಲ್ಲಿ ಸಂಬಂಧಿಸಿದ ಜಿಲ್ಲಾ ಆಯುಕ್ತರ ಶಿಫಾರಸ್ಸಿನ ಮೇಲೆ ರಾಜ್ಯ ಮುಖ್ಯ ಆಯುಕ್ತರು ಈ ವಿದ್ಯಾರ್ಹತೆಯ ಬಗ್ಗೆ ವಿನಾಯತಿ ನೀಡಬಹುದು.

iv. ಇವರು ಶೀಲ, ಯೋಗ್ಯತೆ ಮತ್ತು ಬಾಳುವೆಯಲ್ಲಿ ಶುದ್ಧರಾಗಿ ಇದ್ದಿರಬೇಕು.

v. ಸ್ಕೌಟ್ ಚಳುವಳಿ ಮತ್ತು ವಿಶೇಷವಾಗಿ ಇದರ ವಿಧಾನಗಳ ಬಗೆಗೆ ಪರಿಜ್ಞಾನ; ಧರ್ಮ ಮತ್ತು ನೀತಿಯ ಬಗೆಗೆ ಈ ಸಂಸ್ಥೆಯ ಧೋರಣೆ, ಮೆಚ್ಚುಗೆ ಮತ್ತು ತಮ್ಮ ಕಾರ್ಯಭಾಗಕ್ಕೆ ಅನ್ವಯಿಸುವಷ್ಟು APRO ಮಾಹಿತಿ ಇವರಿಗಿರಬೇಕು.

vi. ಮರಿಗಳ 5–10 ವಯೋಮಾನದ ಮಕ್ಕಳೊಡನೆ ವ್ಯವಹರಿಸುವ ವಿಶೇಷ ಸಾಮರ್ಥ್ಯವುಳ್ಳವರಾಗಿರಬೇಕು ಮತ್ತು ಆಸಕ್ತಿಯುಳ್ಳವರಾಗಿರಬೇಕು.

vii. ರಾಷ್ಟ್ರೀಯ ಸಂಸ್ಥೆ ವಿಧಿಸಿರುವ ಅವಧಿಯ ಶಿಕ್ಷಣವನ್ನು ತೃಪ್ತಿಕರವಾಗಿ ಮುಗಿಸಿರಬೇಕು.

5. ಕಬ್‌ಮಾಸ್ಟರ್, ಸಹಾಯಕ ಕಬ್ ಮಾಸ್ಟರರ ಸಮವಸ್ತ್ರ

ಕಬ್ ಮಾಸ್ಟರ್ ಮತ್ತು ಸಹಾಹಕ ಕಬ್ ಮಾಸ್ಟರ್ ಈ ಮುಂದೆ ಕಾಣಿಸಿರುವಂತೆ ಸಮವಸ್ತ್ರ ಧರಿಸತಕ್ಕದ್ದು.

(ಎ) **ಪುರುಷರು :**

i) **ಷರ್ಟ್:** ಬೂದು ಬಣ್ಣದ ಮುಚ್ಚಳವಿರುವ ಎರಡು ಜೇಬುಗಳು ಮತ್ತು ಭುಜಪಟ್ಟಿಗಳು ಇರಬೇಕು. ಪೂರ್ತಿ ಅಥವಾ ಮೇಲಕ್ಕೆ ಮಡಿಸಿರುವ ತೋಳುಗಳಿರಬೇಕು. ಚಳಿಯಾದಾಗ ತೋಳುಗಳನ್ನು ಪೂರ್ತಿ ಮುಚ್ಚುವಂತೆ ಕೆಳಕ್ಕೆ ಬಿಟ್ಟುಕೊಳ್ಳಬಹುದು.

ii) **ಷರಾಯಿ/ನಿಕ್ಕರು :** ಗಾಢ ನೀಲಿ (ಸಾಗರ ನೀಲಿ) ಬಣ್ಣದ ಷರಾಯಿ/

ನಿಕ್ಕರು ಧರಿಸತಕ್ಕದ್ದು.

iii **ತಲೆಗೆ** : ರಾಷ್ಟ್ರೀಯ ಸಂಸ್ಥೆ ಒದಗಿಸುವ ಟೊಪ್ಪಿಗೆ: ಪದಕವಿರುವ ಗಾಢ ನೀಲಿಯ ಬೆರೆ (ಟೊಪ್ಪಿಗೆ) ಇರಬೇಕು. ಸಿಖ್ ಮತಸ್ಥರು ಅಧಿಕೃತ ಪದಕಸಹಿತ ನೀಲಿಯ ರುಮಾಲನ್ನು ಧರಿಸಬಹುದು. ಬೆರೆ (ಟೊಪ್ಪಿಗೆ)ಯು ಐಚ್ಛಿಕವಾದರೂ ಸಮಾರಂಭಗಳ ಸಮಯದಲ್ಲಿ ಶಿರೋಧಾರಣೆ ಕಡ್ಡಾಯವಾದುದು.

iv **ಅ) ನಡುಪಟ್ಟಿ (ಬೆಲ್ಟ್)**: ರಾಷ್ಟ್ರೀಯ ಸಂಸ್ಥೆ ಒದಗಿಸುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಧಿಕೃತ ಚಿಲಕ ಕಟ್ಟುಳ್ಳ ಬೂದು ನವಾರು ಪಟ್ಟಿಯ ನಡುಪಟ್ಟಿಯನ್ನು ಧರಿಸಬೇಕು.

ಆ) ಪೌಚ್ : ಸಣ್ಣ ಕೈಚೀಲ ಅಥವಾ ಪೌಚ್ (ರಾಷ್ಟ್ರೀಯ ಸಂಸ್ಥೆಯವರು ರೂಪಿಸಿರುವ) ಅನ್ನು ನಡುಪಟ್ಟಿಯ ಮೇಲೆ ಧರಿಸಬಹುದು.

v **ಕಂಠವಸ್ತ್ರ (ಸ್ಕಾರ್ಫ್)**: ಹಸಿರು, ನೇರಳೆ ಮತ್ತು ಹಳದಿ ಬಣ್ಣಗಳ ಹೊರತಾಗಿ, ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ ಒಪ್ಪಿಗೆ ಪಡೆದಿರುವ. ಮಂಡಲ (ಗ್ರೂಪ್) ಬಣ್ಣದ ಕಂಠವಸ್ತ್ರದ ಮೇಲೆ ಗಿಲ್‌ವೆಲ್ ಮಾದರಿಯದಲ್ಲದ ಯಾವುದೇ ಓಗಲ್ ಧರಿಸಬಹುದು. ಕಂಠವಸ್ತ್ರದ ಆಕಾರವು ಎರಡು ಪಕ್ಕಗಳ ಮತ್ತು ಒಂದು ತಳವುಳ್ಳ ತ್ರಿಕೋನವಾಗಿದ್ದು ಪ್ರತಿ ಪಕ್ಕವೂ ಎಪ್ಪತ್ತು ಸೆಂ. ಮೀ. ಕಡಿಮೆಯಿಲ್ಲದೆ ತೊಂಬತ್ತು ಸೆಂ. ಮೀ. ಮೀರದೆ ಇರಬೇಕು. ಈ ವಸ್ತ್ರವನ್ನು ಕೊರಳಿನ ಸುತ್ತಲೂ ಕೊರಳು ಮತ್ತು ಭುಜಪಟ್ಟಿಗಳ ಮೇಲಿರುವಂತೆ ಧರಿಸತಕ್ಕದ್ದು.

vi **ಭುಜಪದಕ (ಷೋಲ್ಡರ್ ಬ್ಯಾಡ್ಜ್)** : ಆರರಿಂದ ಎಂಟು ಸೆಂ. ಮೀ. ಉದ್ದ, ಒಂದೂವರೆ ಸೆಂ. ಮೀ ಅಗಲ ಇರುವ ಬಿಳಿ ಒಡಲಿನ ಮೇಲೆ ಕೆಂಪು ಅಕ್ಷರಗಳಲ್ಲಿ ಗ್ರೂಪ್/ಜಿಲ್ಲೆ/ರಾಜ್ಯದ (ಬೇಕಾದರೆ ಗ್ರೂಪ್‌ನ ಕ್ರಮಸಂಖ್ಯೆ ಹೆಸರು ಇರಬಹುದು) ಹೆಸರಿರುವ, ಸ್ವಲ್ಪ ಬಾಗಿದ ಭುಜಪದಕವನ್ನು ಎರಡೂ ಭುಜಗಳ ಮೇಲೆ ಭುಜದ ಹೊಲಿಗೆಯ ಕೆಳಗೆ ಧರಿಸತಕ್ಕದ್ದು.

vii. **ಪದಕ (ಸದಸ್ಯತ್ವ / ಮೆಂಬರ್ ಷಿಪ್ ಬ್ಯಾಡ್ಜ್)** : ಹಸಿರು ಒಡಲಿನ ಮೇಲೆ ಹಳದಿ ಬಣ್ಣದ ತ್ರಿದಲ ಕಮಲದಲ್ಲಿ ಗೈಡ್ಸ್ ತ್ರಿದಳವನ್ನೂ,

ಮಧ್ಯೆ ಧರ್ಮಚಕ್ರವನ್ನು ಒಳಗೊಂಡಿರುವ ಬಟ್ಟೆಯ ಪದಕವನ್ನು ಷರ್ಟಿನ ಎಡಜೇಬಿನ ಮಧ್ಯಮಡಿಕೆ ಮಧ್ಯೆ ಧರಿಸತಕ್ಕದ್ದು.

viii. **ವಿಶ್ವ ಸ್ಕೌಟ್ ಪದಕ** : ವಿಶ್ವ ಸ್ಕೌಟ್ ಪದಕವನ್ನು ಸಮವಸ್ತ್ರದ ಬಲಜೇಬಿನ ಮಧ್ಯ ಮಡಿಕೆಯ ಮಧ್ಯೆ ಧರಿಸತಕ್ಕದ್ದು.

ix. **ದರ್ಜೆಯ ಪದಕ (ರ್‍ಯಾಂಕ್ ಬ್ಯಾಡ್ಜ್)** : ನೀಲಿಯ ಬಣ್ಣದ ಒಡಲು ನೀಲಿಯ ಅಂಚು ಇದ್ದು ಹಳದಿಯ ಸ್ಕೌಟ್ ಮತ್ತು ಗೈಡ್ ತ್ರಿದಳ ಕಮಲಪತ್ರಗಳನ್ನೂ ಧರ್ಮಚಕ್ರವನ್ನೂ ಹೊಂದಿರುವ ಬಟ್ಟೆಯ ದರ್ಜೆಯ ಪದಕವನ್ನು ಕಬ್ ಮಾಸ್ಟರೂ, ನೀಲಿಯ ಬಣ್ಣದ ಒಡಲು, ಕೆಂಪು ಅಂಚು ಇದ್ದು ಹಳದಿ ಸ್ಕೌಟ್ ಮತ್ತು ಗೈಡ್ ತ್ರಿದಳಗಳನ್ನೂ ಧರ್ಮಚಕ್ರವನ್ನೂ ಹೊಂದಿರುವ ಬಟ್ಟೆಯ ದರ್ಜೆಯ ಪದಕವನ್ನು ಸಹಾಯಕ ಕಬ್ ಮಾಸ್ಟರೂ ಧರಿಸತಕ್ಕದ್ದು. ಈ ಪದಕಗಳು ಎಡಜೇಬಿನ ಮೇಲುಗಡೆ ನಾಲ್ಕು ಸೆಂ. ಮೀ ದೂರದಲ್ಲಿ ಧರಿಸಲ್ಪಡತಕ್ಕದ್ದು.

x. **ಅ) ನಾಮಪಟ್ಟಿ** : ರಾಷ್ಟ್ರೀಯ ಸಂಸ್ಥೆಯವರು ಒದಗಿಸುವ The Bharat Scouts & Guides ಎಂಬ ಹೆಸರುಳ್ಳ ನಾಮಪಟ್ಟಿಯನ್ನು ಷರ್ಟಿನ ಬಲಜೇಬಿನ ಮೇಲ್ಭಾಗದಲ್ಲಿ ಧರಿಸಬಹುದು. ಈ ಪಟ್ಟಿಯ ಅಳತೆಯು 11 ಸೆಂ.ಮೀ. × 2 ಸೆಂ.ಮೀ. ಆಗಿದ್ದು ಬಲಮೂಲೆಯಲ್ಲಿ 2 ಸೆಂ.ಮೀ. × 3 ಸೆಂ.ಮೀ. ಅಳತೆಯಲ್ಲಿ ರಾಷ್ಟ್ರಧ್ವಜದ ತ್ರಿವರ್ಣ ಹೊಂದಿದ್ದು, ಉಳಿದ ಭಾಗ The Bharat Scouts & Guides ಬರಹಕ್ಕಾಗಿ ಇರುತ್ತದೆ.

ಆ) ಹೆಸರಿನ ಫಲಕ : 8 ಸೆಂ.ಮೀ. ಉದ್ದ ಮತ್ತು 2 ಸೆಂ.ಮೀ. ಅಗಲ ಅಳತೆಯುಳ್ಳ ಬಿಳಿಯ ಪ್ಲಾಸ್ಟಿಕ್ ಫಲಕದ ಮೇಲೆ ವಯಸ್ಕ ನಾಯಕರ ಹೆಸರನ್ನು ಕಪ್ಪು ಅಕ್ಷರಗಳಲ್ಲಿ ಕೊರೆದಿರಬೇಕು. ಅದನ್ನು ಷರ್ಟಿನ ಬಲಜೇಬಿನ ಮೇಲ್ಭಾಗದಲ್ಲಿ B.S.&G. ಎಂಬ ಪಟ್ಟಿಯ ಕೆಳಭಾಗದಲ್ಲಿ ಧರಿಸತಕ್ಕದ್ದು.

xi. **ಕಾಲುಚೀಲ** : ಕಪ್ಪು ಬಣ್ಣದ ಸಾಕ್ಸ್ ಅಥವಾ ಸ್ಟಾಕಿಂಗ್ಸ್ ಧರಿಸತಕ್ಕದ್ದು. ನಿಕ್ಕರು ಧರಿಸಿದಾಗ ಸ್ಟಾಕಿಂಗ್ಸ್‌ನ್ನು ಮೊಣಕಾಲು ಕೆಳಗೆ ಮಡಿಸತಕ್ಕದ್ದು. 1.5 ಸೆಂ. ಮೀ. ನೀಲಿ ಬಣ್ಣದ ಗಾರ್ಟರ್ ಟ್ಯಾಬ್ಸ್‌ನ ಪಟ್ಟಿ ಹೊರಕಾಣುವಂತೆ ಕಟ್ಟಿಕೊಳ್ಳತಕ್ಕದ್ದು.

xii. **ಪಾದರಕ್ಷೆಗಳು :** ಕಪ್ಪುಬಣ್ಣದ ಲೇಸ್ ಇರುವ ಕ್ಯಾನ್‌ವಾಸ್ ಅಥವಾ ಚರ್ಮದ ಷೂಸ್ ಅನ್ನು ಧರಿಸಬೇಕು.

xiii. **ಲೋಹದ ಫಲಕ :** ಮಫ್ತಿ ಎಂದರೆ ಸಾಧಾರಣ ಉಡುಪಿನಲ್ಲಿದ್ದಾಗ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಲೋಹದ ಪದಕವನ್ನು ಧರಿಸಬಹುದು.

xiv. **ಸಿಳ್ಳೆದಾರ (ಲ್ಯಾನ್ ಯಾರ್ಡ್) :** ಹಿಂಡಿನ ಚಟುವಟಿಕೆ ವೇಳೆಯಲ್ಲಿ ಷರ್ಟಿನ ಎಡಜೇಬಿನೊಳಕ್ಕೆ ಇಳಿಬಿಟ್ಟಿರುವ ಸಿಳ್ಳೆ (ಸೀಟಿ)ಗೆ ಕಟ್ಟಿರುವ ಬೂದು ಬಣ್ಣದ ಸಿಳ್ಳೆದಾರವನ್ನು ಕತ್ತಿನ ಸುತ್ತಲೂ ಧರಿಸಬಹುದು.

xv. **ಓವರ್ ಕೋಟು, ಮ್ಯಾಕಿಂಟೋಷ್ ಅಥವಾ ಜಾಕೆಟ್ :** ಕಡುನೀಲಿ ಬಣ್ಣದ ಓವರ್ ಕೋಟ್, ವಿಂಡ್ ಚೀಟರ್, ಜೆರ್ಸಿ ಅಥವಾ ಬ್ಲೇಜರ್ ಅನ್ನು ಚಳಿಗಾಲದಲ್ಲಿ ಮಾತ್ರ ಧರಿಸಬಹುದು.

xvi. **ವಿಶ್ವಭ್ರಾತೃತ್ವ ಓಗಲ್ :** ಚರ್ಮದ ಅಥವಾ ಬೆತ್ತದ ವಿಶ್ವಭ್ರಾತೃತ್ವ ವೋಗಲ್ (ಒಂದೇಬಣ್ಣದ) ಧರಿಸಬಹುದು.

(ಬಿ) ಐಚ್ಛಿಕ ತೊಡಿಗೆಗಳು :

1) ಚಟುವಟಿಕೆಗಳ ವೇಳೆಯಲ್ಲಿ ಗಾಢನೀಲಿ ಬಣ್ಣದ ಜೀನ್ಸ್ / ಷರಾಯಿ ಅಥವಾ ನಿಕ್ಕರು ಅನ್ನು, ಆಕಾಶನೀಲಿ ಬಣ್ಣದ T ಷರ್ಟ್‌ನೊಂದಿಗೆ ಧರಿಸಬಹುದು. ಅದರ ಜೇಬಿನ ಮೇಲೆ ಸ್ಕೌಟ್ ಲಾಂಛನವನ್ನು ಚಿತ್ರಿಸಿರಬೇಕು. ಕಡುನೀಲಿ ಬಣ್ಣದ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಲಾಂಛನವಿರುವ 'ಪಿ'ಕ್ಯಾಪ್ ಸಹ ಧರಿಸಬಹುದು. ಹಿತಕರವಾದ ಷೂಸ್ ಸಹ ಧರಿಸಬಹುದು.

2) ಮಹಿಳಾ ಕಬ್ ಮಾಸ್ಟರು : ಕಬ್ ಮಾಸ್ಟರುಗಳಿಗೆ ನಿಗದಿಪಡಿಸಿರುವ ಐಚ್ಛಿಕ ತೊಡಿಗೆಯನ್ನೇ ಧರಿಸಬಹುದು.

(ಸಿ) ಮಹಿಳೆಯರಿಗೆ :

ಮಹಿಳಾ ಕಬ್ ಮಾಸ್ಟರ್, ಸಹಾಯಕ ಕಬ್ ಮಾಸ್ಟರ್ ಈ ಮುಂದಿನಂತೆ ಸಮವಸ್ತ್ರ ಧರಿಸತಕ್ಕದ್ದು.

i) **ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟ :** ಪಾರದರ್ಶಕವಲ್ಲದ ಸಾದಾ ವಸ್ತ್ರದ ಬೂದುಬಣ್ಣದ ಸಲ್ವಾರ್ ಮತ್ತು ಕಮೀಜ್. ಕಮೀಜ್

ಮೊಳಕಾಲವರೆಗೆ ಉದ್ದವಾಗಿರತಕ್ಕದ್ದು. ಇದಕ್ಕೆ ನಾಲ್ಕು ಪ್ಯಾಚ್ ಪಾಕೆಟ್‌ಗಳು, ಮೊಳಕೈ ಮೇಲೆ ಎಂಟು ಸೆಂ. ಮೀ. ಇರುವಂತೆ ಅರ್ಧತೋಳು (ಪೂರ್ಣ ತೋಳಾದರೆ ನಾಲ್ಕು ಸೆಂ. ಮೀ. ಅಗಲದ ಹೊಲೆದ ಕಫ್ಸ್ ಇರಬೇಕು) ತೆರೆದಿರುವ ಸ್ಪೋರ್ಟ್ಸ್ ಕಾಲರ್, ಎರಡೂ ಭುಜಗಳ ಮೇಲೆ ಭುಜಪಟ್ಟಿ (ಎಪಾಲೆಟ್ಸ್)ಗಳು, ಈ ಸಲ್ವಾರ್ ಮತ್ತು ಕಮೀಜ್‌ಗಳು ಮೈಗೆ ಅಂಟಿದಂತೆ ಬಿಗಿಸಿರಕೂಡದು. ದುಪ್ಪಟ್ಟ, ಪಾರದರ್ಶಕವಲ್ಲದ ಉಕ್ಕು ಬೂದುಬಣ್ಣದ ಸಾಧಾರಣ ವಸ್ತ್ರದ್ದಾಗಿರಬೇಕು.

ಅಥವಾ

ಮಿಡಿಸ್ಕರ್ಟ್ ಮತ್ತು ಬ್ಲೌಸ್ : ಪಾರದರ್ಶಕವಲ್ಲದ ಸಾದಾ ವಸ್ತ್ರದ ಮೊಳಕಾಲು ಅಥವಾ ಕಾಲಮಣಿಕಟ್ಟಿನವರೆಗಿನ ಉದ್ದ ಇರುವ ಬೂದು ಬಣ್ಣದ ಮಿಡಿ ಸ್ಕರ್ಟ್, ಬಿಳಿ ಬ್ಲೌಸ್ ಎರಡು ಪ್ಯಾಚ್ ಪ್ಯಾಕೇಟ್‌ಗಳು ಮೊಳಕೈ ಮೇಲೆ 8 ಸೆಂ. ಮೀ. ಇರುವಂತೆ ಅರ್ಧತೋಳು, ಪೂರಾ ತೋಳಾದರೆ 4 ಸೆಂ. ಮೀ. ಅಗಲದ ಹೊಲೆದ ಕಫ್ಸ್, ತೆರೆದಿರುವ ಸ್ಪೋರ್ಟ್ಸ್ ಕಾಲರ್, ಎರಡೂ ಭುಜಗಳ ಮೇಲೆ ಎರಡು ಭುಜಪಟ್ಟಿ (ಎಪಾಲೆಟ್ಸ್)ಗಳು ಬ್ಲೌಸ್ ಮೈಗೆ ಅಂಟಿದಂತೆ ಬಿಗಿಸಿರಕೂಡದು.

ಅಥವಾ

ಸೀರೆ ಮತ್ತು ಬ್ಲೌಸ್ : ಪಾರದರ್ಶಕವಲ್ಲದ ಸಾದಾ ವಸ್ತ್ರದ ಬೂದು ಬಣ್ಣದ ಸೀರೆ, ಪಾರದರ್ಶಕವಲ್ಲದ ಸಾಧಾರಣ ವಸ್ತ್ರದ ಉಕ್ಕು ಬೂದು ಬಣ್ಣದ ಬ್ಲೌಸ್, ಎರಡು ಪ್ಯಾಚ್ ಪಾಕೇಟ್‌ಗಳು, ಮೊಳಕೈ ಮೇಲೆ ಎಂಟು ಸೆಂ. ಮೀ. ಇರುವಂತೆ ಅರೆತೋಳು, ಪೂರಾತೋಳಾದರೆ ನಾಲ್ಕು ಸೆಂ. ಮೀ. ಅಗಲದ ಹೊಲೆದ ಕಫ್ಸ್, ತೆರೆದಿರುವ ಸ್ಪೋರ್ಟ್ಸ್ ಕಾಲರ್ ಎರಡೂ ಭುಜಗಳ ಮೇಲೆ ಎರಡು ಭುಜಪಟ್ಟಿ (ಎಪಾಲೆಟ್ಸ್)ಗಳು, ಬ್ಲೌಸ್ ಮೈಗೆ ಅಂಟಿದಂತೆ ಬಿಗಿಸಿರಕೂಡದು.

ii) **ನಡುಪಟ್ಟಿ (ಬೆಲ್ಟ್)**: ರಾಷ್ಟ್ರಿಯ ಸಂಸ್ಥೆಯಿಂದ ಒದಗಿಸುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕೃತ ಚಿಲಕಕಟ್ಟುಳ್ಳ ಬೂದು ನವಾರು ಪಟ್ಟಿ.

iii) **ಕಂಠವಸ್ತ್ರ** : ಕಬ್ ಮಾಸ್ಟರ್‌ಗಳಿಗೆ ವಿಧಿಸಿರುವ ಕಂಠವಸ್ತ್ರ ಧರಿಸತಕ್ಕದ್ದು.

iv) **ಭುಜಪದಕ** : ಕಬ್ ಮಾಸ್ಟರ್‌ಗಳಿಗೆ ವಿಧಿಸಿರುವ ಭುಜಪದಕ ಧರಿಸತಕ್ಕದ್ದು.

v) **ಪದಕ (ಸದಸ್ಯತ್ವ/ಮೆಂಬರ್‌ಷಿಪ್ ಬ್ಯಾಡ್ಜ್)** : ಮಹಿಳಾ ಕಬ್ ಮಾಸ್ಟರುಗಳು ಮತ್ತು ಮಹಿಳಾ ಸಹಾಯಕ ಕಬ್ ಮಾಸ್ಟರುಗಳು, ಕಬ್ ಮಾಸ್ಟರ್ ಮತ್ತು ಸಹಾಯಕ ಕಬ್ ಮಾಸ್ಟರ್‌ಗಳಿಗೆ ವಿಧಿಸಿರುವ ಪದಕಗಳನ್ನು ಎಡತೋಳಿನ ಮಧ್ಯೆ ಧರಿಸತಕ್ಕದ್ದು.

vi) **ವಿಶ್ವ ಸ್ಕೌಟ್ ಪದಕ** : ಬಲತೋಳಿನ ಮಧ್ಯಭಾಗದಲ್ಲಿ ಧರಿಸಬಹುದು.

vii) **ದರ್ಜೆಯ ಪದಕ** : ಮಹಿಳಾ ಕಬ್ ಮಾಸ್ಟರ್ ಮತ್ತು ಸಹಾಯಕ ಮಹಿಳಾ ಕಬ್ ಮಾಸ್ಟರ್‌ಗಳು ಪುರುಷ ಕಬ್ ಮಾಸ್ಟರ್ ಮತ್ತು ಸಹಾಯಕ ಕಬ್ ಮಾಸ್ಟರುಗಳಿಗೆ ವಿಧಿಸಿರುವ ದರ್ಜೆಯ ಪದಕಗಳನ್ನು ಧರಿಸತಕ್ಕದ್ದು, ಸಲ್ವಾರ್ ಮತ್ತು ಕಮೀಜ್, ಬ್ಲೌಸ್ ಮತ್ತು ಮಿಡಿ ಸ್ಕರ್ಟ್‌ಗಳನ್ನು ಧರಿಸಿದಾಗ ಎಡಜೇಬಿನ ಮೇಲುಗಡೆ; ಸೀರೆ ಮತ್ತು ಬ್ಲೌಸ್ ಧರಿಸಿದಾಗ ಬಲಜೇಬಿನ ಮೇಲುಗಡೆ ಅಥವಾ ಸೀರೆಯಿಂದ ಮುಚ್ಚಲ್ಪಡದೆ ಇರುವ ಭಾಗದಲ್ಲಿ ಧರಿಸತಕ್ಕದ್ದು.

viii) **ಕಾಲು ಚೀಲಗಳು** : ಕಪ್ಪು ಬಣ್ಣದ ಸಾಕ್ಸ್ ಧರಿಸಬಹುದು.

ix) **ಪಾದರಕ್ಷೆಗಳು** : ಕಪ್ಪು ಬಣ್ಣದ, ಚರ್ಮದ ಮುಚ್ಚಿದ ಷೂಗಳನ್ನು ಧರಿಸಬಹುದು.

x) **ಲೋಹಪದಕ:** ಸಾಮಾನ್ಯ ಉಡುಪಿನಲ್ಲಿರುವಾಗ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಲೋಹ ಪದಕವನ್ನು ಧರಿಸಬಹುದು.

xi) **ಸಿಳ್ಳೆದಾರ** : ಎಡಜೇಬಿನಲ್ಲಿ ಸಿಳ್ಳೆಯಿರುವಂತೆ, ಬೂದು ಲ್ಯಾನ್‌ಯಾರ್ಡ್‌ನ್ನು ಕಂಠದ ಸುತ್ತಲೂ ಧರಿಸಬಹುದು.

xii) **ಕೂದಲ ಟೇಪು** (ಹೇರ್ ರಿಬ್ಬನ್) : ಕಪ್ಪು ಬಣ್ಣದ, ಕೂದಲ ರಿಬ್ಬನ್ ಧರಿಸಬಹುದು.

xiii) **ಆಭರಣಗಳು** : ಮತಾಚಾರದಿಂದ ವಿಧಿಸಲ್ಪಟ್ಟ ಆಭರಣಗಳನ್ನಲ್ಲದೆ ಬೇರೆ ಯಾವುದನ್ನೂ ಧರಿಸಬಾರದು.

xiv) **ಓವರ್ ಕೋಟ್, ವಿಂಡ್ ಚೀಟರ್/ಜರ್ಸಿ** : ಸಾಗರ ನೀಲಿ (ನೆವಿಬ್ಲೂ) ಬಣ್ಣದ ಓವರ್ ಕೋಟ್, ವಿಂಡ್ ಚೀಟರ್ ಅಥವಾ ಜರ್ಸಿ ಚಳಿಗಾಲದಲ್ಲಿ ಮಾತ್ರ ಧರಿಸಬಹುದು.

6. ಷಟ್ಕ ಪದ್ಧತಿ

i) ಮರಿಗಳ ಹಿಂಡನ್ನು ಷಟ್ಕಗಳಾಗಿ ವಿಭಾಗಿಸತಕ್ಕದ್ದು. ಪ್ರತಿ ಷಟ್ಕದಲ್ಲಿ ಆ ಷಟ್ಕದ ಆರಾಳಿ (ಸಿಕ್ಸರ್) ಮತ್ತು ದ್ವಿತೀಯಕನೂ (ಸೆಕೆಂಡ್) ನೂ ಸೇರಿದಂತೆ ನಾಲ್ಕರಿಂದ ಆರು ಮರಿಗಳು ಇರಬಹುದು.

ii) ಆರಾಳಿಯೊಂದಿಗೆ ಸಮಾಲೋಚಿಸಿ ಪ್ರತಿಷಟ್ಕವೂ ಒಂದು ಬಣ್ಣದ ಹೆಸರನ್ನು ಆಯ್ದುಕೊಳ್ಳತಕ್ಕದ್ದು.

iii) ಸಮವಸ್ತ್ರದಲ್ಲಿರುವಾಗ ಷಟ್ಕದ ಪ್ರತಿಯೊಬ್ಬರೂ ಆ ಬಣ್ಣದ ತ್ರಿಕೋನ ಭುಜಪಟ್ಟಿ (ಷೋಲ್ಡರ್ ಪ್ಯಾಚ್) ಧರಿಸತಕ್ಕದ್ದು; ಭುಜ ಪಟ್ಟಿಯು 4 ಸೆಂ. ಮೀ. ಬಾಹುವುಳ್ಳ ಸಮಭುಜತ್ರಿಕೋನವಾಗಿದ್ದು, ಷಟ್ಕದ ಬಣ್ಣದ್ದಾಗಿರುತ್ತದೆ.

iv) **ಹಿರಿಯ ಆರಾಳಿ–ಅಣ್ಣ (ಸೀನಿಯರ್ ಸಿಕ್ಸರ್):** ಆರಾಳಿಗಳಲ್ಲಿ ಒಬ್ಬನನ್ನು ಕಬ್ ಮಾಸ್ಟರು ತಮ್ಮ ಸಹಾಯಕ್ಕಾಗಿ ಹಿರಿಯ ಆರಾಳಿ ಎಂದು ನೇಮಿಸುವರು. ಈತನೂ ಮರಿಯಂತೆಯೇ ಸಮವಸ್ತ್ರವನ್ನೂ ಪದಕವನ್ನೂ ಧರಿಸತಕ್ಕದ್ದು; ಜೊತೆಗೆ ಎಡತೋಳಿನ ಮೇಲೆ ಮೊಳಕೈಗೂ ಭುಜಕ್ಕೂ ನಡುವೆ ಎರಡು ಸೆಂ.ಮೀ. ಅಂತರದಲ್ಲಿ ಒಂದು ಸೆಂ.ಮೀ. ಅಗಲದ ನೀಲಿಯ ಉಣ್ಣೆ ಅಥವಾ ಹತ್ತಿಯ ಮೂರು ಪಟ್ಟಿಗಳನ್ನುಳ್ಳ ತೋಳುಬಂದಿಯನ್ನು ಧರಿಸತಕ್ಕದ್ದು.

v) **ಆರಾಳಿ (ಸಿಕ್ಸರ್):** ಅರು ಮರಿಗಳ ಷಟ್ಕವನ್ನು ನಡೆಯಿಸಿಕೊಂಡು ಬರಲು ಕಬ್ ಮಾಸ್ಟರು ನಿಯಮಿಸಿರುವ ಒಬ್ಬ ಮರಿಯೇ ಆರಾಳಿ. ಈತನೂ ಮರಿಯಂತೆಯೇ ಸಮವಸ್ತ್ರವನ್ನೂ ಪದಕವನ್ನೂ ಧರಿಸತಕ್ಕದ್ದು. ಜೊತೆಗೆ ಎಡ ತೋಳಿನ ಮೇಲೆ ಮೊಳಕೈಗೂ ಭುಜಕ್ಕೂ ನಡುವೆ ಎರಡೆರಡು ಸೆಂ.ಮೀ. ಅಂತರದಲ್ಲಿ ಒಂದು ಸೆಂ.ಮೀ. ಅಗಲದ ನೀಲಿಯ ಉಣ್ಣೆ ಅಥವಾ ಹತ್ತಿಯ ಎರಡು ಪಟ್ಟಿಗಳನ್ನುಳ್ಳ ತೋಳುಬಂದಿಯನ್ನು ಧರಿಸತಕ್ಕದ್ದು.

vi) **ದ್ವಿತೀಯಕ (ಸೆಕೆಂಡ್):** ಸಂಬಂಧಪಟ್ಟ ಆರಾಳಿಯೊಂದಿಗೆ ಸಮಾಲೋಚಿಸಿ ಕಬ್ ಮಾಸ್ಟರು ನಿಯಮಿಸಿರುವ ಒಬ್ಬ ಮರಿಯೇ ದ್ವಿತೀಯಕ; ದ್ವಿತೀಯಕನು ಆರಾಳಿಗೆ ಸಹಾಯಮಾಡಿಕೊಂಡಿದ್ದು ಆತನ ಗೈರುಹಾಜರಿನಲ್ಲಿ ಆತನ ಸ್ಥಾನದಲ್ಲಿರತಕ್ಕದ್ದು. ಈತನೂ ಮರಿಯಂತೆಯೇ ಸಮವಸ್ತ್ರವನ್ನೂ ಪದಕವನ್ನೂ ಧರಿಸತಕ್ಕದ್ದು ಮತ್ತು ಜೊತೆಗೆ ಎಡತೋಳಿನ ಮೇಲೆ ಮೊಳಕೈಗೂ ಭುಜಕ್ಕೂ ನಡುವೆ ಒಂದು ಸೆಂ. ಮೀ. ಅಗಲದ ನೀಲಿಯ ಉಣ್ಣೆ ಅಥವಾ ಹತ್ತಿ ಪಟ್ಟಿಯನ್ನುಳ್ಳ ಒಂದು ತೋಳು ಬಂದಿಯನ್ನು ಧರಿಸತಕ್ಕದ್ದು.

vii) **ಆರಾಳಿಗಳ ಸಭೆ (ಸಿಕ್ಸರ್ಸ್ ಕೌನ್ಸಿಲ್):** ಆರಾಳಿಗಳ ಸಭೆಯಲ್ಲಿ ಕಬ್ ಮಾಸ್ಟರ್, ಸಹಾಯಕ ಕಬ್ ಮಾಸ್ಟರ್ ಮತ್ತು ಆರಾಳಿಗಳೂ ಇರತಕ್ಕದ್ದು. ದ್ವಿತೀಯುಕರನ್ನು ಆಹ್ವಾನಿಸ ಬಹುದು. ಇದು ಹಿಂಡಿನ ಒಳವ್ಯವಹಾರಗಳನ್ನು ನೋಡಿಕೊಳ್ಳತಕ್ಕದ್ದು.

7. **ಮರಿ (ಕಬ್)**

i) ಐದು ವರ್ಷ ವಯಸ್ಸಾಗಿದ್ದು ಹತ್ತು ವರ್ಷ ತುಂಬದೆ ಇರುವ ಭಾರತದ ಪ್ರಜೆಯಾಗಿರುವ ಬಾಲಕನು ಉಮೇದುವಾರ (ರಿಕ್ರೂಟ್) ಆಗಿ ನೋಂದಾಯಿಸಲ್ಪಡಲು ಅರ್ಹನು.

ii) ಉಮೇದುವಾರನು ಮರಿಯಾಗಿ ದೀಕ್ಷೆಪಡೆಯುವ ಮುನ್ನ 3 ತಿಂಗಳ ಅವಧಿಯಲ್ಲಿ, ಕಬ್ ಮಾಸ್ಟರಿಗೆ ತೃಪ್ತಿಯಾಗುವ ರೀತಿಯಲ್ಲಿ ಪ್ರಯತ್ನಿಸಿ ಈ ಕೆಳಕಂಡ ವಿಷಯಗಳನ್ನು ಮುಗಿಸಬೇಕು.

iii) **ಪ್ರವೇಶ್ ಪರೀಕ್ಷಾಂಶಗಳು**



1. ಕಾಡುಕತೆಗಳ ಮೊದಲಭಾಗ ಹೇಳಲು ಸಮರ್ಥನಾಗಿರಬೇಕು.
2. ಮರಿಗಳ ನಿಯಮ, ಧ್ಯೇಯವಾಕ್ಯ, ಪ್ರತಿಜ್ಞೆ ಮತ್ತು ಘನವಂದನೆ ಇವುಗಳನ್ನು ತಿಳಿದು ಅರ್ಥಮಾಡಿಕೊಂಡಿರಬೇಕು.
3. ಮರಿಗಳ ವಂದನೆ, ಎಡಗೈ ಕುಲುಕುವಿಕೆ ಸರಿಯಾಗಿ ಮಾಡಿ ತೋರಿಸಬೇಕು.
4. ತಾಯ್ತಂದೆಯರು ತಿಳಿಸಿದಂತೆ ನಿತ್ಯಪ್ರಾರ್ಥನೆ ಮಾಡಬೇಕು.
5. ಮನೆಯಲ್ಲಿ ದಿನಕ್ಕೊಂದುಪಕಾರ ಮಾಡಬೇಕು.
6. ಮರಿಗಳ ಪ್ರಾರ್ಥನೆ ಹೇಳಲು ಸಮರ್ಥನಿರಬೇಕು.

iv) ನಂತರ ಆತನು ಮರಿಗಳ ಪ್ರತಿಜ್ಞೆಯನ್ನು ಕಬ್ ಮಾಸ್ಟರಿಗೆ ನೀಡಿ ಮರಿಯಾಗಿ ದೀಕ್ಷೆ ಸ್ವೀಕರಿಸುವನು.

v) ಈಗ ಅವನು ಮರಿಗಳ ಸಮವಸ್ತ್ರ ಮತ್ತು ಸದಸ್ಯತ್ವ ಪದಕ ಧರಿಸಲು ಅರ್ಹನು.

ಬಟ್ಟೆಯ ಸದಸ್ಯತ್ವ ಪದಕವು ನೀಲಿ ಒಡಲಿನಲ್ಲಿ ಹಳದಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನವನ್ನು ಹೊಂದಿರುತ್ತದೆ. ಷರ್ಟ್‌ನ ಎಡಜೇಬಿನ ಮೇಲೆ ಅಥವಾ ಜರ್ಸಿಯಲ್ಲಿ ಅದೇ ಸ್ಥಳದಲ್ಲಿ ಇದನ್ನು ಧರಿಸಬೇಕು.

ಸದಸ್ಯತ್ವ ಪದಕವನ್ನು ಕಬ್ ಮಾಸ್ಟರರ ಶಿಫಾರಸ್ಸಿನ ಮೇಲೆ ಸ್ಥಳೀಯ/ ಜಿಲ್ಲಾ ಸಂಸ್ಥೆಯವರು ನೀಡುತ್ತಾರೆ.

ಗಮನಿಕೆ: ಎ. ಮರಿಗಳ ಧ್ಯೇಯವಾಕ್ಯ "ನೀವ್ ಸಾಧಿಸಿ".

ಬಿ. ಮರಿಗಳ ಪ್ರಾರ್ಥನಾ ಗೀತೆ (*ಹಂ ಹೈ ಛೋಟೆ ಛೋಟೆ ಬಾಲ್......*) ಯನ್ನು ಅಂಗೀಕರಿಸಿ ಅಭ್ಯಾಸ ಮಾಡತಕ್ಕದ್ದು.

ಸಿ. **ಮರಿಯ ಪ್ರತಿಜ್ಞೆ:**
ನನ್ನ ಕೈಲಾದ ಮಟ್ಟಿಗೆ
ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಮಾಡುತ್ತೇನೆ.
ಮರಿಗಳ ಹಿಂಡಿನ ನಿಯಮದಂತೆ ನಡೆಮಕೊಳ್ಳುತ್ತೇನೆ; ಮತ್ತು
ಪ್ರತಿದಿನವೂ ಒಂದು ಉಪಕಾರ ಮಾಡುತ್ತೇನೆ.
– ಎಂದು ಪ್ರತಿಜ್ಞೆ ಮಾಡುತ್ತೇನೆ.
(ಇಚ್ಚಿಸುವುದಾದರೆ "ದೇವರು" ಪದದ ಬದಲು "ಧರ್ಮ" ಪದವನ್ನು ಉಪಯೋಗಿಸಬಹುದು.)

ಡಿ. **ಮರಿಗಳ ನಿಯಮ :**

i) ಮರಿಯು ವಿಧೇಯನಾಗಿ ಇರುವನು

ii) ಮರಿಯು ನಿರ್ಮಲನು ಮತ್ತು ವಿನಯಿ.

ಇ. **ಮರಿಯ ವಂದನೆ :** ಬಲತೋಳನ್ನು ಭುಜದ ಮಟ್ಟಕ್ಕೆ ಚುರುಕಾಗಿ ಎತ್ತರಿಸಿ. ಅಂಗೈ ಮುಂದಾಗಿ, ಹೆಬ್ಬೆರಳಿನಿಂದ ಕಡೆಯ ಎರಡು ಬೆರಳುಗಳನ್ನು ಒತ್ತಿ, ತೋರ್ಬೆರಳು ಹಣೆಗೆ ಸೋಕಿರುವಂತೆ ಮೊದಲ ಎರಡು ಬೆರಳುಗಳನ್ನು ಅಗಲಿಸಿ, ಮರಿಗಳ ವಂದನೆ ಮಾಡಬೇಕು. ವಂದನೆಯ ಬಳಿಕ ತೋಳನ್ನು ಚುರುಕಾಗಿ ಕೆಳಗಿಳಿಸಿಬೇಕು.

8. ಮರಿಯ ಸಮವಸ್ತ್ರ:

ಮರಿಯು ಈ ಮುಂದಿನಂತೆ ಸಮವಸ್ತ್ರ ಧರಿಸತಕ್ಕದ್ದು

i) **ಷರ್ಟ್ :** ಅರ್ಧ ತೋಳು ಅಥವಾ ಮೇಲಕ್ಕೆ ಮಡಿಚಿದ ತೋಳುಗಳುಳ್ಳ ಎರಡು ಮುಚ್ಚಳವಿರುವ ಜೇಬುಗಳುಳ್ಳ, ಭುಜಪಟ್ಟಿಗಳನ್ನು ಹೊಂದಿದ ಬೂದುಬಣ್ಣದ ಷರ್ಟ್. ಛಳಿಯ ವೇಳೆ ತೋಳನ್ನು ಪೂರ್ತಿ ಕೆಳಕ್ಕೆ ಇಳಿಸಬಹುದು.

ii) **ನಿಕ್ಕರು :** ಸಾಗರ ನೀಲಿ ಬಣ್ಣದ್ದು.

iii) **ತಲೆಗೆ :** ರಾಷ್ಟ್ರಿಯ ಸಂಸ್ಥೆಯಿಂದ ಒದಗಿಸುವ ಹಳದಿ ಅಂಚು (ಪೈಪಿಂಗ್) ಮತ್ತು ತೋಳದ ಮರಿಯ ಗುರುತಿರುವ ನೀಲಿ ಟೋಪಿ. ತೋಳದ ಮರಿ ಗುರುತಿರುವ ರಾಷ್ಟ್ರೀಯ ಸಂಸ್ಥೆಯವರು ಒದಗಿಸುವ ನೀಲಿ ಪೇಟವನ್ನು ಸಿಖ್ಖರು ಧರಿಸಬಹುದು.

ಟೋಪಿ ಪದಕಕ್ಕೆ ಬದಲಾಗಿ ರುಮಾಲು ಪದಕವನ್ನು ರಾಷ್ಟ್ರೀಯ ಸಂಸ್ಥೆಯವರು ಪರಿಚಯಿಸಬಹುದು.

iv) **ಕಂಠವಸ್ತ್ರ :** ಗ್ರೂಪ್ ಬಣ್ಣದ ಮತ್ತು ಮಾದರಿಯ ತ್ರಿಕೋಣಾಕಾರದ ಕಂಠವಸ್ತ್ರವನ್ನು ಕತ್ತಿನ ಸುತ್ತಲೂ, ಭುಜದ ಪಟ್ಟಿಗಳ ಮೇಲೆ ಬರುವಂತೆ ಧರಿಸಬೇಕು. ಹಸಿರು, ನೇರಳೆ ಅಥವಾ ಹಳದಿ ಬಣ್ಣಗಳದ್ದಾಗಿರಬಾರದು. ಸ್ಥಳೀಯ/ಜಿಲ್ಲಾ ಸಂಸ್ಥೆಯಿಂದ ಅನುಮೋದಿತವಾಗಿರಬೇಕು. ಗಿಲ್ ವೆಲ್‌ವೋಗಲ್ (ಕಂಠ ವಸ್ತ್ರದ ಉಂಗುರ) ವಿನಹ ಬೇರೆ ವೋಗಲ್ ಧರಿಸಬಹುದು. ಕಂಠವಸ್ತ್ರದ ಎರಡು ಪಕ್ಕಗಳ ಉದ್ದವೂ ಕನಿಷ್ಠ 70 ಸೆಂ. ಮೀ. ಪರಮಾವಧಿ 80 ಸೆಂ.ಮೀ. ಇರತಕ್ಕದ್ದು.

v) **ನಡುಪಟ್ಟಿ (ಬೆಲ್ಟ್) :** ರಾಷ್ಟ್ರೀಯ ಸಂಸ್ಥೆ ಒದಗಿಸುವ , ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಿಲಕಕಟ್ಟು ಉಳ್ಳ ಬೂದುಬಣ್ಣದ ನವಾರು ಪಟ್ಟಿಯ ಬೆಲ್ಟು.

vi) **ಭುಜಪಟ್ಟಿ (ಷೋಲ್ಡರ್ ಪ್ಯಾಚ್) :** ಷಟ್ಕದ ಬಣ್ಣದ, ತಳ ನಾಲ್ಕು ಸೆಂ. ಮೀ. ಉದ್ದವಿರುವ, ಸಮಬಾಹು ತ್ರಿಕೋಣಾಕೃತಿಯ ವಸ್ತ್ರದ ಪಟ್ಟಿಯನ್ನು, ಎಡತೋಳಿನ ಮೇಲೆ, ಭುಜದ ಹೊಲಿಗೆಯ ಕೆಳಗೆ, ತುದಿಯು ಮೇಲಿರುವಂತೆ ಹೊಲಿದಿರಬೇಕು.

vii) **ಭುಜಪದಕ (ಷೋಲ್ಡರ್ ಬ್ಯಾಡ್ಜ್) :** ಆರರಿಂದ ಎಂಟು ಸೆಂ.ಮೀ. ಉದ್ದ, ಒಂದೂವರೆ ಸೆಂ.ಮೀ. ಅಗಲ ಇರುವ ಬಿಳಿ ಒಡಲಿನ ಮೇಲೆ ಕೆಂಪು ಅಕ್ಷರಗಳಲ್ಲಿ ಗ್ರೂಪ್ ಹೆಸರಿರುವ ಸ್ವಲ್ಪ ಭಾಗಿರುವ ಭುಜಪದಕವನ್ನು ಎರಡೂ ಭುಜಗಳ ಮೇಲೆ ಹೊಲಿಗೆಯ ಕೆಳಗೆ ಧರಿಸತಕ್ಕದ್ದು.

viii) **ಸದಸ್ಯತ್ವ ಪದಕ (ಮೆಂಬರ್‌ಷಿಪ್ ಬ್ಯಾಡ್ಜ್) :** ನೀಲಿ ಒಡಲಿನ ಮೇಲೆ ಹಳದಿಯಲ್ಲಿ ತ್ರಿದಳ ಕಮಲದಲ್ಲಿ ಗೈಡ್ ತ್ರಿದಳಪತ್ರವನ್ನೂ ಮಧ್ಯೆ ಧರ್ಮಚಕ್ರವನ್ನೂ ಒಳಗೊಂಡಿರುವ ಬಟ್ಟೆಯ ಪದಕವನ್ನು ಷರ್ಟಿನ ಎಡಜೇಬಿನ ಮಧ್ಯೆ ಜರ್ಸಿಯ ಅದೇ ಭಾಗದಲ್ಲಿ ಧರಿಸತಕ್ಕದ್ದು.

ix) **ವಿಶ್ವ ಸ್ಕೌಟ್ ಪದಕ :** ಸಮವಸ್ತ್ರದ ಷರ್ಟಿನ ಬಲಜೇಬಿನ ಮೇಲೆ ಧರಿಸತಕ್ಕದ್ದು.

x) **ಉದ್ದನೆಯ ಕಾಲುಚೀಲಗಳು :** ಕಪ್ಪು ಬಣ್ಣದ ಕಾಲುಚೀಲವನ್ನು ಧರಿಸಬಹುದು.

xi) **ಪಾದರಕ್ಷೆ :** ಕಪ್ಪು ಬಣ್ಣದ ಲೇಸ್ ಇರುವ ಷೂಗಳು

xii) **ಮೇಲಂಗಿ, ಬ್ಲೇಸರ್ ಅಥವಾ ಜಾಕೆಟ್ :** ಸಾಗರನೀಲಿ ಬಣ್ಣದ್ದನ್ನು ಛಳಿಗಾಲದಲ್ಲಿ ಮಾತ್ರ ಧರಿಸಬಹುದು.

xiii) **ಲೋಹದ ಪದಕ :** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಲೋಹದ ಪದಕವನ್ನು ಮಫ್ತಿ (ಸಾದಾ) ಉಡುಪಿನ ಮೇಲೆ ಧರಿಸಬಹುದು.

xiv) **ನಾಮಪಟ್ಟಿ :** ರಾಷ್ಟ್ರೀಯ ಸಂಸ್ಥೆಯವರು ಒದಗಿಸುವ The Bharat Scouts & Guides ಎಂಬ ಹೆಸರುಳ್ಳ ನಾಮಪಟ್ಟಿಯನ್ನು ಷರ್ಟಿನ ಬಲಜೇಬಿನ ಮೇಲ್ಭಾಗದಲ್ಲಿ ಧರಿಸಬಹುದು. ಈ ಪಟ್ಟಿಯ ಅಳತೆಯು 11 ಸೆಂ.ಮೀ. × 2 ಸೆಂ.ಮೀ. ಆಗಿದ್ದು ಅದರ ಬಲ ಮೂಲೆಯಲ್ಲಿ 2 ಸೆಂ.ಮೀ. × 3 ಸೆಂ.ಮೀ. ಅಳತೆಯ ರಾಷ್ಟ್ರಧ್ವಜದ ತ್ರಿವರ್ಣ ಹೊಂದಿದ್ದು, ಉಳಿದ ಭಾಗ The Bharat Scouts & Guides ಬರಹಕ್ಕಾಗಿ ಇರುತ್ತದೆ.

ಐಚ್ಛಿಕ ತೊಡಿಗೆ : ಆಟಪಾಠಗಳ ವೇಳೆಯಲ್ಲಿ, ಕಡು ನೀಲಿ ಬಣ್ಣದ ಜೀನ್ಸ್ / ಟ್ರೌಜರ್ / ನಿಕ್ಕರು; ಆಕಾಶ ನೀಲಿ ಬಣ್ಣದ ಕಾಲರ್ ಇರುವ ಟೀ-ಷರ್ಟ್ (ಟೀ ಷರ್ಟಿನ ಜೇಬಿನ ಮೇಲೆ ಸ್ಕೌಟ್‌ನ

ಲಾಂಛನವಿರ ಬೇಕು) ಕಡು ನೀಲಿ ಬಣ್ಣದ 'ಪಿ' ಕ್ಯಾಪ್ (ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಲಾಂಛನವಿರಬೇಕು) ಕಪ್ಪು ಬಣ್ಣದ ಸ್ಪೋರ್ಟ್ಸ್ ಷೂಸ್ ಧರಿಸಬಹುದು.

ಗಮನಿಸಿ : ಸಮವಸ್ತ್ರದಲ್ಲಿ P ಕ್ಯಾಪ್‌ಗೆ ಅನುಮತಿಯಿಲ್ಲ.

9. ಮರಿಯ ಪ್ರಗತಿಪರ ಯೋಜನೆ

1. ಐದು ವರ್ಷ ವಯಸ್ಸಾದ ಬಾಲಕನು ಉಮೇದುವಾರ ಮರಿಯಾಗಿ ನೋಂದಾಯಿಸಿಕೊಳ್ಳಬೇಕು. 3 ತಿಂಗಳ ಪರಿಶ್ರಮದ ಬಳಿಕ ಪ್ರವೇಶ ಪರೀಕ್ಷಾಂಶಗಳನ್ನು ಮುಗಿಸಿದ ಅನಂತರದಲ್ಲಿ 'ಮರಿ' ಆಗಿ ದೀಕ್ಷೆ ಕೊಡಬಹುದು.

2. ಪ್ರವೇಶ್ ಮರಿಯು ಕನಿಷ್ಠ ಮೂರು ತಿಂಗಳುಗಳ ಕಾಲ ಕೆಲಸ ಮಾಡಿ ಪ್ರಥಮಚರಣ್ ಪಡೆಯಲು ಅರ್ಹತೆ ಪಡೆಯುತ್ತಾನೆ.

3. ಪ್ರಥಮ ಚರಣ್ ಮರಿಯು ಕನಿಷ್ಠ ಮೂರು ತಿಂಗಳಕಾಲ ಕೆಲಸ ಮಾಡಿ ದ್ವಿತೀಯ ಚರಣ್ ಪಡೆಯಲು ಅರ್ಹತೆ ಪಡೆಯುತ್ತಾನೆ.

4. ದ್ವಿತೀಯ ಚರಣ್ ಮರಿಯು ಕನಿಷ್ಠ ಒಂಭತ್ತು ತಿಂಗಳಕಾಲ ಕೆಲಸ ಮಾಡಿ ತೃತೀಯ ಚರಣ್ ಪಡೆಯಲು ಅರ್ಹತೆ ಪಡೆಯುತ್ತಾನೆ.

5. ತೃತೀಯ ಚರಣ್ ಮರಿಯು ಕನಿಷ್ಠ ಒಂಭತ್ತು ತಿಂಗಳ ಕಾಲ ಕೆಲಸ ಮಾಡಿ ಚತುರ್ಥ ಚರಣ್ ಪಡೆಯಲು ಅರ್ಹತೆ ಪಡೆಯುತ್ತಾನೆ.

6. ಚತುರ್ಥ ಚರಣ್ ಪಡೆದ ಬಳಿಕ ಮರಿಯು ಮೊತ್ತದಲ್ಲಿ ಆರು ಪ್ರವೀಣತಾ ಪದಕಗಳನ್ನು ಸಂಪಾದಿಸಿದ್ದು, ಅವುಗಳಲ್ಲಿ ತೃತೀಯ ಚರಣ್ ಮತ್ತು ಚತುರ್ಥ ಚರಣ್ ಹಂತಗಳಲ್ಲಿ

ತಲಾ ಒಂದರಂತೆ ಮತ್ತು ಉಳಿದ ನಾಲ್ಕು ಪದಕಗಳನ್ನು ಪ್ರಾವೀಣತಾ ಪದಕಗಳ ಗುಂಪಿನಿಂದ (ಈ ಹಿಂದೆ ಗಳಿಸಿದ) ಗಳಿಸಿದ್ದರೆ ಆ ಮರಿಗೆ, "ಚಿನ್ನದಬಾಣ" ಎಂಬ ವಿಶೇಷ ಪದಕವನ್ನು 10 ವರ್ಷ ವಯಸ್ಸಿನೊಳಗಿರುವಾಗ ನೀಡಬಹುದು.

7. ಪ್ರವೇಶ್ ಮತ್ತು ಪ್ರಥಮ ಚರಣ್ ಪದಕಗಳಿಗೆ ತರಬೇತಿ ನೀಡಿ ಪರೀಕ್ಷಿಸಲು ಕಬ್ ಮಾಸ್ಟರು ವ್ಯವಸ್ಥೆ ಮಾಡಬಹುದು.

8. ದ್ವಿತೀಯ ಚರಣ್ ಬಳಿಕದ ಪದಕಗಳಿಗೆ ಹಾಗೂ ಎಲ್ಲಾ ಪ್ರವೀಣತಾ ಪದಕಗಳಿಗೆ ತರಬೇತಿ ಸಲಹೆಗಾರರು ಪರೀಕ್ಷಿಸಲು ವ್ಯವಸ್ಥೆ ಮಾಡುತ್ತಾರೆ.

10. ಪ್ರಥಮ ಚರಣ್ ಪರೀಕ್ಷಾಂಶಗಳು

1. ತನ್ನ ಸ್ವಂತ ಬಟ್ಟೆ, ಪಾದರಕ್ಷೆ ಮುಂತಾದ ವಸ್ತುಗಳನ್ನು ಒಪ್ಪವಾಗಿಯೂ, ಓರಣವಾಗಿಯೂ ಇಟ್ಟುಕೊಂಡಿರಲು ಬರಬೇಕು.

2. ಊಟಕ್ಕೆ ಮೊದಲು ಪ್ರಾರ್ಥನೆ ಮಾಡುವುದನ್ನು ಕಲಿತಿರಬೇಕು.

3. ಮನೆಯಲ್ಲಿ ಮತ್ತು ಶಾಲೆಯಲ್ಲಿ, ದಿನಕ್ಕೊಂದು ಉಪಕಾರವನ್ನು ಮಾಡಬೇಕು.

4. ಮಂಡಿ ಮಡಚುವ, ಕಾಲ್ಬೆರಳು ಮುಟ್ಟುವ ವ್ಯಾಯಾಮಗಳನ್ನು ತಪ್ಪದೆ ಮಾಡಬೇಕು. ಒಳ್ಳೆಯ ಆರೋಗ್ಯದ ಅಭ್ಯಾಸಗಳನ್ನು ಅನುಸರಿಸಬೇಕು.

5. ಅ) ಪಲ್ಟಿ ಹೊಡೆಯುವುದು (ಸೋಮರ್ ಸಾಲ್ಟ್)

ಆ) ಕಪ್ಪೆಜಿಗಿತ (ಲೀಪ್‌ಫ್ರಾಗ್)

ಇ) ಕುಪ್ಪಳ (ಹಾಪಿಂಗ್)

ಈ) ಹಗ್ಗದ ಜಿಗಿತ (ಸ್ಕಿಪ್ಪಿಂಗ್)

ಉ) ಸಮತೋಲನ ನಡಿಗೆ ಮತ್ತು

ಊ) ಮೂರು ಮೀಟರ್ ದೂರ ಚೆಂಡು ಎಸೆಯುವುದು ಮತ್ತು ಹಿಡಿಯುವುದು

ಈ ಶಾರೀರಿಕ ಚಟುವಟಿಕೆಗಳಲ್ಲಿ ಯಾವ ಎರಡನ್ನಾದರೂ ಅಭ್ಯಾಸ ಮಾಡಬೇಕು.

6. ಐದು ವಿವಿಧ ಎಲೆಗಳನ್ನೂ, ಐದು ವಿವಿಧ ಹೂಗಳನ್ನೂ ಸಂಗ್ರಹಿಸಿ ಅವುಗಳನ್ನು ಸ್ಕ್ರಾಪ್ ಬುಕ್‌ನಲ್ಲಿ ಅಂಟಿಸಿ ಹೆಸರಿಸಬೇಕು.

7. ಗಡಿಯಾರವನ್ನು ನೋಡಿ ವೇಳೆಯನ್ನು ಹೇಳಲು ಬರಬೇಕು.

8. ಸಮಗಂಟು ಮತ್ತು ಕೊಟ್ಟಿಗೆ ಗಂಟುಗಳನ್ನು ಹಾಕಬೇಕು. ಅವುಗಳ ಪ್ರಯೋಜನವನ್ನು ಕಲಿತಿರಬೇಕು. ಹಗ್ಗದ ಕೊನೆಯಲ್ಲಿ ಹುರಿ ಸುತ್ತುವುದು (ವಿಪ್ಪಿಂಗ್) ತಿಳಿದಿರಬೇಕು.

9. ಈ ಮುಂದಿನವುಗಳಲ್ಲಿ ಯಾವ ಮೂರನ್ನಾದರೂ ಮಾಡಿ ತೋರಿಸಬೇಕು.

ಅ) ಮರ ಅಥವಾ ಹಗ್ಗವನ್ನು ಏರಬೇಕು.

ಆ) ಬೈಸಿಕಲ್ ಮೇಲೆ ಸುರಕ್ಷಿತ ಸವಾರಿ ಮಾಡಬೇಕು

ಇ) ಅಂಚೆಗೆ ಹಾಕುವ ಲಕೋಟೆಯ ಮೇಲೆ (ಕವರ್) ವಿಳಾಸವನ್ನು ಬರೆದು, ಅಂಚೆ ಚೀಟಿ (ಸ್ಟಾಂಪ್) ಗಳನ್ನು ಅಂಟಿಸಲು ಬರಬೇಕು.

ಈ) ರಾಷ್ಟ್ರಧ್ವಜವನ್ನು ಹಾರಿಸುವಾಗ ಮತ್ತು ರಾಷ್ಟ್ರಗೀತೆಯನ್ನು ಹಾಡುವಾಗ / ನುಡಿಸುವಾಗ ಏನು ಮಾಡಬೇಕೆಂಬುದನ್ನು ತಿಳಿದಿರಬೇಕು.

ಉ) ದೀಕ್ಷೆ ಸ್ವೀಕರಿಸಿದ ವೇಳೆಯಲ್ಲಿ ನೀಡಲಾದ ಪದಕದ ಅರ್ಥವನ್ನು ಕಂಡುಕೊಳ್ಳಬೇಕು.

ಊ) ಮೂಲ ಸಂಪರ್ಕ ಸಾಧನಗಳಾದ ದೂರವಾಣಿ (ಟೆಲಿಫೋನ್) ಮತ್ತು ಸೆಲ್‌ಫೋನ್, ವೆಬ್‌ಫೋನ್, ಇಂಟರ್‌ನೆಟ್ ಬಳಸುವುದನ್ನು ತಿಳಿದಿರಬೇಕು.

10. ಮರಿಗಳ ಪ್ರಾರ್ಥನಾಗೀತೆ, ರಾಷ್ಟ್ರಗೀತೆ ಮತ್ತು ಧ್ವಜಗೀತೆ ಹಾಡಲು ಬರಬೇಕು.

11. "ಕಾ" ಬೇಟೆ ಆಡುವವರೆಗಿನ, ಕಾಡಿನ ಕತೆಯನ್ನು ಹೇಳಲು ಬರಬೇಕು.

12. "ಬಾಲೂ" ಮತ್ತು "ಬಘೀರ" ಅಭಿನಯಗಳನ್ನು ತಿಳಿದಿರಬೇಕು

13. ಕನಿಷ್ಠ 8 ಹಿಂಡಿನ ಸಭೆಗಳಲ್ಲಿ ಭಾಗವಹಿಸಿರಬೇಕು.

14. ತನ್ನ ತಾಯಿ ತಂದೆಯರ ಹೆಸರು, ವಿಳಾಸ, ಟೆಲಿಫೋನ್/ಮೊಬೈಲ್ ನಂಬರುಗಳನ್ನು ಹೇಳಲು ಬರಬೇಕು.

ಗಮನಿಕೆ :

ಅ) ಪ್ರವೇಶ್ ಪರೀಕ್ಷಾಂಶಗಳು ಮುಗಿದ ಬಳಿಕ ಕಬ್‌ಮಾಸ್ಟರರ ಶಿಫಾರಸಿನ ಮೇಲೆ ಸ್ಥಳೀಯ/ಜಿಲ್ಲಾ ಸಂಸ್ಥೆಯವರು ಪ್ರಥಮ ಚರಣ್ ಪದಕವನ್ನು ಮರಿಗೆ ನೀಡುತ್ತಾರೆ.

ಆ) ಇದನ್ನು ಬಲಜೇಬಿನ ಮುಚ್ಚಳಕ್ಕೆ ಹೊಂದಿಕೊಂಡಂತಿರುವ B.S.&G. ನಾಮಪಟ್ಟಿಯ ಮೇಲ್ಭಾಗದಲ್ಲಿ ಇದನ್ನು ಧರಿಸತಕ್ಕದ್ದು. ಜರ್ಸಿಯ ಮೇಲಾದರೆ ಅದೇ ಜಾಗದಲ್ಲಿ ಧರಿಸಬೇಕು.

ಇ) ಪ್ರಥಮ ಚರಣ್ ಪದಕವು ಬಟ್ಟೆಯದಾಗಿರುತ್ತದೆ. ನೀಲಿಯ ಒಡಲಿನ ಮೇಲೆ ಬಿಳಿಯ ಬಣ್ಣದ ಐದು ಕೊನೆಗಳುಳ್ಳ ನಕ್ಷತ್ರವಿರುತ್ತದೆ.

11. ದ್ವಿತೀಯ ಚರಣ್ ಪರೀಕ್ಷಾಂಶಗಳು

1. ನಿಮ್ಮ ಗ್ರಾಮ ಅಥವಾ ಸ್ಥಳದಲ್ಲಿ ವಾಸಿಸುತ್ತಿರುವ ಕೆಲವಾರು ಗಣ್ಯರುಗಳ ಬಗೆಗೆ ನಿಮ್ಮ ತಾಯಿ ತಂದೆಯವರನ್ನು ಕೇಳಿ ತಿಳಿದು. ಅವರುಗಳ ವಿಚಾರವಾಗಿ ಕಬ್ ಮಾಸ್ಟರರಿಗೆ ಹೇಳಬೇಕು.

2. ಮನೆಯಲ್ಲಿರುವ ಪೆಡುಸಾದ/(Brittle) ಹರಿತವಾದ/(Sharp) ಬೆಲೆಬಾಳುವ/(Valuable) ವಸ್ತುಗಳ ಬಗೆಗೆ ಯಾವ ರೀತಿಯ ಎಚ್ಚರಿಕೆ ವಹಿಸಬೇಕೆಂಬುದನ್ನು ತಾಯಿ ತಂದೆಯರಿಂದ ತಿಳಿದುಕೊಳ್ಳಬೇಕು.

3. ತ್ಯಾಜ್ಯ ವಸ್ತುಗಳಿಂದ ಕರಕುಶಲ ವಸ್ತು ವೊಂದನ್ನು ತಯಾರಿಸಬೇಕು ಅಥವಾ ಜೇಡಿ ಮಣ್ಣಿನಿಂದ ಒಂದು ಮಾದರಿಯನ್ನು ರೂಪಿಸಬೇಕು.

4. ತೋಟದಲ್ಲಿರುವ ಹೂಗಳನ್ನೂ, ನೆರೆಹೊರೆಯಲ್ಲಿರುವ ಮರಗಳನ್ನು ಅವಲೋಕಿಸಿ, ಅವುಗಳಲ್ಲಿ ಹತ್ತು ಹೂಗಳನ್ನು, ಹತ್ತು ಎಲೆಗಳನ್ನು ಅಂಟಿಸಿ ಒಂದು ದೃಶ್ಯ ಪಟವನ್ನು ತಯಾರಿಸಬೇಕು.

5. ಸಂಗ್ರಹಿಸಿದ ವಸ್ತುಗಳನ್ನು ಸುರಕ್ಷಿತವಾಗಿಡಲು ತಿಳಿದಿರಬೇಕು

6. ಮೂಲೆಗಂಟು ಮತ್ತು ಬೆಸ್ತರ ಗಂಟನ್ನು ಹಾಕಲು ಬರಬೇಕು. ಮತ್ತು ಅವುಗಳ ಉಪಯೋಗಗಳನ್ನು ಕಾಣಿಸಬೇಕು.

7. ಸಣ್ಣ ಕೊಯ್ದು ಗಾಯ, ಸುಟ್ಟಗಾಯ ಮತ್ತು ತರಚು ಗಾಯಗಳಿಗೆ ಪ್ರಥಮ ಚಿಕಿತ್ಸೆ ಮಾಡಬೇಕು.

8. ಷಟ್ಕದೊಂದಿಗೆ, ಅಕೇಲರ ಮೇಲ್ವಿಚಾರಣೆಯಲ್ಲಿ ಶಾಲೆ ಅಥವಾ ಮೊಹಲ್ಲಾದಲ್ಲಿ ಒಂದು ಉಪಕಾರ (ಸೇವೆ) ಮಾಡಬೇಕು.

9. ಈ ಮುಂದೆ ಹೇಳಿರುವುದರಲ್ಲಿ ಯಾವುದಾದರೂ ಮೂರನ್ನು ಮಾಡಿ ತೋರಿಸಬೇಕು.

ಅ) ಒಂದು ತಿಂಗಳ ಮಟ್ಟಿಗಾದರೂ ಪ್ರತಿದಿನವೂ ತನ್ನ ಹಾಸಿಗೆಯನ್ನು ಮಲಗುವ ಮೊದಲು ಲಕ್ಷಣವಾಗಿ ಹಾಸಿಕೊಳ್ಳುವುದು ಮತ್ತು ಎದ್ದ ಬಳಿಕ ಒಪ್ಪವಾಗಿ ಮಡಿಸಿ ಇರಿಸುವುದು ಬರಬೇಕು.

ಆ) ರಾಷ್ಟ್ರಧ್ವಜದ ಪ್ರಾಮುಖ್ಯತೆಯನ್ನು ತಿಳಿದಿರಬೇಕು.

ಇ) ಬೀಜವನ್ನು ಬಿತ್ತಿ ಗಿಡವನ್ನು ಬೆಳೆಯಬೇಕು ಬೆಳವಣಿಗೆಯನ್ನು ಗುರುತು ಹಾಕಬೇಕು. ಅಕೇಲರಿಗೆ ವರದಿ ಒಪ್ಪಿಸಬೇಕು.

ಅಥವಾ

ಹಕ್ಕಿಗಳಿಗೆ ಆಹಾರ ಇರಿಸುವ ಸಾಧನ ಅಥವಾ ಚಿಲುಮೆಯನ್ನು ತಯಾರಿಸಿ, ಎರಡು ತಿಂಗಳಕಾಲ ನಿರ್ವಹಿಸಬೇಕು.

ಈ) ಇಷ್ಟವಾದ ಯಾವುದಾದರೂ ವಿಷಯವನ್ನು ಕುರಿತು ಒಂದು ಚಿತ್ರವನ್ನು ಬರೆಯಬೇಕು ಅಥವಾ ವರ್ಣಚಿತ್ರ ರಚಿಸಬೇಕು.

ಉ) ಲಾಂದ್ರವೊಂದನ್ನು ಶುಭ್ರಗೊಳಿಸಿ, ಬತ್ತಿಯನ್ನು ಹದಮಾಡಿ, ಎಣ್ಣೆ ಹಾಕಿ, ಹಚ್ಚಲೂ ಆರಿಸಲೂ ಬರಬೇಕು. ಬೆಂಕಿಕಡ್ಡಿ ಗೀರಿ ಮೋಂಬತ್ತಿ ಹಚ್ಚಲು ಬರಬೇಕು ಅಥವಾ ಎಮ್ಮರ್‌ಜೆನ್ಸಿ ಲ್ಯಾಂಪಿನ ಉಪಯೋಗ ತಿಳಿದಿರಬೇಕು ಮತ್ತು ಅದನ್ನು ವಿದ್ಯುತ್ ಪೂರಣ ಮಾಡಲು ಬರಬೇಕು.

ಊ) ಹತ್ತು ಪದಗಳಿಗೆ ಕಡಿಮೆ ಇರದ, ಬಾಯಿ ಮಾತಿನ ಸುದ್ಧಿಯೊಂದನ್ನು (ವರ್ಬಲ್ ಮೆಸೇಜ್) ನಿರ್ದಿಷ್ಟ ಮಾರ್ಗದಲ್ಲಿ ಕಾಲೋಟದಿಂದಾದರೆ ಐದು ನಿಮಿಷಗಳಲ್ಲಿ, ಸೈಕಲ್ ಮೇಲಾದರೆ 3 ನಿಮಿಷಗಳಲ್ಲಿ ಹೋಗಿ ಸರಿಯಾಗಿ ಹೇಳಿ ಬರಬೇಕು.

10. ಕನಿಷ್ಠ ಎರಡು ಸರ್ವಧರ್ಮ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸಿರಬೇಕು.

11. "ಕಿಂ" ಆಟದಲ್ಲಿ ಭಾಗವಹಿಸಿರಬೇಕು.

12. "ಬಘೀರ" ಅಭಿನಯದ ಬಗ್ಗೆ ತಿಳಿದಿರಬೇಕು.

13. ಸಂರಕ್ಷಣೆಯ (Conservation) ಮೂರು "R" ಗಳ ಬಗ್ಗೆ ಎಂದರೆ ಕಡಿಮೆ (ರೆಡ್ಯೂಸ್) ಮಾಡುವುದು; ಮನರ್ನವೀಕರಣ (ರಿಸೈಕಲ್) ಮತ್ತು ಪುನರುಪಯೋಗ (ರೀಯೂಸ್) ತಿಳಿದಿರಬೇಕು.

14. ಅರ್ಧ ಕಿ.ಮೀ. ಗೆ ಕಡಿಮೆ ಇಲ್ಲದ, ಒಂದು ಕೀ.ಮೀ. ದೂರ ಮೀರದ ಗುರುತು ಹಾಕಿದ ದಾರಿಯನ್ನು (ಟ್ರೇಯ್ಲ್) ಕ್ರಮಿಸಬೇಕು.

15. ಪ್ರಥಮ ಚರಣ್ ಬಳಿಕ ಕನಿಷ್ಠ ಎಂಟು ಹಿಂಡಿನ ಸಭೆಗಳಲ್ಲಿ ಭಾಗವಹಿಸಿರಬೇಕು.

ಗಮನಿಕೆ :

ಅ) ಪರೀಕ್ಷಾಂಶಗಳು ಮುಗಿದ ಬಳಿಕ ಪ್ರಥಮ ಚರಣ್ ಮರಿಗೆ ದ್ವಿತೀಯ ಚರಣ್ ಪದಕವನ್ನು ಕೊಡಲಾಗುವುದು. ಇದನ್ನು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯವರು, ತರಬೇತಿ ಸಲಹಾದಾರರು / ಪರೀಕ್ಷಕರ ಶಿಪಾರಸ್ಸಿನ ಮೇಲೆ

ಕೊಡುವರು. ಇವರುಗಳನ್ನು ಪದಕ ಸಮಿತಿಯು ನೇಮಕ ಮಾಡಿ, ಪರೀಕ್ಷಿಸಲು ವ್ಯವಸ್ಥೆ ಮಾಡುತ್ತದೆ.

ಆ) ದ್ವಿತೀಯ ಚರಣ ಪದಕವು ನೀಲಿಯ ಒಡಲಿನ ಮೇಲೆ, 5 ಮೊನೆಗಳುಳ್ಳ ಎರಡು ಬಿಳಿಯ ನಕ್ಷತ್ರಗಳನ್ನು ಹೊಂದಿರುತ್ತದೆ.

ಇ) ಸಮವಸ್ತ್ರದಲ್ಲಿ ಪ್ರಥಮ ಚರಣ್ ಪದಕದ ಬದಲು ಅದೇ ಸ್ಥಳದಲ್ಲಿ ದ್ವಿತೀಯ ಚರಣ್ ಪದಕವನ್ನು ಧರಿಸಬೇಕು.

12. ತೃತೀಯ ಚರಣ್ ಪರೀಕ್ಷಾಂಶಗಳು

1. ಉಪಯುಕ್ತ ಕರಕುಶಲ ವಸ್ತುವೊಂದನ್ನು ತಯಾರಿಸಿ, ಸ್ಥಳೀಯವಾಗಿರುವ ಭಿನ್ನಸಾಮರ್ಥ್ಯದ ಮಗುವೊಂದಕ್ಕೆ ಕೊಡಬೇಕು.
2. ದಿಕ್ಸೂಚಿಯ ಎಂಟು ಮುಖ್ಯ ದಿಕ್ಕುಗಳನ್ನು ತಿಳಿದಿರಬೇಕು.
3. ನಿಮ್ಮ ಗ್ರಾಮ/ನಗರದ ರೈಲು, ಬಸ್ಸು, ಬ್ಯಾಂಕು, ಪೋಸ್ಟ್ ಆಫೀಸ್, ಆಸ್ಪತ್ರೆ, ಶಾಲೆ ಮತ್ತು ಕಾಲೇಜುಗಳ ಬಗ್ಗೆ ತಿಳುವಳಿಕೆ ಇರಬೇಕು.
4. ಉಳುಕಿಗೆ ಮತ್ತು ಕುಟುಕು ಗಾಯಗಳಿಗೆ ಪ್ರಥಮ ಚಿಕಿತ್ಸೆ ಮಾಡಲು ಬರಬೇಕು ಮತ್ತು ಗಾಯವನ್ನು ಸ್ವಚ್ಛಗೊಳಿಸಲು ಬರಬೇಕು.
5. ದತ್ತು ತೆಗೆದುಕೊಂಡಿರುವ ಸಾರ್ವಜನಿಕ ಸ್ಥಳವೊಂದರಲ್ಲಿ ಹಿಂಡಿನ ಉಪಕಾರ (ಸೇವೆ) ಚಟುವಟಿಕೆಯೊಂದರಲ್ಲಿ ಭಾಗವಹಿಸಬೇಕು.
6. ಇಂದ್ರಿಯ ತರಬೇತಿ ಆಟಗಳಲ್ಲಿ ಕನಿಷ್ಠ ಮೂರರಲ್ಲಾದರೂ ಭಾಗವಹಿಸಬೇಕು.
7. ಹಿಂಡಿನೊಡನೆ ಒಂದು ದಿನದ ಚಾರಣ ಹೋಗಿರಬೇಕು.
8. ತನಗಿಂತಲೂ ಎಳೆಯ ವಯಸ್ಸಿನ ಮಗುವೊಂದಕ್ಕೆ ನೈರ್ಮಲ್ಯದ ಅಭ್ಯಾಸಗಳಲ್ಲಿ ಸಹಾಯ ಮಾಡಬೇಕು.

9. ಅ) ಸಾಮಾಜಿಕ ರೀತಿಯಲ್ಲಿ ಅತಿಥಿಗಳನ್ನು ಸ್ವಾಗತಿಸಲು ಮತ್ತು ಬರಮಾಡಿಕೊಳ್ಳಲು ತಿಳಿದಿರಬೇಕು.

   ಆ) ತಣ್ಣನೆಯ/ಬಿಸಿಯ ಪಾನೀಯವನ್ನು ತಯಾರಿಸಿ, ನೀಡಬೇಕು.

   ಇ) ವಿಶೇಷ ಸಂದರ್ಭಕ್ಕಾಗಿ "ಶುಭಾಶಯಪತ್ರ"ವನ್ನು ತಯಾರಿಸಬೇಕು.

10. ಈ ಮುಂದಿನ ಆರು ಪ್ರವೀಣತಾ ಪದಕಗಳಲ್ಲಿ ಒಂದಕ್ಕೆ ಅರ್ಹತೆ ಪಡೆದಿರಬೇಕು.

   ಅ) ಸಂವೀಕ್ಷಕ

   ಆ) ತಂಡ ಆಟಗಾರ

   ಇ) ಗೃಹಕರ್ಮಿ

   ಈ) ಮನರಂಜಕ

   ಉ) ಮಾರ್ಗದರ್ಶಿ

   ಊ) ಕಂಪ್ಯೂಟರ್ ಜಾಗೃತಿ.

11. ಅ) ಅರಣ್ಯ ಕೌಶಲ ಗುರುತುಗಳನ್ನೂ (ವುಡ್‌ಕ್ರಾಪ್ಟ್ ಸೈನ್ಸ್) ಸಂಚಾರ ಚಿಹ್ನೆಗಳನ್ನೂ (ಟ್ರಾಫಿಕ್ ಸೈನ್ಸ್) ತಿಳಿದಿರಬೇಕು.

   ಆ) ಪಾದಚಾರಿಯ ಮತ್ತು ಸೈಕಲ್ ಸವಾರನ ರಸ್ತೆಯ ಸುರಕ್ಷಾ ನಿಯಮಗಳನ್ನು ತಿಳಿದಿರಬೇಕು.

   ಇ) ಗುರುತಿಸಲ್ಪಟ್ಟ ಮಾರ್ಗವನ್ನು ಒಂದು ಕಿ.ಮೀ. ವರೆಗೆ ಅನುಸರಿಸಬೇಕು.

12. "ತಬಾಕಿ" ಅಭಿನಯವನ್ನು ತಿಳಿದಿರಬೇಕು.

13. ದ್ವಿತೀಯ ಚರಣ್ ಬಳಿಕ ಎಂಟು ಹಿಂಡಿನ ಸಭೆಗಳಲ್ಲಿ ಭಾಗವಹಿಸಬೇಕು.

ಗಮನಿಕೆ :

ಪರೀಕ್ಷಾಂಶಗಳು ಮುಗಿದ ಬಳಿಕ ದ್ವಿತೀಯ ಚರಣ್ ಮರಿಗೆ ತೃತೀಯ ಚರಣ್ ಪದಕವನ್ನು ಕೊಡಲಾಗುವುದು. ಇದನ್ನು ಪದಕ ಸಮಿತಿಯು ನೇಮಿಸಿದ

ತರಬೇತಿ ಸಲಹಾಗಾರ / ಪರೀಕ್ಷಕರ ಶಿಪಾರಸ್ಸಿನ ಮೇಲೆ, ಸ್ಥಳೀಯ/ಜಿಲ್ಲಾ ಸಂಸ್ಥೆಯು ನೀಡುತ್ತದೆ. ಪದಕ ಸಮಿತಿಯೇ ಪರೀಕ್ಷಾಂಶಗಳ ಪರೀಕ್ಷೆಗೆ ವ್ಯವಸ್ಥೆ ಮಾಡುತ್ತದೆ. ತೃತೀಯ ಚರಣ ಪದಕವು ನೀಲಿಯ ಒಡಲಿನ ಮೇಲೆ ಮೂರು ಬಿಳಿಯ, ಐದು ಮೊನೆಗಳುಳ್ಳ ನಕ್ಷತ್ರಗಳಿರುತ್ತವೆ. ಸಮವಸ್ತ್ರದಲ್ಲಿ ದ್ವಿತೀಯ ಚರಣ ಪದಕದ ಬದಲು ಅದೇ ಸ್ಥಳದಲ್ಲಿ ತೃತೀಯ ಚರಣ್ ಪದಕವನ್ನು ಧರಿಸಬೇಕು.

13. ಚತುರ್ಥಚರಣ್ ಪರೀಕ್ಷಾಂಶಗಳು

1. ತಮ್ಮ ಮುದ್ದಿನ ಪ್ರಾಣಿ ಅಥವಾ ಪಕ್ಷಿಯೊಂದನ್ನು ಸಾಕಿಕೊಂಡು. ಗಮನಿಸುತ್ತಾ ಮೂರು ತಿಂಗಳಾದರೂ ಅದರ ಸಂರಕ್ಷಣೆ ಮಾಡಬೇಕು.
2. ಹಿಂಡಿನ ರಾತ್ರಿ ಶಿಬಿರವೊಂದರಲ್ಲಿ ಭಾಗವಹಿಸಬೇಕು.
3. ಹಿಂಡಿನ ಅನ್ವೇಷಣೆಯಲ್ಲಿ ಭಾಗವಹಿಸಬೇಕು.
4. ಕುಣಿಕೆ ಗಂಟು ಮತ್ತು ಸುತ್ತೊಂದೆರಡು ಮಲಕಿನ ಗಂಟು ಹಾಕಲು ಬರಬೇಕು ಮತ್ತು ಅವುಗಳ ಉಪಯೋಗವನ್ನು ಕಾಣಿಸಬೇಕು.
5. ಪೋಸ್ಟ್ ಆಫೀಸ್ ಅಥವಾ ಬ್ಯಾಂಕ್‌ನಲ್ಲಿ ಸಣ್ಣ ಉಳಿತಾಯ ಖಾತೆಯೊಂದನ್ನು ತೆರೆಯಬೇಕು ಅಥವಾ ಸ್ಥಳೀಯವಾಗಿ ಎರಡು ಮರಗಳನ್ನು ನೆಟ್ಟು ಆರು ತಿಂಗಳಕಾಲ ಪೋಷಿಸಿ ಬೆಳೆಸಬೇಕು.
6. ಧಾರ್ಮಿಕ ಸಮಾರಂಭವೊಂದರಲ್ಲಿ ಭಾಗವಹಿಸಿ ನಿಮ್ಮ ಅನುಭವವನ್ನು ಕಬ್ ಮಾಸ್ಟರರೊಂದಿಗೆ ಹಂಚಿಕೊಳ್ಳಬೇಕು.
7. ಈ ಮುಂದಿನ ಪ್ರವೀಣತಾ ಪದಕಗಳಲ್ಲಿ ಒಂದಕ್ಕೆ ಅರ್ಹತೆ ಪಡೆಯ ಬೇಕು.

   ಅ) ವಿಶ್ವ ಸಂರಕ್ಷಣೆ (ವರ್ಲ್ಡ್ ಕನ್ಸರ್ವೇಷನ್)

   ಆ) ಪ್ರಥಮ ಚಿಕಿತ್ಸಕ (ಫಸ್ಟ್ ಏಯ್ಡರ್)

ಇ) ಸೈಕಲ್ ಸವಾರ (ಸೈಕ್ಲಿಸ್ಟ್)

ಈ) ತೋಟಗಾರ (ಗಾರ್ಡ್‌ನರ್)

ಉ) ಪುಸ್ತಕ ರಟ್ಟು ಕಟ್ಟುವವ (ಬುಕ್ ಬೈಂಡಿಂಗ್)

ಊ) ಪರಂಪರೆ (ಹೆರಿಟೇಜ್)

ಋ) ನಾನು ಮುಕ್ತವಾಗಿರುವಿಕೆ (ಫ್ರೀಬೀಯಿಂಗ್ ಮೀ)

8. ನಿಮ್ಮ ಆಸುಪಾಸಿನಲ್ಲಿ ಸ್ಕೌಟ್ ಪೆಟ್ರೋಲು ಅಥವಾ ತಂಡ ಸಭೆಯನ್ನು ಒಂದು ತಿಂಗಳ ಕಾಲ ಗಮನಿಸಿ, ಅದನ್ನು ಕಬ್ ಮಾಸ್ಟರರೊಂದಿಗೆ ಚರ್ಚಿಸುವುದು.

ಅಥವಾ

ನಿಮ್ಮ ನೆರೆಹೊರೆಯ ಐವರು ಸ್ಕೌಟ್‌ಗಳ ವಿಳಾಸಗಳನ್ನು ಸಂಗ್ರಹಿಸಿ, ಕಬ್ ಮಾಸ್ಟರಿಗೆ ಒಪ್ಪಿಸುವುದು.

9. ಇಬ್ಬರು ರಾಷ್ಟ್ರೀಯ ನಾಯಕರು/ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹೇಳಲು ಸಮರ್ಥರಿರಬೇಕು.

10. ವ್ಯಾಗ್ಸ್‌ನ "ಫ್ರೀಬೀಯಿಂಗ್ ಮೀ" ಯೋಜನೆಯಲ್ಲಿ ಭಾಗವಹಿಸಬೇಕು.

11. ದಿನನಿತ್ಯದಲ್ಲಿ ಸರಳವಾದ ಯೋಗವನ್ನು ತಿಳಿದು ಆಚರಿಸಬೇಕು.

12. "ವುಲ್ಫ್ ಕಬ್ಸ್ ಹ್ಯಾಂಡ್‌ಬುಕ್"ನ ಎರಡು ಕೈ ತುತ್ತುಗಳ ಬಗ್ಗೆ ಕಬ್ ಮಾಸ್ಟರರಿಂದ ತಿಳಿದಿರಬೇಕು.

13. "ಷೇರ್‌ಖಾನ್ ಸಾವಿನ ಅಭಿನಯ" ತಿಳಿದಿರಬೇಕು.

14. ತೃತೀಯ ಚರಣ್ ಬಳಿಕ ಎಂಟು ಹಿಂದಿನ ಸಭೆಗಳಲ್ಲಿ ಭಾಗವಹಿಸಿರಬೇಕು.

ಗಮನಿಕೆ :

ಅ) ಪರೀಕ್ಷಾಂಶಗಳು ಮುಗಿದ ಮೇಲೆ ತೃತೀಯ ಚರಣ್ ಮರಿಗೆ ಚತುರ್ಥ ಚರಣ್ ಪದಕವನ್ನು ನೀಡಲಾಗುವುದು. ಇದನ್ನು ಪದಕ ಸಮಿತಿಯವರು ನೇಮಿಸಿದ ಹಾಗೂ ಪರೀಕ್ಷೆ ಮಾಡಲು ವ್ಯವಸ್ಥೆ ಮಾಡಿದ ತರಬೇತಿ ಸಲಹೆದಾರರು/ಪದಕ ಪರೀಕ್ಷಕರುಗಳ ಶಿಫಾರಸ್ಸಿನ ಪ್ರಕಾರ, ಸ್ಥಳೀಯ/ಜಿಲ್ಲಾ ಸಂಸ್ಥೆಯವರು ಕೊಡುತ್ತಾರೆ.

ಆ) ಚತುರ್ಥ ಚರಣ್ ಪದಕದಲ್ಲಿ ನೀಲಿ ಒಡಲಿನ ಮೇಲೆ ಐದುಕೊನೆಗಳುಳ್ಳ ಮೂರು ನಕ್ಷತ್ರಗಳಿರುತ್ತವೆ. ಈ ನಕ್ಷತ್ರಗಳ ಕೆಳಗೆ ಬಾಣವಿರುತ್ತದೆ. ನಕ್ಷತ್ರಗಳೂ ಬಾಣವೂ ಬಿಳಿಯ ಬಣ್ಣದಲ್ಲಿರುತ್ತವೆ. ಈ ಪದಕವನ್ನು ಸಮವಸ್ತ್ರದಲ್ಲಿ ತೃತೀಯ ಚರಣ್ ಪದಕದ ಬದಲು ಅದೇ ಜಾಗದಲ್ಲಿ ಧರಿಸಬೇಕು.

ಇ) ಚತುರ್ಥ ಚರಣ್ ಪದಕವನ್ನು ರಾಜ್ಯ ಮುಖ್ಯ ಆಯುಕ್ತರು ಸಹಿ ಮಾಡಿದ ಪ್ರಮಾಣ ಪತ್ರದ ಜೊತೆಯಲ್ಲಿ ಪ್ರದಾನ ಮಾಡಲಾಗುವುದು.

14. ಮರಿಯ ಪ್ರವೀಣತಾ ಪದಕಗಳು

ಅ. ತೃತೀಯ ಚರಣ್ ಮರಿಯು ಯಾವುದಾದರೂ ಅಥವಾ ಉಳಿದ ಎಲ್ಲಾ ಪ್ರವೀಣತಾ ಪದಕಗಳನ್ನೂ ಗಳಿಸಬಹುದು.

ಆ. ಪ್ರವೀಣತಾ ಪದಕಗಳನ್ನು ಈ ಕೆಳಕಂಡಂತೆ ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ಗುಂಪು 1 – ಸಚ್ಚಾರಿತ್ರ್ಯ : ಪದಕದ ಬಣ್ಣ ನೀಲಿ

1. ಸಂಗ್ರಾಹಕ 2. ತೋಟಗಾರ 3. ಸಂವೀಕ್ಷಕ
4. ಮನರಂಜಕ 5. ಕಥೆ ಹೇಳುವವ. 6) ನಾನು ಸ್ವತಂತ್ರ

ಗುಂಪು 2 – ದೈಹಿಕ ಆರೋಗ್ಯ : ಪದಕದ ಬಣ್ಣ ಹಸಿರು

1. ವ್ಯಾಯಾಮ ಪಟು 2. ಸೈಕಲ್ ಸವಾರ
3. ಈಜುಗಾರ 4. ತಂಡ ಆಟಗಾರ

ಗುಂಪು 3 – ಹಸ್ತಕೌಶಲ : ಪದಕದ ಬಣ್ಣ ಹಳದಿ

1. ಚಿತ್ರಗಾರ 2. ಗೃಹಕಲೆಗಾರ
3. ಆಟಿಕೆ ಮಾಡುವವ 4. ಪುಸ್ತಕ ರಟ್ಟು ಕಟ್ಟುವವ
5. ಸೂಜಿ ಕೆಲಸಗಾರ

ಗುಂಪು 4 – ಸೇವೆ : ಪದಕದ ಬಣ್ಣ ಕೆಂಪು

1. ಬಾಣಸಿಗ 2. ಪ್ರಥಮ ಚಿಕಿತ್ಸಕ
3. ಮಾರ್ಗದರ್ಶಿ 4. ಮನೆ ತೈನಾತಿ

ಗುಂಪು–5 : ಸಂರಕ್ಷಣೆ ಮತ್ತು ತಾಂತ್ರಿಕತೆ : ಪದಕದ ಬಣ್ಣ ಕಿತ್ತಳೆ

1. ಕಂಪ್ಯೂಟರ್ ಅರಿವು 2. ಪರಂಪರೆ ಮರಿ 3. ವಿಶ್ವರಕ್ಷಣೆ

ಇ. ಈ ಪ್ರವೀಣತಾ ಪದಕಗಳಿಗೆ ಅಗತ್ಯವಾದ ವಿವರಗಳು ಅನುಬಂಧ ದಲ್ಲಿದೆ.

ಈ. ಎಲ್ಲಾ ಪ್ರವೀಣತಾ ಪದಕಗಳನ್ನೂ ಬಲತೋಳಿನ ಮೇಲೆ ಸಮಾನಾಂತರ ಸಾಲುಗಳಲ್ಲಿ ಧರಿಸತಕ್ಕದ್ದು.

15. ಬಂಗಾರದ ಬಾಣ (ಪದಕ)

ಅ) ಚತುರ್ಥ ಚರಣ ಮರಿ ಆಗಿ, ಒಟ್ಟು ಆರು ಪ್ರವೀಣತಾ ಪದಕಗಳನ್ನು (ತೃತೀಯ ಮತ್ತು ಚತುರ್ಥ ಚರಣ್‌ಗಳಲ್ಲಿ ಒಂದೊಂದು ಮತ್ತು ಉಳಿದ ನಾಲ್ಕು ಪ್ರಾವೀಣ್ಯತಾ ಪದಕಗಳ ಗುಂಪುಗಳಿಂದ) ಗಳಿಸಿರುವ ಮರಿಗೆ ವಿಶೇಷ ಪದಕ– **ಚಿನ್ನದಬಾಣ** ಪದಕವನ್ನು ಕೊಡತಕ್ಕದ್ದು. ಈ ಪದಕವನ್ನು ಮರಿಯು 10 ವರ್ಷವಯಸ್ಸು ಮೀರುವ ಮುನ್ನ ಕೊಡತಕ್ಕದ್ದು. ಈ ಪದಕದಲ್ಲಿ ನೀಲಿಯ ಒಡಲಿನ ಮೇಲೆ ಮಧ್ಯೆ ಭಾರತ್ ಸ್ಕೌಟ್ಸ್–ಗೈಡ್ಸ್ ಪದಕವೂ ಅದರ ಕೆಳಗೆ ಬಂಗಾರದ ಬಾಣವೂ, ಪದಕಕ್ಕೆ ಚಿನ್ನದ ಅಂಚೂ ಇರುತ್ತದೆ. ಬಂಗಾರದ ಬಾಣದ ಪದಕವನ್ನು ಎಡತೋಳಿನ ಮಧ್ಯಭಾಗದಲ್ಲಿ ಧರಿಸತಕ್ಕದ್ದು.

ಬಂಗಾರದ ಬಾಣ ಪದಕದ ಜೊತೆ ಮುಖ್ಯ ರಾಷ್ಟ್ರೀಯ ಆಯುಕ್ತರು ಸಹಿ ಮಾಡಿದ ಪ್ರಮಾಣ ಪತ್ರವನ್ನು ಕೊಡಲಾಗುವುದು. ಇದನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಅಧ್ಯಕ್ಷರು ವಿತರಣೆ ಮಾಡುವರು.

ಆ) ರಾಜ್ಯ ಮುಖ್ಯ ಆಯುಕ್ತರ ಶಿಫಾರಸ್ಸಿನ ಮೇಲೆ, ಮುಖ್ಯ ರಾಷ್ಟ್ರೀಯ ಆಯುಕ್ತರು, "ಬಂಗಾರದ ಬಾಣ" ಪದಕವನ್ನು ನೀಡಲೂ, ಅದರ ಪ್ರಮಾಣ ಪತ್ರ ನೀಡಲೂ ಅಂತಿಮ ಅಧಿಕಾರ ಹೊಂದಿರುತ್ತಾರೆ.

ಇ) "ಬಂಗಾರದ ಬಾಣ" ಪದಕ ಮುಖ್ಯ ಮಾಡುವ ಬಗ್ಗೆ ಮುಖ್ಯ ರಾಷ್ಟ್ರೀಯ ಆಯುಕ್ತರು ಆಗಾಗ್ಗೆ ಸೂಕ್ತ ನಿರ್ದೇಶನ ನೀಡುತ್ತಿರುತ್ತಾರೆ.

ಈ) ರಾಜ್ಯ ಸಂಸ್ಥೆಯು, ರಾಜ್ಯ ಸಂಘಟನಾ ಆಯುಕ್ತರ ಮೇಲ್ವಿಚಾರಣೆಯಲ್ಲಿ ಪುನರ್ ಪರೀಕ್ಷಾ ಶಿಬಿರವನ್ನು ಸಂಘಟಿಸುತ್ತದೆ.

ಉ) ಮುಂದುವರೆದ ತರಬೇತಿ ಪಡೆದು, ಸನ್ನದು ಹೊಂದಿರುವ ಕಬ್ ಮಾಸ್ಟರ್, "ಬಂಗಾರದ ಬಾಣ" ಮರಿಯನ್ನು ತಯಾರಿಸಬಹುದು.

ಊ) ಎಲ್ಲಾ ಪ್ರವೀಣತಾ ಪದಕಗಳನ್ನೂ, ಸ್ಥಳೀಯ ಜಿಲ್ಲಾ ಸಂಸ್ಥೆಯಿಂದ ನಿಯಮಿತರಾದ ಸ್ವತಂತ್ರ ಪರೀಕ್ಷಕರು ಪರೀಕ್ಷಿಸಬೇಕು. ರಾಷ್ಟ್ರೀಯ ಕಾರ್ಯಾಲಯ ದವರು ಒದಗಿಸಿರುವ "ನೋಂದಣಿ ಪತ್ರ"ಗಳಲ್ಲಿ ಎಲ್ಲಾ ಅವಶ್ಯಕ ವಿವರಗಳನ್ನೂ ನೀಡತಕ್ಕದ್ದು.

ಋ) ತನ್ನದೇ ಘಟಕಕ್ಕೆ, ಘಟಕ ನಾಯಕನು ಸ್ವತಂತ್ರ ಪರೀಕ್ಷಕನಾಗುವಂತಿಲ್ಲ.

ೠ) ಪ್ರಾದೇಶಿಕ ಕಾರ್ಯಾಲಯಕ್ಕೆ "ಬಂಗಾರದ ಬಾಣ" ಪದಕದ ನೋಂದಣಿ ಪತ್ರವನ್ನು ನಿವೇದಿಸುವ ವೇಳೆಯಲ್ಲಿ ಮರಿಗೆ 10 ವರ್ಷ ವಯಸ್ಸು ಮೀರಿರಬಾರದು.

ಎ) ಯಾವುದೇ ಕಬ್ ಮಾಸ್ಟರು ತನ್ನ ಹಿಂಡಿನಿಂದ ಇಂತಿಷ್ಟೇ ಮರಿಗಳನ್ನು "ಬಂಗಾರದ ಬಾಣ" ಪದಕಕ್ಕೆ ಶಿಫಾರಸ್ಸು ಮಾಡಬೇಕೆಂಬ ಪರಿಮಿತಿ ಇರುವುದಿಲ್ಲ.

16. ಮರಿಗಳಿಗೆ ಶಿಬಿರಗಳು

1. ಪ್ರಥಮ ಚರಣ್ ಪದಕವನ್ನು ಪಡೆದಿದ್ದು ಏಳು ವರ್ಷ ವಯಸ್ಸಾಗಿರುವ ಮರಿಯು ಮಾತ್ರ ಶಿಬಿರದಲ್ಲಿ ಭಾಗವಹಿಸಲು ಅರ್ಹನು.
2. ಮರಿಗಳ ಶಿಬಿರವು ಸಾಮಾನ್ಯವಾಗಿ ಮೂರು ರಾತ್ರಿಗಳಿಗೆ ಮೀರಬಾರದು.
3. ಮರಿಗಳ ಶಿಬಿರವು ಸಾಮಾನ್ಯವಾಗಿ ಸಾಕಷ್ಟು ಸುರಕ್ಷಾ ಕ್ರಮಗಳನ್ನು ಕೈಗೊಂಡಿರುವ ಖಾಯಂ ಕಟ್ಟಡ/ಗುಡಾರಗಳಲ್ಲಿ ಇರತಕ್ಕದ್ದು.
4. ಸೂಕ್ತ ವ್ಯವಸ್ಥೆಯನ್ನು ಕಾಪಾಡಲು ಶಿಬಿರ/ಚಾರಣ/ಹೊರಸಂಚಾರ ಗಳಿಗೆ ಕಬ್ ಮಾಸ್ಟರು ಸಹಿ ಮಾಡಿದ ಅನುಮತಿ ಪತ್ರ ನೀಡಬೇಕು. ಸಂಬಂಧಪಟ್ಟ ಜಿಲ್ಲಾ ಸಂಘಟನಾ ಆಯುಕ್ತರು ಆಯಾ ಹಿಂಡಿನ ಕಬ್ ಮಾಸ್ಟರಿಗೆ ಮಾತ್ರ "ಅನುಮತಿ ಪತ್ರ" ನೀಡುತ್ತಾರೆ.

5. ಆಯಾ ರಾಜ್ಯ ಆಯುಕ್ತರ ಲಿಖಿತ ಅನುಮತಿಯಿಲ್ಲದೆ ಮರಿಗಳ ಶಿಬಿರವನ್ನು ರಾಜ್ಯದ ಹೊರಗಡೆ ಏರ್ಪಡಿಸಕೂಡದು.

6. ಮರಿಗಳ ಶಿಬಿರದಲ್ಲಿ ಇಬ್ಬರಾದರೂ ವಯಸ್ಕನಾಯಕರಿರತಕ್ಕದ್ದು, ಶಿಬಿರದಲ್ಲಿರುವ ಪ್ರತಿ ಆರು ಮರಿಗಳಿಗೆ ಒಬ್ಬರಂತೆ ವಯಸ್ಕ ನಾಯಕರಿರಬಹುದು.

7. ಆಯಾ ಜಿಲ್ಲಾ ಆಯುಕ್ತರ ಲಿಖಿತ ಅನುಮತಿಯನ್ನು ಮುಂದಾಗಿ ಪಡೆಯದೆ ಕಬ್ ಮಾಸ್ಟರರಾಗಲಿ ಸಹಾಯಕ ಕಬ್ ಮಾಸ್ಟರರಾಗಲಿ ಮರಿಗಳ ಶಿಬಿರವನ್ನು ನಡೆಸಕೂಡದು.

ಆನಂದ, ಸುಖ, ಸಂತೋಷಗಳಿಗೆ ಪ್ರಮುಖ ಅಂಶಗಳು

1. ಯಾವುದನ್ನೂ ಗಂಭೀರವಾಗಿ ಪರಿಗಣಿಸಬೇಡಿ. ಪಾಲಿಗೆ ಬಂದದ್ದನ್ನು ಪಂಚಾಮೃತವೆನ್ನಿ. ಜೀವನವೊಂದು ಆಟವೆನ್ನಿ. ವಿಶ್ವವೊಂದು ಆಟದ ಬಯಲೆನ್ನಿ.
2. ನಿಮ್ಮ ಯೋಜನೆಗಳೂ. ಕೆಲಸಕಾರ್ಯಗಳೂ ಪ್ರೇಮಮಯವಾಗಿರಲಿ.

– ಬೇಡನ್ ಪೋವೆಲ್

ಅನುಬಂಧ 1

1. ಪ್ರವೀಣತಾ ಪದಕಗಳು

ಪ್ರತಿ ಬಾಲಕನೂ ತನ್ನ ಅಭಿರುಚಿಗೆ ತಕ್ಕಂತೆ ಹವ್ಯಾಸಗಳನ್ನೋ ಅಥವಾ ಕರಕುಶಲಕಲೆಗಳನ್ನೋ ಅಭಿವೃದ್ಧಿ ಪಡಿಸಿಕೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಪ್ರವೀಣತಾ ಪದಕಗಳನ್ನು ಅಳವಡಿಸಲಾಗಿದೆ. ಅವನು ಮುಂದೆ ಪ್ರಪಂಚದಲ್ಲಿ ಕಾಲಿಟ್ಟಾಗ ಧೈರ್ಯಗೆಡದೆ ಅಸಹಾಯಕನೆನಿಸಿದೆ ಇವುಗಳಲ್ಲಾವುದಾದರೂ ಒಂದನ್ನು ತನ್ನ ವೃತ್ತಿಯನ್ನಾಗಿಸಿಕೊಳ್ಳುವ ಅವಕಾಶ ಕಲ್ಪಿಸಬಹುದಾಗಿದೆ.

ಬಾಲಕನು ಯಾವುದಾದರೊಂದು ವೃತ್ತಿ ಅಥವಾ ಹವ್ಯಾಸವನ್ನು ಆರಿಸಿಕೊಂಡು ಅದರಲ್ಲಿ ಮುಂದುವರೆಯಲು ಉತ್ತೇಜನ ನೀಡುವುದು ಪದಕಗಳ ಉದ್ದೇಶವಾಗಿದೆಯೇ ಹೊರತು, ಅವನು ಅದರಲ್ಲಿ ಪೂರ್ಣ ಪ್ರಮಾಣದ ಪರಿಣಿತನೆಂದು ಪರಿಗಣಿಸುವುದಕ್ಕಲ್ಲ. ಹಾಗಾಗಿ ಹೊರಗಿನವರು ಅವನನ್ನು ಪರೀಕ್ಷಿಸಿ ಹೇಳಲು ವ್ಯವಸ್ಥೆ ಮಾಡಲಾಗಿದೆ. ಸ್ಕೌಟಿಂಗನ್ನು ಸಾಮರ್ಥ್ಯದ ಅಳತೆಗೋಲಾಗಿಸಿ, ವಿಧಿಯುಕ್ತವಾದ ಯೋಜನೆಯೆಂದರೆ, ಆಗ ಸ್ಕೌಟ್ ಶಿಕ್ಷಣದ ಮೌಲ್ಯವೂ ಉದ್ದೇಶವೂ ಮೂಲೆಗುಂಪಾಗಿ ಶಾಲೆಗಳಲ್ಲಿನ ಬೋಧನೆಯಾಗಿ, ಪರಿಣಿತ ಶಿಕ್ಷಕರಿಲ್ಲದೆ ಅವಸ್ಥೆ ಪಡಬೇಕಾಗುತ್ತದೆ.

ಎಲ್ಲಾ ಬಾಲಕರೂ ನಗುನಗುತ್ತಾ ಸ್ವಾಭಿವೃದ್ಧಿ ಹೊಂದಬೇಕು. ಆ ಅಭಿವೃದ್ಧಿಯು ಅವರ ಹೃದಯಾಂತರಾಳದಿಂದ ಬಂದ ಅನಿಸಿಕೆ ಆಗಬೇಕು. ಹೊರಗಿನಿಂದ ಕ್ರಮಬದ್ಧವಾದ ಶಿಕ್ಷಣವನ್ನು ಅವರ ಮೇಲೆ ಹೇರಬಾರದು ಇದು ನಮ್ಮ ಆಶಯವಾಗಿದೆ.

ಪ್ರತಿ ಅಥವಾ ಯಾವುದೇ ಬಾಲಕನು ಹವ್ಯಾಸಗಳನ್ನು ಆರಿಸಿಕೊಂಡು ತನ್ನ ಸಚ್ಚಾರಿತ್ರ್ಯ ಮತ್ತು ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು, ಕಬ್ ಮಾಸ್ಟರನು ಅವಕಾಶ ಮಾಡಿಕೊಟ್ಟು ಬಾಲಕನ ಕುತೂಹಲವನ್ನು ಕೆರಳಿಸುವುದೇ ಸ್ಕೌಟಿಂಗ್‌ನ ಪದಕ ಪದ್ಧತಿಯ ಉದ್ದೇಶವಾಗಿದೆ.

ಬೇಡನ್ ಪೋವೆಲ್

2. ಮರಿಗಳ ಪ್ರವೀಣತಾ ಪದಕಗಳನ್ನು ಈ ಕೆಳಗೆ ಕಾಣಿಸಿರುವಂತೆ ಐದು ಗುಂಪುಗಳಾಗಿ ವಿಂಗಡಿಸಲಾಗಿದೆ

ಗುಂಪು 1 – ಸಚ್ಚಾರಿತ್ರ್ಯ : ಪದಕದ ಬಣ್ಣ ನೀಲಿ

1. ಸಂಗ್ರಾಹಕ 2. ಮನರಂಜಕ 3. ನಾನು ಮುಕ್ತವಾಗಿರುವಿಕೆ
4. ತೋಟಗಾರ 5. ಸಂವೀಕ್ಷಕ 6. ಕತೆ ಹೇಳುವವ.

ಗುಂಪು 2 – ದೇಹ ದಾರ್ಢ್ಯ : ಪದಕದ ಬಣ್ಣ ಹಸಿರು

1. ವ್ಯಾಯಾಮ ಪಟು 2. ಸೈಕಲ್ ಸವಾರ
3. ಈಜುಗಾರ 4. ತಂಡ ಆಟಗಾರ

ಗುಂಪು 3 – ಕರಕುಶಲತೆ : ಪದಕದ ಬಣ್ಣ ಹಳದಿ

1. ಚಿತ್ರಗಾರ 2. ಪುಸ್ತಕ ರಟ್ಟು ಕಟ್ಟುವವ
3. ಗೃಹಕಲೆಗಾರ 4. ಸೂಜಿ ಕೆಲಸಗಾರ
5. ಆಟಿಕೆ ಮಾಡುವವ

ಗುಂಪು 4 – ಸೇವೆ : ಪದಕದ ಬಣ್ಣ ಕೆಂಪು

1. ಬಾಣಸಿಗ 2. ಪ್ರಥಮ ಚಿಕಿತ್ಸಕ
3. ಮಾರ್ಗದರ್ಶಿ 4. ಮನೆ ತೈನಾತಿ

ಗುಂಪು 5 – ಇತರೆ : ಸಂರಕ್ಷಣೆ ಮತ್ತು ತಾಂತ್ರಿಕತೆ : ಪದಕದ ಬಣ್ಣ ಕಿತ್ತಳೆ

1. ಕಂಪ್ಯೂಟರ್ ಅರಿವು 2. ಪರಂಪರೆ 3. ವಿಶ್ವ ಸಂರಕ್ಷಣೆ

ಅನುಬಂಧ 1

2. ಪ್ರವೀಣತಾ ಪದಕಗಳ ಪರೀಕ್ಷಾಂಶಗಳು

ಗುಂಪು 1 – ಸಚ್ಚಾರಿತ್ರ್ಯ

1. ಸಂಗ್ರಾಹಕ (Collector)



ಒಂದೇ ಗುಂಪಿಗೆ ಸೇರಿದ ವಸ್ತುಗಳನ್ನು ಅಂದವಾಗಿ, ಕ್ರಮಬದ್ಧವಾಗಿ ಸಂಗ್ರಹಿಸಿ ಮೂರು ತಿಂಗಳ ಅವಧಿಯಲ್ಲಿ ಅವುಗಳ ಬಗ್ಗೆ ಮಾಹಿತಿ ಪಡೆಯಬೇಕು. (ಯಾವ ವಸ್ತುಗಳನ್ನು ಸಂಗ್ರಹಿಸಬೇಕೆಂಬುದನ್ನು ಮರಿಗೇ ಬಿಡಬೇಕು).

ಸಲಹೆಗಳು ಈ ರೀತಿ ಇವೆ :

ಅಂಚೆ ಚೀಟಿಗಳು, ಅಂಚೆ ಗುರುತುಗಳು, ಚಿತ್ರ ಸಹಿತ ಅಂಚೆಕಾರ್ಡುಗಳು, ಬೆಂಕಿಪೊಟ್ಟಣದ ಮೇಲ್ಚಿತ್ರಗಳು, ನಾಣ್ಯಗಳು, ಗರಿಗಳು, ದೀಪದ ಹುಳು, ಪತಂಗಗಳು, ಎಲೆಗಳು ಹಾಗೂ ಹೂಗಳು (ಕೊನೆಯ ಎರಡು ವಸ್ತುಗಳು ಫೋಟೋಗಳಾಗಲೀ, ಒತ್ತು ಚಿತ್ರಗಳಾಗಲಿ, (ಕಾರ್ಬನ್ ಇಂಪ್ರೆಷನ್ಸ್) ಆಗಬಹುದು. ಕನಿಷ್ಠ 25 ವಸ್ತುಗಳನ್ನು ಸಂಗ್ರಹಿಸಬೇಕು.

ಅಥವಾ

ಕನಿಷ್ಠ ಮೂರು ತಿಂಗಳಕಾಲ ದಿನಚರಿ ಮತ್ತು ಮುಖ್ಯ ಘಟನೆಗಳನ್ನು ಟಿಪ್ಪಣಿ ಪುಸ್ತಕದಲ್ಲಿ ಬರೆಯಬೇಕು.

2. ತೋಟಗಾರ (Gardener)

i ಕನಿಷ್ಠ 1.5 ಚ. ಮೀ. ಜಾಗದಲ್ಲಿ ಮೂರು ತಿಂಗಳ ಅವಧಿಯಲ್ಲಿ ಮೂರು ತರಹ ತರಕಾರಿಗಳು ಅಥವಾ ಹೂಗಳನ್ನು ಬೆಳೆಯಬೇಕು.

ii ಯಾವುದೇ ಪ್ರದೇಶ ಅಥವಾ ತೋಟದಲ್ಲಿರುವ ಈ ಕೆಳಕಂಡವುಗಳಲ್ಲಿ ಕನಿಷ್ಠ ನಾಲ್ಕನ್ನು ಹೆಸರಿಸಬೇಕು.

ಅ) ಮರಗಳು ಅಥವಾ ಪೊದೆ ಗಿಡಗಳು.

ಆ) ಹೂಗಳು ಅಥವಾ ತರಕಾರಿಗಳು

ಇ) ಸಾಮಾನ್ಯ ಬೆಳೆದು ನಿಂತ ಫಸಲು

iii) ಮುಂದಿರುವ ವಸ್ತುಗಳನ್ನು ಉಪಯೋಗಿಸಲು ತಿಳಿದಿರಬೇಕು: ಸಲಿಕೆ, (ಫೋರ್ಕ್) ಗೋರು ಸನಿಕೆ (ಷವೆಲ್) ರೇಕ್ ಅಥವಾ ತತ್ಸಮ ಸ್ಥಳೀಯ ಉಪಕರಣಗಳು.

iv) ಆರು ಪುಟಗಳಿಗೆ ಕಡಿಮೆ ಇಲ್ಲದ ಒಂದು ಚಿಕ್ಕ ಟಿಪ್ಪಣಿ ಪುಸ್ತಕ ಮಾಡಿ. ಅದರ ಪುಟಗಳಲ್ಲಿ ಹೂ, ಎಲೆ ಅಥವಾ ತರಕಾರಿಗಳನ್ನು ಮಾದರಿ ಒತ್ತಿ ಇಡಬೇಕು. ಕನಿಷ್ಠ 12 ವಿಷಯಗಳನ್ನು ಕಾಣಿಸಬೇಕು.

ಸೂಚನೆ : ನಗರಗಳಲ್ಲಿನ ಹಿಂಡುಗಳು ತೋಟಮಾಡಲು ಸ್ಥಳಾವಕಾಶ ವಿಲ್ಲದೆಡೆ i ಮತ್ತು ii ರ ಬದಲಾಗಿ ಈ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬಹುದು.

i ಕಿಟಕಿ ಗಿಡ ಪೆಟ್ಟಿಗೆ (Window boxes) ಅಥವಾ ಎರಡು ಅಥವಾ ಹೆಚ್ಚು ಕುಂಡಗಳಲ್ಲಿ ಬೆಳೆಯುವ ಬಹುಕಾಲಿಕ ಗಿಡಗಳನ್ನು ಕನಿಷ್ಠ ಮೂರು ತಿಂಗಳ ಕಾಲ ಗಮನಿಸಿ, ಪೋಷಿಸಬೇಕು.

ii ಈ ಮುಂದಿನ ಗಿಡಗೆಂಟೆಗಳಲ್ಲಿ ಎರಡನ್ನು ಬೆಳೆಯಬೇಕು.

ಅ. ಹೂವಿನ ಅಥವಾ ತರಕಾರಿ ಗಡ್ಡೆಗಳು (ನೀರಿನಲ್ಲಿ ಮರಳಿನಲ್ಲಿ ಅಥವಾ ಮಣ್ಣಿನಲ್ಲಿ).

ಆ. ಸಾಸಿವೆ, ಕೊತ್ತಂಬರಿ / ಇತರೆ ಸೊಪ್ಪು, ಬಟಾಣಿ, ಕಲ್ಲಂಗಡಿ ಅಥವಾ ತಿಂಗಳ ಹುರುಳಿ (ಮೆತ್ತನೆಯ ಬಟ್ಟೆ ಅಥವಾ ಒತ್ತು ಕಾಗದದ ಮೇಲೆ).

3. ಸಂವೀಕ್ಷಕ (Observer)

i ಐದು ಭಾರತೀಯ ಮೃಗಗಳ ಅಥವಾ ಐದು ಭಾರತೀಯ ಪಕ್ಷಿಗಳ ಆಕಾರಗಳನ್ನು ಗಮನಿಸಿ, ಅಭ್ಯಾಸಗಳನ್ನು ತಿಳಿದಿದ್ದು, ಜೀವಂತ ಗುರುತಿಸಬೇಕು.

ಅಥವಾ

ಹತ್ತು ಹೂಗಳು ಅಥವಾ ಹತ್ತು ಭಾರತೀಯ ಮರಗಳು ಅಥವಾ ಪೊದೆ ಗಿಡಗಳು ಇವುಗಳನ್ನು ನೋಡಿದ ಕೂಡಲೇ ಹೆಸರಿಸಬೇಕು. ಮತ್ತು ಇವುಗಳಲ್ಲಿ ಯಾವುವು ಸಾಮಾನ್ಯ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ವಿಷಕಾರಿ ಎಂಬುದನ್ನು ತಿಳಿದಿರಬೇಕು.

ii) ಸ್ಥಳೀಯವಾಗಿ ವಿವಿಧ ಹಣ್ಣು, ಹೂ ತರಕಾರಿಗಳು ಯಾವ ಯಾವ ಕಾಲದಲ್ಲಿ ದೊರೆಯುತ್ತವೆ, ಮುಖ್ಯ ಬೆಳೆಗಳ ಸುಗ್ಗಿಕಾಲ ಯಾವುದು ಎಂದು ತಿಳಿದಿರಬೇಕು.

iii) 300 ಮೀ. ಗಿಂತ ದೂರವಲ್ಲದ ಅಜ್ಞಾತ ಸ್ಥಳಕ್ಕೆ ಪರೀಕ್ಷಕರು ನೀಡಿದ ಸೂಚನೆಗಳಿಗನುಸಾರವಾಗಿ ದಿಕ್ಸೂಚಿ ಸಹಾಯದಿಂದ ಅಥವಾ ನೆಲದ ಮೇಲೆ ಹಾಕಿರುವ ಸೂಚನೆಗಳಿಂದ ಅಥವಾ ಹೆಗ್ಗುರುತುಗಳ ಸಹಾಯದಿಂದ ದಾರಿ ಕಂಡು ಹಿಡಿಯಬೇಕು.

iv ಹದಿನಾರು ವಸ್ತುಗಳಲ್ಲಿ ಹನ್ನೆರಡು ವಸ್ತುಗಳನ್ನು ನೆನಪಿನ ಅಟದಲ್ಲಿ ನೆನಪಿಸಿಕೊಳ್ಳುವಂತಿರಬೇಕು.

ಸೂಚನೆ : ಸ್ಕೌಟ್ ದಳಗಳಲ್ಲಿ ಆಡಿಸುವ 'ಕಿಂ' ಆಟದಲ್ಲಿ ಅನುಸರಿಸುವ ರೀತಿಯನ್ನು ಬದಲಿಸಿ ಆಡಿಸಬೇಕಾದುದು ಸೂಕ್ತ.

4. ಮನರಂಜಕ (Entertrainer)

ಈ ಕೆಳಕಂಡ ಅಂಶಗಳಲ್ಲಿ ಮೂರನ್ನು ಮಾಡಲು ಶಕ್ತನಿರಬೇಕು.

i. ಸರಿಯಾದ ಧಾಟಿಯಲ್ಲಿ ಸರಳವಾದ ಸಂಗೀತವಾದ್ಯವನ್ನು ನುಡಿಸುವುದು. ಅಥವಾ ಸರಿಯಾದ ಧಾಟಿಯಲ್ಲಿ ಸರಳ ಸಂಗೀತ ಹಾಡುವುದು.

ii. ಕಿರು ಪ್ರಹಸನಗಳಲ್ಲಿ ಭಾಗವಹಿಸುವುದು.

iii. ಹಾಡಿಗೆ ತಕ್ಕುದಾದ ನಟನೆ ಹಾಗೂ ಚಲನೆಯೊಂದಿಗೆ ಹಾಡೊಂದನ್ನು ಹಾಡುವುದು.

iv ವೇಷ ಭೂಷಣದೊಂದಿಗೆ ಕಥಾನಿಕ, ಇಲ್ಲವೆ ಐತಿಹಾಸಿಕ ಪಾತ್ರದ ಅಭಿನಯ ಮಾಡುವುದು.

5. ಕತೆ ಹೇಳುವವ (Storyteller)

i. ಪರಿಣಾಮಕಾರಿಯಾಗಿ ಕತೆ ಹೇಳವುದು.

ii. "ಪಂಚತಂತ್ರ" ಅಥವಾ "ಜಾತಕ ಕತೆ" ಗಳಿಂದ ಆಯ್ದ ಕತೆಯನ್ನು ಅರ್ಥಮಾಡಿಕೊಂಡು, ಕಬ್ ಮಾಸ್ಟರಿಗೆ ಆ ಕತೆ ಹೇಳುವುದು.

iii. ತನ್ನ ಪ್ರಾಂತೀಯ ಭಾಷೆಯ ವಾರ್ತಾ ಪತ್ರಿಕೆಯಿಂದ ಕತೆಯೊಂದನ್ನು ಸಂಗ್ರಹಿಸಿ, ಅದನ್ನು ನಿಮ್ಮ ಷಟ್ಕದ ಸದಸ್ಯರಿಗೆ ಹೇಳುವುದು.

iv. ತನ್ನ ರಾಜ್ಯದ ಚಾರಿತ್ರಿಕ ವೀರ/ಧಾರ್ಮಿಕ ಗುರುವೊಬ್ಬರ ಜೀವನ ಚರಿತ್ರೆಯಿಂದ ಒಂದು ಸಂಘಟನೆಯನ್ನು ಆಯ್ದುಕೊಂಡು, ಅದನ್ನು ನಿರೂಪಿಸುವುದು.

6. ನಾನು ಮುಕ್ತವಾಗಿರುವಿಕೆ (Free being me)

ಈ ಕೆಳಗಿನದನ್ನು ಪೂರ್ತಿ ಮಾಡುವುದು.

i. ಎಫ್.ಬಿ.ಎಂ. ನ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ವ್ಯಾಗ್ಸ್ ಅವರ ಎಫ್.ಬಿ.ಎಂ. ಪದಕ ಪಡೆಯುವುದು.

ii. ನಿಮ್ಮ ಮನೆ ಮತ್ತು ಶಾಲೆಯಲ್ಲಿ ತತ್ಫಲ ಪ್ರಗತಿಯನ್ನು ಸಾಧಿಸುವ ಬಗ್ಗೆ, ನಿಮ್ಮ ನಡವಳಿಕೆ ಮತ್ತು ಮನೋವೃತ್ತಿಯ ಬದಲಾವಣೆಗಳ ಬಗ್ಗೆ ತಾಯಿ-ತಂದೆಯರಿಂದ ಮತ್ತು ಶಾಲಾ ಮಾಸ್ತರರಿಂದ ಪ್ರಮಾಣ ಪತ್ರ ಪಡೆಯುವುದು

ಗುಂಪು 2 – ದೈಹಿಕ ಆರೋಗ್ಯ

1. ಕ್ರೀಡಾಪಟು (Athlete))



ಈ ಮುಂದಿನ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು.

i. ಹತ್ತು ಸೆಕೆಂಡುಗಳಲ್ಲಿ 35 ಮೀ. ಓಡಬೇಕು.

ii. 0.6 ಮೀ ಎತ್ತರ ಜಿಗಿಯಬೇಕು.

iii. 1.8 ಮೀ. ಉದ್ದ ನೆಗೆಯಬೇಕು.

iv. 10.5 ಮೀ ಎತ್ತರದ ಹಗ್ಗ, ಕಂಬ ಅಥವಾ ತೆಂಗಿನ ಮರವನ್ನು ಏರಬೇಕು.

v. 152 ರಿಂದ 162 ಗ್ರಾಂ ತೂಕದ ಚೆಂಡು ಅಥವಾ ಕ್ರಿಕೆಟ್ ಚೆಂಡೊಂದನ್ನು 18.30 ಮೀ ದೂರ ಎಸೆಯಬೇಕು. ಮತ್ತು 9.15 ಮೀ. ದೂರದಿಂದ ಎಸೆದ ಚೆಂಡನ್ನು ಹಿಡಿಯಬೇಕು.

2. ಸೈಕಲ್ ಸವಾರ (Cyclist)

i. ಸೈಕಲ್ ಸವಾರಿ ತಿಳಿದಿರಬೇಕು

ii. ಸೈಕಲ್ ಒರೆಸುವುದು, ಎಣ್ಣೆ ಹಾಕುವುದು ತಿಳಿದಿರಬೇಕು.

iii. ಟ್ಯೂಬಿಗೆ ಗಾಳಿ ತುಂಬಲು ಮತ್ತು ವಾಲ್ವ್ ಜೋಡಿಸಲು ತಿಳಿದಿರಬೇಕು.

iv. ರಸ್ತೆಯ ಸಂಚಾರ ನಿಯಮಗಳನ್ನು ತಿಳಿದಿರಬೇಕು.

3. ಈಜುಗಾರ (Swimmer)

i. ಯಾವ ರೀತಿಯಲ್ಲಾದರೂ 25 ಮೀ. ಈಜಲು ಬರಬೇಕು.

ii. ಉಪ್ಪು ನೀರಿನಲ್ಲಿ 60 ಸೆಕೆಂಡ್ ಕಾಲ, ಅಥವಾ ಶುದ್ಧನೀರಿನಲ್ಲಿ 30 ಸೆಕೆಂಡ್ ಕಾಲ, ಬೆನ್ನಮೇಲೆ ತೇಲಬೇಕು. ಅಥವಾ ಉಪ್ಪುನೀರಿನಲ್ಲಾದರೆ ಎರಡು ನಿಮಿಷ ಕಾಲ, ಸಿಹಿ ನೀರಿನಲ್ಲಾದರೆ ಒಂದು ನಿಮಿಷ ಕಾಲ ನಿಲುವೀಜು (Tread) ಮಾಡಬೇಕು.

iii. 14 ಮೀ. ದೂರ ಬೆನ್ನಮೇಲೆ ಈಜಬೇಕು

iv. ನೀರಿನಲ್ಲಿ ಈಜುವಾಗ ಇಲ್ಲವೇ ನಿಂತಿರುವಾಗ ಮುಳುಗಿ ಏಳಬೇಕು. ಅಥವಾ ಹಲಗೆ ಅಥವಾ ದೋಣಿಯಿಂದ ಮೊಳಕಾಲಸುತ್ತ ಕೈ ಬಳಸಿ ಹಿಡಿದು ನೀರಿಗೆ ಜೇನು ಕುಡಿಕೆಯಂತೆ (Honey Pot) ಧುಮುಕುವುದು

4. ತಂಡ ಅಟಗಾರ (Team Player)

i. ಸುವ್ಯವಸ್ಥಿತ ತಂಡಗಳ ಆಟಗಾರನಾಗಿ ಕಾಲ್ಚೆಂಡು, ರೌಂಡರ್ಸ್ ಕ್ರಿಕೆಟ್, ಖೋಖೋ, ಕಬಡ್ಡಿ, ಆಟ್ಯಾಪಾಟ್ಯ ಅಥವಾ ಅದೇ ರೀತಿಯ ವ್ಯವಸ್ಥಿತ ತಂಡಗಳಲ್ಲಿ ನಿತ್ಯ ಆಟಗಾರನಾಗಿರಬೇಕು. (ತಂಡವು ಕಬ್ ಮಾಸ್ಟರ್ ಅಥವಾ ಮರಿಯ ಶಾಲಾ ಉಪಾಧ್ಯಾಯರು ಇಲ್ಲವೆ ಕಬ್‌ಮಾಸ್ಟರಿಂದ ಒಪ್ಪಿತವಾದ ವ್ಯಕ್ತಿಯ ಅಧೀನದಲ್ಲಿರಬೇಕು.)

ii. ಕನಿಷ್ಠ ಐದು ಪಂದ್ಯಗಳಲ್ಲಿ ಆಡಿರಬೇಕು. ತಂಡದ ನಾಯಕನಿಂದ ಇಲ್ಲವೇ ತಂಡದ ಜವಾಬ್ದಾರಿಯುತ ನಿರ್ವಾಹಕನಿಂದ ಕ್ರಿಡಾ ಮನೋಭಾವದ ಆಟಗಾರನೆಂದು ಶಿಫಾರಸು ಪಡೆದಿರಬೇಕು.

ಗುಂಪು 3 – ಕರಕುಶಲತೆ (Handicraft)

1. ಚಿತ್ರಗಾರ (Artist)

i. ಸೀಸದ ಕಡ್ಡಿ, ಕುಂಚ, ಪೆನ್ ಅಥವಾ ಬಣ್ಣದ ಬಳಪದಿಂದ ಘಟನೆ ಅಥವಾ ವ್ಯಕ್ತಿಚಿತ್ರದ ಸರಳ ಕತೆಯೊಂದನ್ನು 18 ಸೆಂ.ಮೀ × 13 ಸೆಂ.ಮೀ ಅಳತೆ ಕಾಗದದಲ್ಲಿ ಬಿಡಿಸಬೇಕು.

ii. ಈ ಕೆಳಗಿನವುಗಳಲ್ಲಿ ಒಂದನ್ನು ಮಾಡಬೇಕು

ಅ. ಮಸಿಪೆನ್ನು ಇಲ್ಲವೆ ಪೆನ್ಸಿಲ್‌ನಿಂದ ಪ್ರಾಣಿಯ ಇಲ್ಲವೆ ವ್ಯಕ್ತಿಯ ಚಿತ್ರವೊಂದನ್ನು ಬಿಡಿಸಬೇಕು.

ಆ) ಪ್ರಕೃತಿಯಲ್ಲಿ ಕಾಣುವ ಭೂದೃಶ್ಯ ಅಥವಾ ಸ್ತಬ್ಧ ಚಿತ್ರವನ್ನು ಬಿಡಿಸಬೇಕು.

ಇ) ಒಂದು ರೇಖಾ ಚಿತ್ರದ ಪುಸ್ತಕವನ್ನಿಟ್ಟು ಮೂರು ತಿಂಗಳ ಕಾಲದಲ್ಲಿ ಕನಿಷ್ಠ 12 ಚಿತ್ರಗಳನ್ನು ಬಿಡಿಸಬೇಕು.

ಈ) ಬೆಂಕಿಕಡ್ಡಿ ಸಹಾಯದಿಂದ ನಾಲ್ಕು ಚಿತ್ರಗಳಿಗೆ ಕಡಿಮೆ ಇಲ್ಲದಂತೆ ಚಿತ್ರಕತೆಯೊಂದನ್ನು ಬಿಡಿಸಬೇಕು.

ಉ) ಸೀಸದ ಕಡ್ಡಿ, ಕುಂಚ, ಲೇಖಣಿ ಅಥವಾ ಬಣ್ಣದ ಕಡ್ಡಿಗಳ ಸಹಾಯದಿಂದ ಸರಳ ಶುಭಾಶಯ ಕಾರ್ಡ್ ರಚಿಸಬೇಕು.

ಊ) ಮೇಣ, ಸಾಬೂನು, ಜೇಡಿಮಣ್ಣು, ರಟ್ಟು ಅಥವಾ ಸೂಕ್ತವಾದ ಇತರೆ ವಸ್ತುಗಳಿಂದ 20 ಸೆಂ. ಮೀ. ಗಿಂತ ಕಡಿಮೆ ಎತ್ತರವಲ್ಲದ ಮನುಷ್ಯ ಇಲ್ಲವೆ ಪ್ರಾಣಿಯ ಮಾದರಿ ರಚಿಸಬೇಕು.

ಸೂಚನೆ : ಮರಿಯ ಸ್ವಾಭಾವಿಕ ಆಸಕ್ತಿಗೆ ಪ್ರತಿ ಸಂದರ್ಭದಲ್ಲೂ ಉತ್ತೇಜನ ನೀಡಬೇಕು. ಕೆಲಸದ ಭಾವ ಮತ್ತು ಗಾಢತೆಗಳನ್ನೂ, ಶೈಕ್ಷಣಿಕ ನಿಯಮಗಳನ್ನೂ ಪಾಲಿಸುವಂತೆ ಪ್ರೇರೇಪಿಸಬೇಕು.

2. ಗೃಹ ಕಲೆಗಾರ (Home Craft)



ಸೂಜಿಗೆ ದಾರ ಪೋಣಿಸಿ ಗುಂಡಿ ಹೊಲಿಯಬೇಕು. ಅಲ್ಲದೆ ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಮಾಡಬೇಕು

ಅ. ಪ್ರಯೋಜನಕಾರಿ ವಸ್ತುವೊಂದನ್ನು ಹೆಣೆಯಬೇಕು ಅಥವಾ ಕಸೂತಿ ಹಾಕಬೇಕು

ಆ. ಕೈಚೀಲ ಅಥವ ಜೋಲಿಗೆ (ಝೂಲಾ, ಜೋಕಾಲಿ) ಮಾದರಿಯನ್ನು ಹೆಣೆಯಬೇಕು.

ಇ. ಕ್ಯಾನ್‌ವಾಸ್ ಮೇಲೆ ಅಡ್ಡ ಹೊಲಿಗೆಯಿಂದ ಒಂದು ವಿನ್ಯಾಸವನ್ನು ಬಿಡಿಸಬೇಕು.

ಈ. ಕ್ಯಾನ್‌ವಾಸ್ ಇಲ್ಲವೆ ಗೋಣಿ ತಾಟಿನ ಮೇಲೆ, ಕಂಬಳಿ ಅಥವಾ ಚಾಪೆ ಮಾಡಬೇಕು.

ಉ. ಜೆರ್ಸಿ ಅಥವಾ ಕಾಲುಚೀಲದ ಕಿಂಡಿಯನ್ನು ದಾರದಿಂದ ಎಳೆ ತುಂಬೇಕು. ಅಥವಾ ಹರಿದಿರುವುದನ್ನು ತೇಪೆ ಹಾಕಬೇಕು.

ಊ. ತನ್ನ ಕಂಠವಸ್ತ್ರವನ್ನು ಒಗೆದು ಇಸ್ತ್ರಿ ಮಾಡಿಕೊಳ್ಳಬೇಕು.

ಋ. ಕಸಪೊರಕೆ ಮತ್ತು ಕಸದ ಬುಟ್ಟಿಯನ್ನು ಮಾಡಬೇಕು.

ೠ. ತಾಳೆಗರಿಯಿಂದ ಉಪಯೋಗಿ ವಸ್ತುವೊಂದನ್ನು ಹೆಣೆಯಬೇಕು.

ಎ. ಮಂಚದ ನವಾರುಪಟ್ಟಿ ಬಲೆಯನ್ನು ಹೆಣೆಯಬೇಕು.

ಏ. ಒಣಹುಲ್ಲಿನಿಂದ ಚಾಪೆ ತಯಾರಿಸಬೇಕು.

ಐ. ತಕಲಿ ಅಥವಾ ಚರಕದ ಸಹಾಯದಿಂದ 50 ಮೀ ದಾರ ತೆಗೆಯಬೇಕು.

ಒ. ಗ್ರಾಮ್ಯ ರೀತಿಯಲ್ಲಿ ಗೋಡೆ ಅಥವಾ ನೆಲಕ್ಕೆ ಬಣ್ಣ ಬಳಿಯಬೇಕು.

ಓ. ಹುಲ್ಲುಗರಿ, ಬೆತ್ತ, ಜೊಂಡು ಅಥವಾ ಬಿದರಿನಿಂದ ಒಂದು ವಸ್ತುವನ್ನು ತಯಾರಿಸಬೇಕು.

3. ಆಟಿಕೆ ಮಾಡುವವ (Toy Maker)



i. ದೇವದಾರು ಮರದ ಶಂಖು (Fir Cone), ಚೂರು ಪಾರು ಬಟ್ಟೆ, ಕಾಗದ, ಗೂಟ ಇಲ್ಲವೆ ಮೊಳೆ ಮುಂತಾದ ಅನುಪಯುಕ್ತ ವಸ್ತುಗಳಿಂದ ಎಂಜಿನ್, ಮೋಟಾರುಕಾರು, ಗೊಂಬೆ ಇಲ್ಲವೆ ಪ್ರಾಣಿಯೊಂದನ್ನು ಮಾಡಬೇಕು. ಅಥವಾ ಯೋಗ್ಯ ಪ್ರಮಾಣ ಮತ್ತು ಬಣ್ಣಗಳಲ್ಲಿ ಹೊಲದ ಕಣ, ಕಾಡುಪ್ರಾಣಿ, ಪೀಠೋಪಕರಣಗಳ ಕುಟೀರ, ಪ್ರಾಣಿಗಳಿರುವ ಉದ್ಯಾನ ಮುಂತಾದ ಸಂಕೀರ್ಣ ಆಟಿಕೆಗಳನ್ನು ತಯಾರಿಸಬೇಕು.

ii. ಈ ಕೆಳಗಿನವುಗಳಲ್ಲಿ ಮೂರನ್ನು ಮಾಡಬೇಕು.

ಅ) ಕಾಲುಚೀಲ ಅಥವಾ ಹಳೆಯ ವಸ್ತುವಿನಿಂದ ಆಟಿಕೆ ಮಾಡುವುದು.

ಆ) ಪುಟ್ಟ ಮಗು/ಶಿಶುವಿಗೆ ಉಪಯೋಗವಾಗುವ ಆಟಿಕೆ ಮಾಡಬೇಕು.

ಅಥವಾ

ಸ್ಕ್ರಾಪ್ ಬುಕ್ ಅನ್ನು ಕ್ರಮವಾಗಿ, ಒಪ್ಪವಾಗಿ ರಚಿಸಬೇಕು.

ಇ) ಗೊಂಬೆಗಳ ಪೀಠೋಪಕರಣ/ಜೇಡಿಮಣ್ಣಿನಿಂದ ಹಕ್ಕಿಗಳ ಹಿಂಡು ಪ್ರಾಣಿಗಳ ಗುಂಪು/ಮೀನುಗಳು/ಪತಂಗಗಳನ್ನು ಮಾಡುವುದು. ಗಾಳಿಪಟ ಹಾರಿಸುತ್ತಿರುವ ಬೊಂಬೆ ಮಾಡುವುದು.

ಈ) ತಾನೇ ಕೋರಿಕೊಂಡ ಯಾವುದಾದರೊಂದು ಆಟಿಕೆ ಮಾಡುವುದು.

ಸೂಚನೆ : ದ್ವಿತೀಯ ಚರಣ್ ಪರೀಕ್ಷೆಗೆಂದು ತಯಾರಿಸಿದ ಯಾವ ವಸ್ತುವನ್ನೂ ಈ ಪದಕವನ್ನು ಸಂಪಾದಿಸಲು ಪರಿಗಣಿಸಲಾಗುವುದಿಲ್ಲ.

4. ಪುಸ್ತಕ ರಟ್ಟು ಕಟ್ಟುವುದು (Book Binder)



ಪುಸ್ತಕ ಹೊಲೆಯುವಲ್ಲಿ ಈ ಕೆಳಕಂಡ ಅಂಶಗಳನ್ನು ಅಭ್ಯಾಸ ಮಾಡಿರಬೇಕು.

i. ಒಂದು ಸಾಧಾರಣ ಬರೆಯುವ ಪುಸ್ತಕವನ್ನು ಹೊಲಿದು ರಟ್ಟು ಹಾಕಬೇಕು.

ii. ಎರಡೂ ಕಡೆಯ ಕೊನೆಯ ಹಾಳೆಗಳನ್ನು ಹಿಡಿದು ಹಿಂಭಾಗದಲ್ಲಿ ಅಂಟನ್ನು ಸವರಬೇಕು. ಹಾಗೂ ಬಟ್ಟೆಯನ್ನು ಸುತ್ತಿ ಅಂಟಿಸಬೇಕು ಅದರ ಮೇಲೆ ಎರಡನೆ ಗಟ್ಟಿ ಪದರವನ್ನು ಅಂಟಿಸಬೇಕು.

iii. ಕಾರ್ಡ್ ಬೋರ್ಡ್‌ನ್ನು ಕತ್ತರಿಸಿ ಅದಕ್ಕೆ ಬಟ್ಟೆ ಅಥವಾ ಕಾಗದವನ್ನು ಪೆಟ್ಟಿಗೆ ಮಾದರಿ ಅಂಟಿಸಬೇಕು. ಅದರೊಳಗೆ ಪುಸ್ತಕವನ್ನು ಇಡಬೇಕು.

iv. ಅವಶ್ಯಕತೆ ಇರುವ ಬಾಲಕನಿಗೆ ಒಂದು ಪಠ್ಯಪುಸ್ತಕ್ಕೆ ರಟ್ಟು ಹಾಕಿ ಕೊಡಬೇಕು.

v. ಪುಸ್ತಕಕ್ಕೆ ರಟ್ಟು ಹಾಕುವುದನ್ನು ಇನ್ನೊಬ್ಬ ಮರಿಗೆ ಅಥವಾ ಗೆಳೆಯನಿಗೆ ಕಲಿಸಬೇಕು.

ಗುಂಪು 4 – ಸೇವೆ (Service)

1. ಬಾಣಸಿಗ (Cook)

i. ಬೆಂಕಿಯ ಬಗ್ಗೆ ಸಾಮಾನ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿದಿರಬೇಕು.

ii. ಬಯಲಿನಲ್ಲಿ ಸೌದೆ ಜೋಡಿಸಿ ಬೆಂಕಿ ಮಾಡಿ ಚಪಾತಿ ಅಥವಾ ಉಪ್ಪಿಟ್ಟು ಅಥವಾ ದಾಲಿಯಾ ಮಾಡಲು ಬರಬೇಕು.

iii. ಅನ್ನ–ಸಾರು ಅಥವಾ ಪಲ್ಯ ಅಥವಾ ಹುಗ್ಗಿ (ಪೊಂಗಲ್) ಮಾಡಲು ಅಥವಾ ಮೊಟ್ಟೆಯನ್ನು ಬೇಯಿಸಲು ತಿಳಿದಿರಬೇಕು.

2. ಪ್ರಥಮ ಚಿಕಿತ್ಸಕ (First Aider)

i. ತರಚುಗಾಯವನ್ನು ಶುದ್ಧಗೊಳಿಸಲು ಮತ್ತು ಚಿಕಿತ್ಸೆ ಮಾಡಲು ತಿಳಿದಿರಬೇಕು.

ii. ಹಸ್ತ, ಪಾದ. ಮತ್ತು ಮೊಣಕಾಲಿನ ಗಾಯಗಳಿಗೆ ಚಿಕಿತ್ಸೆ ಮಾಡಿ ಮುಮ್ಮೂಲೆ ಪಟ್ಟಿ ಕಟ್ಟಲು ಬರಬೇಕು ಮತ್ತು ದೊಡ್ಡ ತೂಗು ಹಾಕಲು ಮತ್ತು ತಲೆ ಪಟ್ಟಿ ಕಟ್ಟಲು ಬರಬೇಕು.

iii. ಮೂಗಿನ ರಕ್ತಸ್ರಾವ ನಿಲ್ಲಿಸಲು ತಿಳಿದಿರಬೇಕು.

iv. ಮೈಮೇಲಿನ ಬಟ್ಟೆಗೆ ಹತ್ತಿದ ಬೆಂಕಿ ಆರಿಸುವುದು ಹೇಗೆಂದು ತಿಳಿದಿರಬೇಕು. ಮತ್ತು ಸಣ್ಣ ರೀತಿಯ ಸುಟ್ಟ ಮತ್ತು ಬೆಂದ ಗಾಯಗಳಿಗೆ ಚಿಕಿತ್ಸೆ, ಉಸಿರುಕಟ್ಟಿದಾಗ, ಹುಳುಕುಟುಕಿದಾಗ, ಹಾವು ಕಚ್ಚಿದಾಗ ಚಿಕಿತ್ಸೆ ಮಾಡುವುದು ಹೇಗೆಂದು ತಿಳಿದಿರಬೇಕು.

v. ಹಿರಿಯರ ಸಹಾಯ ಕೋರುವ ಅಗತ್ಯತೆಯು ಅವನಿಗೆ ತಿಳಿದಿದೆ ಎಂಬುದನ್ನು ಕಾಣಿಸಬೇಕು.

vi. ಗಾಬರಿ/ಆಘಾತ ಸಂದರ್ಭದಲ್ಲಿ ಸರಳ ಚಿಕಿತ್ಸೆ ತಿಳಿದಿರಬೇಕು.

vii. ಉಳುಕಿಗೆ ಚಿಕಿತ್ಸೆ ತಿಳಿದಿರಬೇಕು, ಮತ್ತು ಪಾದದ ಕೀಲು/ಹರಡು (ankle), ಉಳುಕಿದಾಗ ಪಟ್ಟಿ ಕಟ್ಟುವುದು ಹೇಗೆಂದು ತಿಳಿದಿರಬೇಕು.

3. ಮಾರ್ಗದರ್ಶಿ (Guide)



i. ಗ್ರಾಮಾಂತರದಲ್ಲಿ

ಅತ್ಯಂತ ಸಮೀಪದ ಅರಕ್ಷಕ ಠಾಣೆ, ಔಷಧಾಲಯ, ಆಸ್ಪತ್ರೆ, ಗ್ರಾಮೀಣ ವೈದ್ಯ ಅಥವಾ ಹಕೀಂ, ಸಮೀಪದ ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆ, ಧರ್ಮಶಾಲೆ ಅಥವಾ ಛತ್ರ, ಹತ್ತಿರದ ಅಂಚೆ ಮತ್ತು ತಂತಿ ಕಛೇರಿ, ವಿಶ್ರಾಂತಿ ಗೃಹ ಮತ್ತು ಪಶುವೈದ್ಯಶಾಲೆ ಇವುಗಳ ತಿಳುವಳಿಕೆ ಹೊಂದಿರಬೇಕು.

ಅಥವಾ

ii. ನಗರಗಳಲ್ಲಿ

ಅ. ಅತ್ಯಂತ ಸಮೀಪದ ಅರಕ್ಷಕಠಾಣೆ, ಡಾಕ್ಟರ್ ಮನೆ, ಔಷಧಿ ಅಂಗಡಿ. ಸಾರ್ವಜನಿಕ ದೂರವಾಣಿ ಕೇಂದ್ರ, ಅಗ್ನಿಶಾಮಕ ದಳ. ಬಸ್ ನಿಲ್ದಾಣ, ರೈಲು ನಿಲ್ದಾಣ. ಪೆಟ್ರೋಲ್ ಬಂಕ್, ವಾಹನ ದುರಸ್ತಿಸ್ಥಳ, ಉಪಹಾರಗೃಹ, ಅಂಚೆ ಮತ್ತು ತಂತಿ ಕಛೇರಿಗೆ ಹೋಗುವ ಮಾರ್ಗ ತಿಳಿದಿರಬೇಕು.

ಆ. ಅಗ್ನಿಶಾಮಕದಳ, ಪೋಲೀಸ್ ಮತ್ತು ಆಂಬುಲೆನ್ಸ್ ವಾಹನಗಳಿಗೆ ಕರೆ ನೀಡುವುದನ್ನು ತಿಳಿದಿರಬೇಕು.

ಇ. ಅಪರಿಚಿತರಿಗೆ ಸ್ಪಷ್ಟ ಮತ್ತು ಖಚಿತವಾದ ಮಾರ್ಗಸೂಚಿಯನ್ನು ವಿನಯವಾಗಿ ಮತ್ತು ಪ್ರಾಮಾಣಿಕವಾಗಿ ತಿಳಿಸುವುದನ್ನರಿತಿರಬೇಕು.

4. ಮನೆ ತೈನಾತಿ (House orderly)

i. ಆಲೂಗಡ್ಡೆಯನ್ನು ಸುಲಿದು, ಬೇಯಿಸಲು ಅಥವಾ ಕರಿಯಲು ಬರಬೇಕು.

ii. ಹಾಸಿಗೆ ಹಾಸುವುದು. ತಟ್ಟೆ ಮತ್ತು ಊಟದ ಪಾತ್ರೆ ಇತ್ಯಾದಿಗಳನ್ನು ತೊಳೆಯಲು ಬರಬೇಕು.

iii. ಕಿಟಕಿಗಳನ್ನು ಮತ್ತು ಅಲಂಕಾರಿಕ ಹಿತ್ತಾಳೆ ವಸ್ತುಗಳನ್ನು ಶುಭ್ರ ಪಡಿಸಬೇಕು.

iv. ಕೊಠಡಿಯನ್ನು ಗುಡಿಸಿ ಚೊಕ್ಕಟ ಮಾಡಬೇಕು. ಅಥವಾ ಮೇಜನ್ನು ಉಜ್ಜಿ, ಒರೆಸಲು ಬರಬೇಕು.

v. ಟೀ ಅಥವಾ ಕಾಫಿ ಅಥವಾ ಯಾವುದೇ ಬಿಸಿ ಪಾನೀಯ ಮಾಡಲು ತಿಳಿದಿರಬೇಕು.

ಗುಂಪು 5 – ಸಂರಕ್ಷಣೆ ಮತ್ತು ತಾಂತ್ರಿಕತೆ

1. ವಿಶ್ವ ಸಂರಕ್ಷಣೆ (World Conservation)

ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಮಾಡಬೇಕು.

ಅ. ಮೃಗಾಲಯ, ಸಸ್ಯೋದ್ಯಾನ, ನೈಸರ್ಗಿಕ, ಚಾರಿತ್ರಿಕ ವಸ್ತು ಸಂಗ್ರಹಾಲಯ ಗಳಿಗೆ ಭೇಟಿ ನೀಡುವುದು. ಅಥವಾ ವನ್ಯ ಜೀವಿಗಳ ಬಗೆಗಿನ ಚಲನಚಿತ್ರ ನೋಡುವುದು ಮತ್ತು ಆ ಬಗ್ಗೆ ತಾನು ಗಮನಿಸಿರುವುದನ್ನು ಪರೀಕ್ಷಕರಿಗೆ ತಿಳಿಸುವುದು.

ಆ. ಕನಿಷ್ಠ ಮೂರು ತಿಂಗಳವರೆಗೆ ತನ್ನದೇ ಆದ ಒಂದು ಸಾಕು ಪ್ರಾಣಿಯನ್ನು ಎಚ್ಚರವಹಿಸಿ ನೋಡಿಕೊಳ್ಳುವುದು.

ಇ. ಕಾಗದ–ಕಸ ಕಡ್ಡಿಗಳ ನಿರ್ಮಲೀಕರಣ ಕಾರ್ಯದಲ್ಲಿ ಸಾರ್ವಜನಿಕ ಉದ್ಯಾನ, ತೋಟ, ಶಾಲಾ ಆವರಣ ಅಥವಾ ಇತರ ಸಾರ್ವಜನಿಕ ಸ್ಥಳದಲ್ಲಿ ಪ್ರತಿ ಸಲ ಕನಿಷ್ಠ ಒಂದು ಗಂಟೆಯಂತೆ ಮೂರು ಗಂಟೆಗಳ ಕಾಲ ಕೆಲಸ ಮಾಡುವುದು.

ಈ. ತನ್ನ ಹಿಂಡಿನೊಂದಿಗೆ ಪ್ರಕೃತಿ ಅಧ್ಯಯನಕ್ಕಾಗಿ ಹೋಗಿದ್ದು ತನ್ನ ಸಂಗ್ರಹಗಳನ್ನು ದಾಖಲೆ ಪುಸ್ತಕದಲ್ಲಿ ಗುರುತಿಸುವುದು.

ಉ. ಪಕ್ಷಿಗಳ ಸ್ನಾನ ಮತ್ತು ಆಹಾರಕ್ಕಾಗಿ ಬೋಗುಣಿ ವ್ಯವಸ್ಥೆ (Bird Bath) ಮಾಡಿ ಅದನ್ನು ನೋಡಿಕೊಳ್ಳುವುದು.

ಊ. ಪಕ್ಷಿಗಳ ಗೂಡನ್ನು ರಚಿಸಿ ಸ್ಥಾಪಿಸುವುದು.

ಋ. ಬೆಳೆಗಳಿಲ್ಲದ ಜಾಗದಲ್ಲಿ ಸಸ್ಯಗಳನ್ನಾಗಲೀ, ಹುಲ್ಲನ್ನಾಗಲೀ, ಬೆಳೆಸಿ, ಕನಿಷ್ಠ ಮೂರು ತಿಂಗಳ ಕಾಲ ರಕ್ಷಿಸುವುದು.

ೠ. ತೋಟ ಅಥವಾ ಹಿತ್ತಲಿನಲ್ಲಿ ಕಾಂಪೋಸ್ಟ್ ಗೊಬ್ಬರಗುಂಡಿ ಆರಂಭಿಸುವುದು.

ಎ. ಭೂ ಸವೆತದ ಅಪಾಯ ತೋರಿಸಿಕೊಡುವುದು ಅದನ್ನು ತಡೆಗಟ್ಟುವ ಪ್ರಾಥಮಿಕ ಕ್ರಮಗಳನ್ನು ಪ್ರದರ್ಶಿಸುವುದು.

2. ಗಿಡನೆಡುವುದು, ಚಿಕ್ಕ ಹುಲ್ಲು ಹಾಸು ಮಾಡುವುದು ಅಥವಾ ಇತರೆ ಗಿಡಗಳನ್ನು ಬಾಗಿಲ ಹೊರಗಿನ ಕುಂಡಗಳಲ್ಲಿ, ಮಹಡಿಯಲ್ಲಿ ಅಥವಾ ಮನೆ ಯೊಳಗಿನ ಹೂ ಕುಂಡಗಳಲ್ಲಿ ನೆಡುವುದು, ಆ ಮೂಲಕ ತನ್ನ ಪರಿಸರವನ್ನು ಉತ್ತಮಗೊಳಿಸಿಕೊಳ್ಳುವುದು.

3. ಈ ಕೆಳಗಿನ ಯೋಜನೆಗಳಲ್ಲಿ ಒಂದನ್ನು ಜಾರಿಗೊಳಿಸಬೇಕು.

i. ಒಂದು ಚಿಕ್ಕ ಟಿಪ್ಪಣಿ ಪುಸ್ತಕವಿರಿಸಿಕೊಂಡು ಮೃಗಾಲಯದಲ್ಲಿರುವ ಯಾವುದಾದರೂ ಐದು ಪ್ರಾಣಿಗಳ ಬಗೆಗೆ ಅವುಗಳ ಮೂಲ ದೇಶ, ಆಹಾರ, ಅಭ್ಯಾಸಗಳು, ಮೃಗಾಲಯದಲ್ಲಿ ಅವುಗಳ ಬಗೆಗೆ ನೀಡಬೇಕಾದ ವಿಶೇಷ ಗಮನ ಮುಂತಾದವುವನ್ನು ಬರೆದುಕೊಂಡು, ಪರೀಕ್ಷಕರಿಗೆ ವಿವರವಾಗಿ ತಿಳಿಸುವುದು.

ii. ತನ್ನ ಹಿಂಡು ಹಿಂಬಾಲಿಸಲು, ಸ್ನೇಹಿತನೊಡಗೂಡಿ ಒಂದು ಪ್ರಾಕೃತಿಕ ಜಾಡನ್ನು (Nature trail), ವ್ಯವಸ್ಥೆ ಮಾಡುವುದು.

iii. ಒಂದು ಕಾಡು ಪ್ರಾಣಿ, ಮರ, ಮೀನು ಅಥವಾ ಪಕ್ಷಿ, ಇವುಗಳಲ್ಲೊಂದನ್ನು ಆರಿಸಿಕೊಂಡು ಅದರ ಬಗ್ಗೆ ಆದಷ್ಟೂ ವಿಷಯಗಳನ್ನು ಶೋಧಿಸಿ ತಿಳಿದುಕೊಂಡು ಪರೀಕ್ಷಕರಿಗೆ ವರದಿ ಒಪ್ಪಿಸುವುದು.

ಸೂಚನೆ:

1. ರಾಜ್ಯ ಮುಖ್ಯ ಅಯುಕ್ತರ ಸಹಿಯ ವಿಶೇಷ ಪ್ರಶಸ್ತಿ ಪತ್ರಮೊಂದಿಗೆ ಈ ಪದಕವನ್ನು ನೀಡಲಾಗುದುವುದು.

2. ಈ ಪದಕವನ್ನು ಶರ್ಟ್‌ನ ಬಲ ಜೇಬಿನ ಹೊಲಿಗೆಯ ಮೇಲ್ಭಾಗದಲ್ಲಿ ಧರಿಸಬೇಕು ಅಥವಾ ಅದೇ ಸ್ಥಳದಲ್ಲಿ ಜೆರ್ಸಿ ಮೇಲೆ ಧರಿಸಬೇಕು.

2. ಪರಂಪರೆ ಮರಿ (Heritage Cub)



ಮರಿಗಳು ತಮ್ಮ ಸ್ಥಳೀಯ ಸಂಸ್ಕೃತಿಯ ಮೂಲ ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕು.

ತಮ್ಮ ವಿಶಿಷ್ಟ ಟಿಪ್ಪಣಿ ಪುಸ್ತಕದಲ್ಲಿ ಅವರು ಅಧ್ಯಯನ ಮಾಡಿದ್ದನ್ನು ಸಚಿತ್ರ ಸಂಗ್ರಹ ಮಾಡಬೇಕು.

i. ತನ್ನ ಸುತ್ತಲಿನ ಭೌತಿಕ ಪರಿಸರ; ಪ್ರಸಿದ್ಧ ಬೆಟ್ಟಗಳು, ನದಿಗಳು ಇತ್ಯಾದಿ.

ಅ) ಸಾಮಾನ್ಯ ಮರಗಳು ಮತ್ತು ಅವುಗಳ ಉಪಯೋಗ.

ಇ) ಸಾಮಾನ್ಯ ಹಕ್ಕಿಪಕ್ಷಿಗಳು ಸ್ಥಳೀಯ ಸಸ್ಯವರ್ಗ, ಪ್ರಾಣಿವರ್ಗ.

ii. ಮೊದಲಿಗೆ ತನ್ನದೇ ಆದ ಸಾಂಸ್ಕೃತಿಕ ಪರಂಪರೆ ವೈಶಿಷ್ಟ್ಯ ಮತ್ತು ಆಚಾರ ಪದ್ಧತಿಗಳು ಮತ್ತು ತನ್ನ ವಂಶ, ಕುಟುಂಬ ಇವುಗಳ ಸಂಪ್ರದಾಯಗಳ ಬಗ್ಗೆ ತಿಳಿದಿರಬೇಕು.

1. ತನ್ನ ಟಿಪ್ಪಣಿ ಪುಸ್ತಕದಲ್ಲಿ, ತನ್ನ 'ವಂಶವೃಕ್ಷ' – ಪೂರ್ವಜರ ಬಗ್ಗೆ ತಯಾರಿಸಬಹುದು.

2. ಸ್ಥಳೀಯ ಹಬ್ಬಗಳಲ್ಲಿ ಭಾಗವಹಿಸಿ, ಛಾಯಾಚಿತ್ರಗಳಲ್ಲಿ ಅಥವಾ ವರ್ಣನೆಯ ಮೂಲಕ ದಾಖಲಿಸಬೇಕು.

3. ಸಾಂಪ್ರದಾಯಿಕ ಹಾಡು ಮತ್ತು ನೃತ್ಯಗಳು

4. ಸಾಂಪ್ರದಾಯಿಕ ಅಡಿಗೆಗಳು

5. ಸಾಂಪ್ರದಾಯಿಕ ಉಡಗೆ ತೊಡುಗೆಗಳು

iii. ತನ್ನ ಸ್ಥಳೀಯ (ಗ್ರಾಮ/ಮೊಹಲ್ಲಾದ) ವಾದ ಹಿಂದಿನ ಮತ್ತು ಇಂದಿನ ಕಲೆ, ಕಟ್ಟಡಗಳು, ಪೂಜಾ ಸ್ಥಳಗಳು, ಸಂಗೀತ, ಸಂಗೀತವಾದ್ಯಗಳು, ನೃತ್ಯಗಳು, ಸೂತ್ರದ ಗೊಂಬೆಗಳು, ಆಹಾರ, ವೇಷ – ಭೂಷಣ ಇವುಗಳ ಬಗ್ಗೆ ತಿಳಿದಿರಬೇಕು.

iv. ಪ್ರಾಯೋಗಿಕ ಕೆಲಸ :

* ಸ್ಥಳೀಯ ಸ್ಮಾರಕಗಳಿಗೆ ಮತ್ತು ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವುದು.

* ಸ್ಥಳೀಯವಾದ ಪಾರಂಪರಿಕ ಕಲೆಯನ್ನು ಕಲಿಯುವುದು.

(ಉದಾ: ಕುಂಬಾರಿಕೆ ರಂಗೋಲಿ ಇತ್ಯಾದಿ)

* ಸ್ಥಳೀಯ ಕತೆ ಮತ್ತು ದಂತ ಕತೆಗಳನ್ನು ಅಭಿನಯಿಸುವುದು.

1. ಕಂಪ್ಯೂಟರ್ ಅರಿವು (Computer Knowledge)

i. ಕಂಪ್ಯೂಟರ್‌ನ ಸಂಕ್ಷಿಪ್ತ ಚರಿತ್ರೆ ಮತ್ತು ಇತ್ತೀಚಿನ ಬೆಳವಣಿಗೆ.

ii. ಕಂಪ್ಯೂಟರ್‌ನ ವಿವಿಧ ಉಪಾಂಗಗಳು (ಕಾಂಪೊನೆಂಟ್ಸ್) ಮತ್ತು ಪರಿಧಿಗಳು (ಪೆರಿಫರಲ್ಸ್) ಇವನ್ನು ತಿಳಿದಿರಬೇಕು.

iii. ಮರಿಗಳ ಕಾರ್ಯಕ್ರಮಗಳಲ್ಲಿ ಅವನ್ನು ಹೇಗೆ ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವುದು ತಿಳಿದಿರಬೇಕು.

iv. ಸಾಮಾನ್ಯವಾಗಿ ಉಪಯೋಗದಲ್ಲಿರುವ ಭಾಂಗಿಗಳ (ಪ್ಯಾಕೇಜ್) ಬಗ್ಗೆ ತಿಳಿದಿರಬೇಕು.

v. ಈ ಕೆಳಗಿನವುಗಳನ್ನು ಮಾಡಲು ಬರಬೇಕು.

ಅ) ಡಿವಿಡಿ/ಪೆನ್‌ಡ್ರೈವ್ ಮತ್ತು ಹಾರ್ಡ್ ಡಿಸ್ಕ್ ಉಪಯೋಗಿಸುವುದು.

ಆ) ಬೂಟಿಂಗ್ ಮತ್ತು ಷಟ್‌ಡೌನ್ ಮಾಡಬೇಕು.

ಅನುಬಂಧ 2

(ಮೂಲದಲ್ಲಿ ಅಧ್ಯಾಯ 4)

ವಿಶೇಷ ವಿಭಾಗಗಳು

ವಿಸ್ತೃತ ಕಬ್ಬಿಂಗ್

1. "ವಿಸ್ತೃತ ವಿಭಾಗದ ಮರಿ" ಎಂದರೆ ಕುರುಡು, ಕಿವುಡು, ಮೂಕ, ಅಂಗವಿಕಲತೆ ಅಥವಾ ಮನೋದೌರ್ಬಲ್ಯಗಳಂತಹ ಯಾವುದಾದರೂ ಶಾರೀರಿಕ ಅಥವಾ ಮಾನಸಿಕ ಊನ (ಕುಂದು) ಪಡೆದಿರುವ ಬಾಲಕ.

2. ಇಂತಹ ನ್ಯೂನತೆ ಇರುವ ಬಾಲಕರೂ ಮರಿ ಆಗಿ ಸೇರಲು ಅರ್ಹರು: ಅನುಬಂಧದಲ್ಲಿ ಆಗಿಂದಾಗ್ಯೆ ಸೂಚಿಸುವ ವಿಶೇಷ ನಿಯಮಗಳೂ, ಅಗತ್ಯವಾದಂತೆ ಇಂತಹವರಿಗಾಗಿ 'ಮರಿ'ಗಳ ನಿಯಮಾವಳಿಯಲ್ಲಿ ಸೂಚಿಸುವ ಅಗತ್ಯ ಬದಲಾವಣೆಗಳು ಈ ಮರಿಗಳಿಗೆ ಅನ್ವಯಿಸುವುವು.

3. ವಿಸ್ತೃತ ಮರಿಗಳ ಮಂಡಲ (ಗ್ರೂಪ್) ಗಳನ್ನು ಆಸ್ಪತ್ರೆ, ಸಂಸ್ಥೆ, ಹಟ್ಟಿ, ಶಾಲೆ ಇಂತಹ ಕಡೆ ರಚಿಸಬಹುದು. ಸಾಮಾನ್ಯ ಮರಿಗಳ ಹಿಂಡಿನಲ್ಲಿಯೂ ಇಂತಹ ಮರಿಗಳು ಸೇರಬಹುದು. ವಿಸ್ತೃತ ಮರಿಗಳ ಹಿಂಡು ಸಂದರ್ಭಾನುಸಾರ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ ಆಡಳಿತದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

4. ಸಾಮಾನ್ಯವಾಗಿ: ವಿಸ್ತೃತ ಮರಿಯು ಇತರ ಮರಿಗಳಿಗೆ ವಿಧಿಸಿರುವ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು.

ವಿಶೇಷ ಸಂದರ್ಭಗಳಲ್ಲಿ : ನ್ಯೂನತೆ ವೈಕಲ್ಯತೆಯ ಕಾರಣಕ್ಕಾಗಿ ನಿಗದಿ ಮಾಡಿರುವ ಪರೀಕ್ಷೆಗಳಿಗೆ ಬದಲಾಗಿ, ಇತರ ವಿಶೇಷ ಪರೀಕ್ಷೆಗಳನ್ನು ಇಂತಹ ಮರಿಗಳಿಗಾಗಿ ನಿಗದಿಪಡಿಸಬಹುದು.

(ವಿವರಣೆ: ಮೂಲದಲ್ಲಿ ತಿಳಿಸಿರುವಂತೆ ಸ್ಕೌಟ್ ಪದದ ಬದಲು ಮರಿಗಳು ಪದವನ್ನು ಉಪಯೋಗಿಸಲಾಗಿದೆ.)

ಅನುಬಂಧ 3

ಗುರಿ, ನೀತಿ, ನಿಯಮ ಮತ್ತು ಸಂಘಟನೆ, ಭಾಗ–1 ಸಾಮಾನ್ಯ

A.P.R.O. – PART I – General

ಪುಸ್ತಕದಿಂದ ಉಧೃತವಾಗಿರುವ ಕೆಲವು ಸಾಮಾನ್ಯ ವಿಷಯಗಳ ವಿವರಣೆ

ಪ್ರತಿ ಕಬ್‌ಮಾಸ್ಟರರೂ ಭಾರತ್ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಭಾಗವಾಗಿರುತ್ತಾರೆ:

ಸಂಸ್ಥೆಯ ಸ್ಥಳೀಯ, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿವಿಧ ಸ್ತರಗಳ ರಚನೆ, ಧಾರ್ಮಿಕ ಹಾಗೂ ಹಣಕಾಸು ವ್ಯವಹಾರಗಳ ಬಗ್ಗೆ ಅನುಸರಿಸುವ ರೀತಿ, ನೀತಿ;

ಸ್ವಇಚ್ಛೆಯಿಂದ ಕಟ್ಟುಬದ್ಧರಾಗಿರಬೇಕಾದ ಪ್ರತಿಜ್ಞೆ, ನಿಯಮ ಇತ್ಯಾದಿ ಅನೇಕ ವಿಷಯಗಳ ಬಗ್ಗೆ ತಿಳುವಳಿಕೆ ;

ಸಂಸ್ಥೆಯಲ್ಲಿ ತಮ್ಮ ನೆಲೆ ಹಾಗೂ ಪಾತ್ರ ನಿರ್ವಹಣೆ ಬಗ್ಗೆ ಅರಿವು ಇವೇ ಮುಂತಾದ ಅವಶ್ಯಕ ಅಂಶಗಳನ್ನೊಳಗೊಂಡ ವಿವರಗಳು ಈ ಪುಸ್ತಕದಲ್ಲಿ ಲಭ್ಯವಿದ್ದು ಪ್ರತಿ ಮರಿಗಳ ಹಿಂಡಿನ ಪುಸ್ತಕ ಭಂಡಾರದಲ್ಲಿ ಇರಲೇಬೇಕಾದ ಪುಸ್ತಕವಾಗಿದೆ.

1975ರ ಮೊದಲ ಮುದ್ರಣದ ಸಮಯದಲ್ಲಿ ಈ ಪುಸ್ತಕವು ಕನ್ನಡದಲ್ಲಿ ಲಭ್ಯವಿಲ್ಲದಿದ್ದ ಕಾರಣ, ಇದರ ಆಯ್ದುಭಾಗಗಳನ್ನು ಸೂಚಿಸಿದ್ದು, ಈ ವರೆಗಿನ ಐದು ಮುದ್ರಣಗಳಲ್ಲಿ ಮುಂದುವರೆಸಲಾಗಿತ್ತು. ಈಗ ಆ ರೀತಿಯ ಆಯ್ದ ಭಾಗಗಳನ್ನು ಕೈಬಿಡಲಾಗಿದೆ. ಕಬ್ ಮಾಸ್ಟರು ಗು. ನೀತಿ, ನಿ, ಸಂ. ಭಾಗ–1 ಪುಸ್ತಕವನ್ನು ಮರೆಯದೇ ಪಡೆದು ಮಾಹಿತಿ ತಿಳಿಯಬೇಕು.

ಮರಿಗಳ ವಿಭಾಗ – ನಿರೂಪಣೆ

ಮರಿಗಳ ವಿಭಾಗವು ಸ್ಕೌಟ್ ಸಂಸ್ಥೆಯ ಮಹತ್ತ್ವಪೂರ್ಣ ವಿಭಾಗವಾಗಿದೆ. 5 + ಇಂದ 10 ವರ್ಷ ವಯಸ್ಸಿನ ಬಾಲಕರ ವಿಶೇಷ ಗುಣಗಳಿಗೆ ತಕ್ಕಂತೆ ಈ ವಿಭಾಗವನ್ನು ರೂಪಿಸಲಾಗಿದೆ.

ಮರಿಗಳ ಸಹಜಗುಣಗಳು :

1) ಕಾಲ್ಪನಿಕ ಹಾಗೂ ಸಾಹಸಪ್ರವೃತ್ತಿ 2) ಗಲಾಟೆ ಮಾಡುವುದು (ಆಂತರಿಕ ಬೆಳವಣಿಗೆಯ ಬಾಹ್ಯ ತೋರಿಕೆ 3) ವಸ್ತುಗಳನ್ನು ಕೆಡಿಸುವುದು, ಹಾಳು ಮಾಡುವುದು (ಕುತೂಹಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರವೃತ್ತಿ–ಸೃಜನಶೀಲತೆಗಾಗಿ ದಾರಿ ಮಾಡಿಕೊಡುವುದು) 4) ತಮ್ಮದೇ ಅಭಿರುಚಿ, ವ್ಯಕ್ತಿತ್ವ–ವೈಶಿಷ್ಟ್ಯತೆ 5) ಜಂಭ ಹೊಡೆಯುವುದು (show off) 6) ಸ್ವಾರ್ಥಪರತೆ 7) ಚುರುಕಾಗಿರುವುದು, ಜಾಗರೂಕರಾಗಿರುವುದು (Restlessness) 8) ಕುತೂಹಲಕಾರೀ ಪ್ರಶ್ನೆಗಳು 9) ಹಿಂಡಿನ ಚೇತನ, ವಾತಾವರಣಗಳಿಗೆ ಸ್ಪಂದಿಸುವುದು 10) ಅನುಕರಣೆ.

ಈ ಪ್ರವೃತ್ತಿಗಳನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಲು ಪೂರಕವಾಗಿರುವಂತೆ ಕತೆಗಳು, ಕಾಡಿನ ವಾತಾವರಣ, ಕುಣಿತಗಳು, ಕೂಗಾಟಗಳು ಅಭಿನಯ (ನೃತ್ಯ.) ನಾಟಕ, ಆಟಗಳು ಮತ್ತು ಅನುಕರಣೀಯ ಹಾಗೂ ಆದರ್ಶ ನಡೆವಳಿಕೆಗಳ ಮೂಲಕ ಮರಿಗಳನ್ನು ಕಬ್ ಮಾಸ್ಟರುಗಳು ಮುನ್ನಡೆಸಬೇಕು. ಮರಿಗಳ ವ್ಯಕ್ತಿತ್ವ ಬೆಳವಣಿಗೆ ಮತ್ತು ವಿಕಾಸಕ್ಕೆ ಕಾರಣರಾಗಬೇಕು.

ಈ ರೀತಿಯಲ್ಲಿ ಹಿಂಡುಗಳನ್ನು ನಡೆಸಲು ಪೂರಕವಾಗಿ ಒದಗಿಬಂದದ್ದು, ಸರ್ ರಡ್ಯಾರ್ಡ್ ಕಿಪ್ಲಿಂಗ್ ರವರ ಕಾಡು ಕತೆಗಳು. ಈ ಪುಸ್ತಕದಿಂದ ಪ್ರಭಾವಿತರಾದ, ಸಂಸ್ಥೆಯ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೋವೆಲ್ ರವರು ಲೇಖಕರ ಅನುಮತಿ ಪಡೆದು, ಆ ಕತೆಗಳನ್ನು ಮರಿಗಳ ಶಿಕ್ಷಣದ ಹಿನ್ನೆಲೆ ಹಾಗೂ ಆಧಾರ ವಿಶೇಷವಾಗಿ ರೂಪಿಸಿರುತ್ತಾರೆ.**

ಕಬ್ ಮಾಸ್ಟರುಗಳು ಈ ಪುಸ್ತಕದಲ್ಲಿನ ಕತೆಗಳನ್ನು ಎಷ್ಟು ಆಳವಾಗಿ ಅಧ್ಯಯನ ಮಾಡಿ, ಹಿಂಡನ್ನು ನಡೆಸಲು ಅಳವಡಿಸಿಕೊಳ್ಳುವರೋ ಅವರು ನೀಡುವ ಶಿಕ್ಷಣವು ಮಕ್ಕಳ ಮೇಲೆ ಅಷ್ಟು ಪ್ರಭಾವ ಪರಿಣಾಮಕಾರಿಯಾಗಿರುತ್ತದೆ.

ಬೇಡನ್ ಪೋವೆಲ್

** ಇದೀಗ ಕಾಡಿನ ಕತೆಗಳು ಪುಸ್ತಕವು ಸವಿವರವಾಗಿ ಕಿಪ್ಲಿಂಗ್‌ರವರ ಜೀವನ ಚರಿತ್ರೆ ಅಭಿನಯಗಳ ವಿವರಣೆಯೊಂದಿಗೆ, ನೈಜ ಚಿತ್ರಗಳೂ ಸೇರಿದಂತೆ ಕನ್ನಡದಲ್ಲಿ ರಾಜ್ಯಕಾರ್ಯಾಲಯದ ದಾಸ್ತಾನು ವಿಭಾಗದಲ್ಲಿ ಲಭ್ಯವಿದೆ.

ವಿಶೇಷ ಶಾಖೆಗಳು

ಅ) ವಿಸ್ತೃತ ಸ್ಕೌಟಿಂಗ್

1) ಕುರುಡುತನ, ಅಂಗವೈಕಲ್ಯ ಅಥವಾ ಮಾನಸಿಕ ದೌರ್ಬಲ್ಯ, ಮುಂತಾದ ದೈಹಿಕ ಅಥವಾ ಮಾನಸಿಕ ವಿಕಲತೆಯುಳ್ಳವನು ವಿಸ್ತೃತ ಸ್ಕೌಟ್ ಆಗಿರುತ್ತಾನೆ.

2) ವೈಕಲ್ಯವುಳ್ಳ ಒಬ್ಬ ವ್ಯಕ್ತಿಯು ಸ್ಕೌಟ್ ಆಗಲು ಅರ್ಹನಾಗಿರುತ್ತಾನೆ. ಒಬ್ಬ ಸ್ಕೌಟಿಗೆ ಅನ್ವಯವಾಗುವ, ಅವಶ್ಯಕ ವಿದ್ದರೆ.ಬದಲಾಯಿಸಿದ, ನಿಯಮ ಮತ್ತು ಆಗಾಗ್ಗೆ ಅನುಬಂಧದಲ್ಲಿ ತಿಳಿಸಿರುವ ವಿಶೇಷ ನಿಯಮಗಳು ವಿಸ್ತೃತ ಸ್ಕೌಟಿಗೆ ಅನ್ವಯವಾಗತಕ್ಕದ್ದು.

3) ವಿಸ್ತೃತ ಸ್ಕೌಟ್‌ಗಳ ಗುಂಪನ್ನು ಆಸ್ಪತ್ರೆ / ಸಂಸ್ಥೆ / ಕಾಲೋನಿ ಅಥವಾ ಶಾಲೆಯಲ್ಲಿ ತೆರೆಯಬಹುದು. ಒಬ್ಬ ವಿಸ್ತೃತ ಸ್ಕೌಟನು ಸಾಮಾನ್ಯ ಸ್ಕೌಟ್ ಗುಂಪಿನ ಸದಸ್ಯನೂ ಆಗಬಹುದು. ವಿಸ್ತೃತ ಸ್ಕೌಟ್ ಗುಂಪು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ (ಯಾವುದೇ ಸೂಕ್ತವೋ) ಅಧೀನದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

4) ತನ್ನ ವೈಕಲ್ಯದ ಕಾರಣಕ್ಕಾಗಿ ವಿನಾಯಿತಿಗೊಳಿಸಿದ ಪರೀಕ್ಷೆಗಳನ್ನು ಹೊರತುಪಡಿಸಿ, ಉಳಿದಂತೆ ಸ್ಕೌಟ್‌ನಿಗೆ ನಿಗಧಿಪಡಿಸಿದ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗತಕ್ಕದ್ದು. ಅಂತಹ ಸಂದರ್ಭದಲ್ಲಿ ವಿಸ್ತೃತ ಸ್ಕೌಟಿಗೆ ನಿಗಧಿಪಡಿಸಿದ ಪರ್ಯಾಯ ಪರೀಕ್ಷೆ ಅಥವಾ ಪರೀಕ್ಷೆಗಳಲ್ಲಿ ಅವನು ಉತ್ತೀರ್ಣನಾಗತಕ್ಕದ್ದು.

(ವಿವರಣೆ : "ಸ್ಕೌಟ್" ಪದವು "ಕಬ್" ಹಾಗೂ "ರೋವರ್" ಒಳಗೊಂಡಿರತಕ್ಕದ್ದು.)

ಆ) ಸಾಗರ ಸ್ಕೌಟಿಂಗ್ ಶಾಖೆ :

ಸಾಗರ ಸ್ಕೌಟ್ ಮತ್ತು ಸಾಗರ ರೋವರ್

1) ಸಾಗರ ಸ್ಕೌಟ್‌ಗಳು ಸಾಗರ ಸ್ಕೌಟ್ ತಂಡ ರಚಿಸತಕ್ಕದ್ದು. ಸಾಗರ ರೋವರ್‌ಗಳು ಸಾಗರ ರೋವರ್ ಕ್ರ್ಯೂ ರಚಿಸತಕ್ಕದ್ದು.

2) ಸಾಗರ ಸ್ಕೌಟ್‌ಗಳು ಮತ್ತು ಸಾಗರ ರೋವರ್‌ಗಳಿಗೆ ಪ್ರತ್ಯೇಕ ಗುಂಪುಗಳು ಇರತಕ್ಕದ್ದು.

3) ಸಾಮಾನ್ಯವಾಗಿ ಸಾಗರ ಸ್ಕೌಟ್ ತಂಡ ಮತ್ತು ಸಾಗರ ರೋವರ್ ಕ್ರ್ಯೂಗಳು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ
(ಯಾವುದು ಸೂಕ್ತವೋ ಅದು) ಭಾಗವಾಗಿರತಕ್ಕದ್ದು.

ಆದಾಗ್ಯೂ ಸಹ, ಜಲಕೌಶಲ್ಯದಲ್ಲಿ ವಿಶೇಷ ಭೋಧನೆಗಳನ್ನು ನೀಡುವ ಸಲುವಾಗಿ, ರಾಜ್ಯ ಮುಖ್ಯ ಆಯುಕ್ತರ ಅನುಮೋದನೆಯಂತೆ, ಸಾಗರ ಸ್ಕೌಟ್, ತಂಡಗಳು ಮತ್ತು ಸಾಗರ ರೋವರ್ ಕ್ರ್ಯೂಗಳಿಗಾಗಿ ಪ್ರತ್ಯೇಕ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆ ರಚಿಸಬಹುದಾಗಿದೆ.

4) ಸಾಗರ ಸ್ಕೌಟ್ ತಂಡ ಅಥವಾ ಸಾಗರ ರೋವರ್ ಕ್ರ್ಯೂ ಅಥವಾ ಸ್ಥಳೀಯ ಸಂಸ್ಥೆ ಅಥವಾ ಜಿಲ್ಲಾ ಸಂಸ್ಥೆ (ಯಾವುದು ಸೂಕ್ತವೋ ಅದು) ಈ ಕೆಳಗಿನ ಅಂಶಗಳಿಗೆ ಸಂಬಂಧಪಟ್ಟಂತೆ ನಿಯಮಗಳನ್ನು ಸೂಕ್ತವಾದ ರೀತಿಯ ಮುಖಾಂತರ, ರಾಜ್ಯ ಸಂಸ್ಥೆಗೆ ಕಳುಹಿಸತಕ್ಕದ್ದು.

ಅ) ಸಾಗರ ಸ್ಕೌಟ್‌ಗಳು ಮತ್ತು ಸಾಗರ ರೋವರ್‌ಗಳು ಬಳಸುವ ದೋಣಿಯ ಅಥವಾ ದೋಣಿಗಳ ತಪಾಸಣೆ

ಆ) ಆ ಪ್ರದೇಶದ ನಿರ್ಭಂಧನೆಗಳು ಮತ್ತು ಅಂತಹ ದೋಣಿ ಒಯ್ಯಬಹುದಾದ ವ್ಯಕ್ತಿಗಳ ಸಂಖ್ಯೆ

ಇ) ವಾಯುತೊಟ್ಟಿಗಳು, ಜೀವರಕ್ಷಕ ಸೊಂಟ ಪಟ್ಟಿಗಳು ಮತ್ತು ಇತರೆ ರಕ್ಷಣಾ ಸಾಧನಗಳ ಇರುವಿಕೆ

ಈ) ಅಂತಹ ದೋಣಿಗಳ ಸುಪರ್ದಿಗೆ ನೇಮಿಸಲ್ಪಟ್ಟ ಅರ್ಹ ವ್ಯಕ್ತಿ

ಉ) ದೋಣಿಗಳ ಕಾಳಜಿ ಮತ್ತು ನಿರ್ವಹಣೆ.

5) ಜಲ ವಾಹನದಲ್ಲಿರುವ ಭೋಧಕನು, ಆ ಉದ್ದೇಶಕ್ಕಾಗಿ ಅರ್ಹತೆ ಹೊಂದಿದವನಾಗಿರತಕ್ಕದ್ದು.

6) ದೋಣಿಯ, ಸಾಗರ ಯೋಗ್ಯತೆಯ ಬಗ್ಗೆ ಇತ್ತೀಚೆಗಿನ ಅಧಿಕೃತ ಪ್ರಮಾಣ ಪತ್ರ ಅವಶ್ಯಕ

7) "ಅಧಿಕಾರ ಪ್ರಮಾಣ ಪತ್ರ"ವೂಸಹ ಅವಶ್ಯಕ

ಇ) ವಾಯು ಸ್ಕೌಟಿಂಗ್ ಶಾಖೆ

ವಾಯು ಸ್ಕೌಟ್, ವಾಯು ರೋವರ್

1) ವಾಯು ಸ್ಕೌಟ್ ಅಥವಾ ವಾಯು ರೋವರ್, ವಾಯು ಚಟುವಟಿಕೆಗಳಲ್ಲಿ ಭೋಧಿಸಲ್ಪಡಬೇಕು. ವಾಯು ಸ್ಕೌಟ್ ಮತ್ತು ವಾಯು ರೋವರ್‌ಗಳು ಪ್ರತ್ಯೇಕ ವಾಯು ಸ್ಕೌಟ್ ತಂಡ ಮತ್ತು ವಾಯು ರೋವರ್ ಕ್ರ್ಯೂ ರಚಿಸತಕ್ಕದ್ದು.

2) ಸಾಮಾನ್ಯವಾಗಿ, ವಾಯು ಸ್ಕೌಟ್ ತಂಡ ಮತ್ತು ವಾಯು ರೋವರ್ ಕ್ರ್ಯೂ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ (ಯಾವುದು ಸೂಕ್ತವೋ ಅದು) ಅಧಿನದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

ಆದಾಗ್ಯೂ ಸಹ, ವಾಯು ಚಟುವಟಿಕೆಗಳಲ್ಲಿ ವಿಶೇಷ ಬೋಧನೆಗಳನ್ನು ನೀಡುವ ಸಲುವಾಗಿ, ರಾಜ್ಯ ಮುಖ್ಯ ಆಯುಕ್ತರ ಅನುಮೋದನೆ ಮೇರೆಗೆ, ವಾಯು ಸ್ಕೌಟ್ ತಂಡಗಳಿಗಾಗಿ ಮತ್ತು ವಾಯು ರೋವರ್ ಕ್ರ್ಯೂಗಳಿಗಾಗಿ ಪ್ರತ್ಯೇಕ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆ ರಚಿಸಬಹುದಾಗಿದೆ. ಈ ನಿಟ್ಟಿನಲ್ಲಿ ಮುಖ್ಯ ರಾಷ್ಟ್ರೀಯ ಆಯುಕ್ತರು ನೀಡಿದ ವಿಶೇಷ ನಿಬಂಧನೆಗಳನ್ನು ವಾಯುಸ್ಕೌಟ್ ತಂಡ ಮತ್ತು ವಾಯು ರೋವರ್ ಕ್ರ್ಯೂ ಪಾಲಿಸತಕ್ಕದ್ದು.

ಈ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಾಹಸ ಕ್ಲಬ್:

ಪೀಠಿಕೆ : ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಹೆಚ್ಚಿನ ಸಂಖ್ಯೆಯ ಯುವಕರು, ಯುವಸಂಘಟನೆಗಳು ಏರ್ಪಡಿಸುವ ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರಾಗಿರುತ್ತಾರೆ. ಸಾಹಸ ಚಟುವಟಿಕೆಗಳನ್ನು ಪ್ರವರ್ತಗೊಳಿಸಲು ತಳಮಟ್ಟದಲ್ಲಿ ಆ ರೀತಿಯ ಯುವ ಸಂಘಟನೆ ಇಲ್ಲ.

ಈ ಅಂತರವನ್ನು ತುಂಬಲು ಹಾಗೂ ಗರಿಷ್ಠ ವಯೋಮಿತಿಯನ್ನು ತಲುಪಿದ ನಂತರ ಬಿಟ್ಟುಹೋಗುವ ಯುವ ಸದಸ್ಯರನ್ನು ಉಳಿಸಿಕೊಂಡು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸದಸ್ಯತ್ವವನ್ನು ಹೆಚ್ಚಿಸುವ ಸಲುವಾಗಿ ಸಾಹಸಕ್ಲಬ್ ಪರಿಚಯಿಸಲಾಗಿದೆ.

ಉದ್ದೇಶಗಳು :

ಸದಸ್ಯತ್ವ ವಿಕಾಸ

- ಹೊರಹೋಗುವ ಯುವಕರನ್ನು ಸಂಘಟನೆಯಲ್ಲಿ ಹೆಚ್ಚುಕಾಲ ಉಳಿಸಿಕೊಳ್ಳಲು
- ಯುವಕರಲ್ಲಿ ನಾಯಕತ್ವ ಸಾಮರ್ಥ್ಯಗಳನ್ನು ಬೆಳೆಸಲು
- ದೈಹಿಕ ಸಾಮರ್ಥ್ಯ ಬೆಳೆಸಲು
- ಪ್ರಕೃತಿಯೊಂದಿಗೆ ಹೊಂದಾಣಿಕೆ ಪ್ರವರ್ತಿಸಲು
- ಯುವಕರು ತಮ್ಮ ವಿರಾಮದ ವೇಳೆಯಲ್ಲಿ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು

ರಚನೆ : ಗ್ರಾಮದ ಒಂದು ಭಾಗದಲ್ಲಿ ಕನಿಷ್ಠ 8 ಮಂದಿಯ ಸದಸ್ಯತ್ವದೊಂದಿಗೆ ಸಾಹಸ ಕ್ಲಬ್ ರಚಿಸಲಾಗುವುದು.

ನೋಂದಣಿ : ಪ್ರತಿ ಸಾಹಸ ಕ್ಲಬ್, ಸ್ಥಳೀಯ / ಜಿಲ್ಲಾ ಸಂಸ್ಥೆಯ ಮುಖಾಂತರ ನಮ್ಮ ರಾಜ್ಯ ಸಂಸ್ಥೆಯಲ್ಲಿ ನಿಗಧಿಪಡಿಸಿದ ಶುಲ್ಕದೊಡನೆ ನೋಂದಾಯಿಸಲ್ಪಡಬೇಕು.

ಸ್ಥಳೀಯ / ಜಿಲ್ಲಾ ಸಂಸ್ಥೆಯ ಶಿಫಾರಸ್ಸಿನಮೇರೆಗೆ. ಪ್ರತಿ ಕ್ಲಬ್‌ಗೆ ರಾಜ್ಯ ಸಂಸ್ಥೆಯಿಂದ ಒಂದು ಸನ್ನದನ್ನು ನೀಡಲಾಗುತ್ತದೆ.

ಸಾಹಸ ಕ್ಲಬ್‌ನ ಕಛೇರಿ : ತಮ್ಮ ಯೋಜನೆಗನುಗುಣವಾಗಿ ಸದಸ್ಯರು ಕಾರ್ಯಕ್ರಮಗಳ ಬಗ್ಗೆ ಮತ್ತು ಚಟುವಟಿಕೆಗಳ ಬಗ್ಗೆ ಚರ್ಚಿಸಲು ಅಥವಾ ಅವುಗಳಲ್ಲಿ ಭಾಗವಹಿಸಲು ಸಾಹಸ ಕ್ಲಬ್ ಒಂದು ಕಛೇರಿಯನ್ನು ಹೊಂದಿರುತ್ತದೆ.

ವ್ಯಾಪ್ತಿ : ಸಾರ್ವಜನಿಕ ಸೇವೆಯ ಸರ್ಕಾರಿ ಇಲಾಖೆ / ಸಂಸ್ಥೆ / ಕಾರ್ಖಾನೆ / ಗ್ರಾಮ / ಮೊಹಲ್ಲ / ಸ್ಥಳೀಯ ಪ್ರದೇಶ ಇವುಗಳಿಗಾಗಿ ಕ್ಲಬ್ ರಚಿಸಲಾಗುತ್ತದೆ.

ಕ್ಲಬ್‌ನ ಹೆಸರು : ಪ್ರತಿ ಕ್ಲಬ್‌ಗೆ ಒಬ್ಬ ರಾಷ್ಟ್ರೀಯ ನಾಯಕನ ಹೆಸರಿಡಲಾಗುತ್ತದೆ.

ಸದಸ್ಯತ್ವ : ಜನಾಂಗ, ಜಾತಿ ಅಥವಾ ಮತದ ತಾರತಮ್ಯವಿಲ್ಲದೆ, ಸ್ಥಳದಲ್ಲಿ ವಾಸಿಸುವ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೂಲಾಧಾರಗಳನ್ನು ಒಪ್ಪಿಕೊಳ್ಳುವ, ಕ್ಲಬ್‌ನ ನಿಯಮಗಳನ್ನು ಒಪ್ಪಿಕೊಳ್ಳಲು ಇಚ್ಛೆಯುಳ್ಳ, ಕನಿಷ್ಠ ವಿದ್ಯಾರ್ಹತೆಯುಳ್ಳ, ದೃಢಕಾಯ ಹಾಗೂ ದೃಢಮನಸ್ಸುಳ್ಳ, ಭಾರತದ ಎಲ್ಲಾ ನಾಗರೀಕರಿಗೆ ಕ್ಲಬ್‌ನ ಸದಸ್ಯತ್ವ ಮುಕ್ತವಾಗಿರುತ್ತದೆ.

ನಾಯಕತ್ವ : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಸಾಹಸ ಸಂಸ್ಥೆಯು ನಡೆಸುವ ಸಾಹಸ ನಾಯಕರ ಶಿಕ್ಷಣ ಕ್ರಮ ಪೂರೈಸಿರುವ ಮತ್ತು 25 ರಿಂದ 45 ವರ್ಷದ ಒಳಗಿರುವ ವ್ಯಕ್ತಿ ಪ್ರತಿ ಕ್ಲಬ್‌ನ ನಾಯಕನಾಗಿರುತ್ತಾನೆ.

ಸಮಿತಿ : ಪ್ರತಿ ಕ್ಲಬ್‌ನಲ್ಲಿ ಒಂದು ಕ್ಲಬ್ ಸಮಿತಿ ಇರುತ್ತದೆ. ಅದರಲ್ಲಿ

ಒಬ್ಬ ಅಧ್ಯಕ್ಷ

ಒಬ್ಬ ಉಪಾಧ್ಯಕ್ಷ

ಕಾರ್ಯದರ್ಶಿ (ಕ್ಲಬ್‌ನ ನಾಯಕನು, ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾನೆ)

ಖಜಾಂಚಿ

ಸಾಹಸ ಕ್ಲಬ್‌ನ ಸದಸ್ಯರಲ್ಲಿ 2 ಅಥವಾ 4 ಮಂದಿ ಇರುತ್ತಾರೆ.

ಸಮಿತಿಯ ಕರ್ತವ್ಯಗಳು :

1. ಕ್ಲಬ್‌ನ ಚರ ಮತ್ತು ಸ್ಥಿರ ಆಸ್ತಿಗಳನ್ನು ನಿರ್ವಹಣೆ ಮಾಡುವುದು.
2. ಕ್ಲಬ್‌ನ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ನಿರ್ಧರಿಸುವುದು.
3. ಸದಸ್ಯತ್ವವನ್ನು ಒಪ್ಪಿಕೊಳ್ಳುವುದು.
4. ಅನ್ವೇಷಣಾ ಹೊರ ಸಂಚಾರ ಚಟುವಟಿಕೆಗಳಿಗೆ ಸಮ್ಮತಿಸುವುದು.

ನಿಧಿ : ಗುರಿ, ನೀತಿ, ನಿಯಮ, ಸಂಘಟನೆ ಭಾಗ–1ರಲ್ಲಿ ತಿಳಿಸಿರುವಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ನಿಧಿ ಸಂಗ್ರಹಣೆ ನಿಯಮಗಳಿಗೆ ಬದ್ಧರಾಗಿ, ಸ್ಥಳೀಯ ಸಂಪನ್ಮೂಲಗಳ ಸಹಾಯದಿಂದ ನಿಧಿ ಸಂಗ್ರಹಣೆ ಮಾಡಬಹುದು.

ಸಾಹಸ ಕ್ಲಬ್‌ನ ಸದಸ್ಯರಿಗೆ ಸಮವಸ್ತ್ರ :

ಟೋಪಿ : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲೋಗೋಉಳ್ಳ ನೀಲಿ ಬಣ್ಣದ ಟೋಪಿ

ಷರ್ಟ್ : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಾದರಿಯ ಬೂದು ಬಣ್ಣದ (ಗ್ರೇ) ಷರ್ಟ್ ಅಥವಾ ಟೀ ಷರ್ಟ್

ಕಂಠವಸ್ತ್ರ : ಘಟಕಕ್ಕೆ ವಿಶೇಷವಾಗಿ ರೂಪಿಸಿದ ಕಂಠವಸ್ತ್ರ

ಷರಾಯಿ : ಸಾಗರ ನೀಲಿ ಬಣ್ಣದ ಷರಾಯಿ / ಜೀನ್ಸ್, ಮೊಣಕಾಲಿನಿಂದ ಕೆಳಗೆ ಎರಡೂ ಕಾಲುಗಳ ಮೇಲೆ ಎರಡು ಜೇಬುಗಳು.

ಕಿರು ಚೀಲ: ಸೊಂಟ ಪಟ್ಟಿಯೊಡನೆ ಒಂದು ಕಪ್ಪು ಕಿರುಚೀಲ

ಪಾದರಕ್ಷೆ : ಕಪ್ಪು ಬಣ್ಣದ ಬೇಟೆಗಾರರ ಶೂ ಅಥವಾ ಆಟದ ಶೂ

ಕ್ಲಬ್‌ನ ಕಾರ್ಯಕ್ರಮ :

ಸ್ಥಳೀಯ ಆಟಗಳು

ಕುಸ್ತಿ, ಮಲ್ಲಕಂಬ, ಯೋಗ

ಸಾಹಸಮಯ ಆಟಗಳು

ವಿಸ್ತೃತ ಆಟಗಳು / ಮುನ್ನುಗ್ಗುವ ಆಟಗಳು

ಶಿಲಾರೋಹಣ

ಸ್ಕೇಟಿಂಗ್

ಸಾಹಸ ಹೊರಸಂಚಾರ

ರಾತ್ರಿ ಹೊರಸಂಚಾರ

ಅನ್ವೇಷಣೆ

ಶಿಬಿರವಾಸ

ಸಂರಕ್ಷಣೆ

ಪ್ರಕೃತಿ ಸಂರಕ್ಷಣೆ

ರೇಸ್‌ಗಳು, ಸಮರ ಕಲೆಗಳು, ಸಾಹಸ ಪರ್ಯಟನೆ, ಸೈಕಲ್ ಮೋಟರ್ ಸೈಕಲ್, ಹೊರಸಂಚಾರ ಪರಿಸರ ಶಿಕ್ಷಣ, ಪ್ರಕೃತಿ ಸುತ್ತಾಟ, ವೀಕ್ಷಣೆ ಮತ್ತು ನಿಗಮನ, ಛಾಯಾಗ್ರಹಣ, ಈಜುವಿಕೆ.

ಮುಂದುವರೆದ ಸಾಹಸ ಚಟುವಟಿಕೆಗಳು

ಪರ್ವತಾ ರೋಹಣ, ಸ್ಕೇಟಿಂಗ್, ಮಂಜಿನ ಮೇಲೆ ಸ್ಕೇಟಿಂಗ್, ಅನುವಾಯುಯಾನ (ಪ್ಯಾರಾಗ್ಲೈಡಿಂಗ್), ಅನುಜಲಯಾನ (ಪ್ಯಾರಾಸೈಲಿಂಗ್), ಜಲ ಕ್ರೀಡೆಗಳು, ಜನಸಂಖ್ಯೆ, ಶಿಕ್ಷಣ ಪದಕ, ನಕ್ಷತ್ರ ವೀಕ್ಷಣೆ, ರ್‍ಯಾಂಬ್ಲರ್ ಪದಕ **ತಮ್ಮ ನಿಯಮಿತ ಕಾರ್ಯಕ್ರಮದ ಅಂಗವಾಗಿ, ಸಾಹಸ ಕ್ಲಬ್‌ಗಳು ಪ್ರವರ್ತಿಸಬೇಕಾದ ಸ್ಕೌಟಿಂಗ್ ಚಟುವಟಿಕೆಗಳು** ಪ್ರಾರ್ಥನೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೂಲಾಧಾರಗಳು, ದ್ವಿತೀಯ ಸೋಪಾನದವರೆಗಿನ ಮತ್ತು ರಾಜ್ಯ ಪುರಸ್ಕಾರ ಸ್ಕೌಟ್‌ನ ಪರೀಕ್ಷೆಗಳು ಕಗ್ಗಾಡುವಾಗು ಅಡುಗೆ, ಪ್ರಥಮ ಚಿಕಿತ್ಸೆ, ಅಗ್ರಾಮಿತ್ವ, ನಕ್ಷೆ ಓದುವಿಕೆ, ರಕ್ಷಣೆ ಮತ್ತು ಅಗ್ನಿ ಶಮನ.

ಸಾಹಸ ಕ್ಲಬ್ ನಾಯಕನ ಅರ್ಹತೆಗಳು

ಸಾಹಸ ನಾಯಕನ ಶಿಕ್ಷಣ ಕ್ರಮದಲ್ಲಿ ಭಾಗವಹಿಸಲು ಈ ಕೆಳಕಂಡ ಅರ್ಹತೆಗಳು ಇರಬೇಕು.

ವಯಸ್ಸು : 25 ರಿಂದ 45ರ ಒಳಗೆ (ಕಟ್ಟು ನಿಟ್ಟಾಗಿ)

ವಿದ್ಯಾರ್ಹತೆ : ಕನಿಷ್ಠ ಮೆಟ್ರಿಕ್ಯುಲೇಷನ್

ಅಪೇಕ್ಷಣೀಯ : ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳ ಜ್ಞಾನ ಸಾಹಸ ಚಟುವಟಿಕೆಗಳ ಆಯಾಸವನ್ನು ತಡೆದುಕೊಳ್ಳುವ ದೃಢಕಾಯ.

ಶಿಕ್ಷಣ ಕ್ರಮದ ಅವಧಿ 7 ದಿವಸಗಳು, 4 ದಿವಸಗಳ ಸಾಹಸ ಕಾರ್ಯಕ್ರಮ ಸೇರಿರುತ್ತದೆ. ಸಾಹಸ ನಾಯಕರ ಶಿಕ್ಷಣ ಕ್ರಮದ ಪಠ್ಯ ವಸ್ತುವನ್ನು ತರಬೇತಿ ವಿನ್ಯಾಸ (Scheme of Training)ದಲ್ಲಿ ಸೇರಿಸಲಾಗಿದೆ.

ಕಬ್ಸ್‌ಗಳ ಪ್ರಗತಿಪರ ಪದಕಗಳು



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ

ದೂರದರ್ಶಿತ್ವ - 2024

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ, ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ, ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ ಸಂಸ್ಥೆಯಾಗುತ್ತದೆ.

ಸಂಸ್ಥಾಪಕರ ಅಂತಿಮ ಸಂದೇಶ

ಪ್ರೀತಿಯ ಸ್ಕೌಟುಗಳೇ,

ನೀವು "ಪೀಟರ್ ಪ್ಯಾನ್" ನಾಟಕವನ್ನು ಯಾವಾಗಲಾದರೂ ನೋಡಿದ್ದರೆ ಅದರಲ್ಲಿ ಕಡಲುಕಳ್ಳರ ಯಜಮಾನನು ಯಾವಾಗಲೂ ತನ್ನ ಮರಣಪೂರ್ವ ಭಾಷಣವನ್ನು ಮಾಡುತ್ತಿದ್ದನೆಂಬುದು ನೆನಪಿಗೆ ಬರಬಹುದು; ಏಕೆಂದರೆ ತನಗೆ ಮರಣ ಕಾಲವು ಬಂದಾಗ, ಅದನ್ನು ಹೇಳಲು ಬಹುಶಃ ಕಾಲಾವಕಾಶವಿರುವುದಿಲ್ಲವೆಂಬುದೇ ಅವನ ಭಯ. ನನ್ನ ವಿಷಯದಲ್ಲಿಯೂ ಹೆಚ್ಚು ಕಡಿಮೆ ಹಾಗೆಯೇ. ನಾನು ಈ ಕ್ಷಣದಲ್ಲಿ ಸಾಯದಿದ್ದರೂ, ಬರುವ ಕೆಲವು ದಿನಗಳಲ್ಲಿ ಸತ್ತು ಹೋದೇನು! ಆದ್ದರಿಂದ ನಿಮಗೆ ನನ್ನ ವಿದಾಯಕ ಸಂದೇಶವನ್ನು ನೀಡಲಿಚ್ಛಿಸುತ್ತೇನೆ.

ನೀವು ಕೇಳಿಸಿಕೊಳ್ಳುವ ಇದು ನನ್ನ ಕೊನೆಯ ಮಾತು, ನೆನಪಿಡಿ, ಯೋಚನೆ ಮಾಡಿ.

ನನ್ನದು ಅತ್ಯಂತ ಆಹ್ಲಾದಮಯವಾದ ಜೀವನವಾಗಿದ್ದಿತು. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಅಂತಹುದೇ ಆಹ್ಲಾದಕರ ಜೀವನವಿರಬೇಕೆಂಬುದು ನನ್ನ ಆಶಯ.

ಈ ಅದ್ಭುತ ಪ್ರಪಂಚದಲ್ಲಿ, ಸಂತೋಷವಾಗಿಯೂ ಆನಂದವಾಗಿಯೂ ಇರಲೆಂದು ದೇವರು ನಮ್ಮನ್ನು ಸೃಷ್ಟಿಸಿದ್ದಾನೆಂದು ನಾನು ನಂಬುತ್ತೇನೆ. ಸಂತೋಷವೆಂಬುದು ಐಶ್ವರ್ಯದಿಂದಾಗಲೀ, ವೃತ್ತಿಯಲ್ಲಿ ಜಯಶೀಲರಾದರಾಗಲೀ, ಆತ್ಮಲೋಲುಪ್ತಿಯಿಂದಾಗಲೀ ಬರುವುದಿಲ್ಲ. ನೀವು ಬಾಲಕರಾಗಿದ್ದಾಗ, ಆರೋಗ್ಯವಂತರಾಗಲು, ಬಲಶಾಲಿಗಳಾಗಲು, ಪ್ರಯತ್ನಿಸಬೇಕು. ಇದರಿಂದ, ನೀವು ದೊಡ್ಡವರಾದಾಗ, ಉಪಯುಕ್ತವಾದ ಜೀವನವನ್ನು ನಡೆಸಲೂ ಮತ್ತು ಆನಂದದಾಯಕವಾಗಿ ದಿನಗಳನ್ನು ಕಳೆಯಲು ಸಾಧ್ಯವಾಗುತ್ತದೆ.

ನೀವು ಜೀವನದಲ್ಲಿ ಆನಂದಿಸಲು, ನಿಮಗಾಗಿ ಈ ಪ್ರಪಂಚದಲ್ಲಿ ಎಂತಹ ಸುಂದರವಾದ ಮತ್ತು ಅದ್ಭುತವಾದ ವಸ್ತುಗಳನ್ನು ದೇವರು ಸೃಷ್ಟಿಸಿದ್ದಾನೆಂದು ಪ್ರಕೃತಿ ಅಧ್ಯಯನದ ಮೂಲಕ ತಿಳಿದುಬರುತ್ತದೆ.

ನಿಮಗಿರುವುದರಲ್ಲಿ ತೃಪ್ತಿಪಡಿ. ಅದರ ಸಂಪೂರ್ಣ ಲಾಭವನ್ನು ಪಡೆಯಿರಿ. ಯಾವುದೇ ಸಂದರ್ಭದಲ್ಲಿಯೂ ಅದರ ಕತ್ತಲು ಅಥವಾ ನೆರಳಿನ ಭಾಗವನ್ನು ನೋಡಬೇಡಿ. ಬದಲು ಅದರ ಬೆಳಕಿನ ಪ್ರಕಾಶಮಾನವಾದ ಭಾಗವನ್ನು ನೋಡಿರಿ. ನಿಜವಾದ ಆನಂದವೆಂದರೆ ಇತರರಿಗೆ ಸಂತೋಷವನ್ನು ನೀಡುವುದು, ಈ ಪ್ರಪಂಚವನ್ನು ನೀವು ಕಂಡ ಸ್ಥಿತಿಗಿಂತಲೂ ಉತ್ತಮವಾದ ಸ್ಥಿತಿಯಲ್ಲಿ ಬಿಡಲು ಪ್ರಯತ್ನಿಸುವುದು.

ಏನಾದರಾಗಲೀ ವೃಥಾ ಕಾಲಹರಣ ಮಾಡಿಲ್ಲವೆಂಬ, ನಿಮ್ಮ ಕೈಲಾದಷ್ಟು ಪ್ರಯತ್ನಿಸಿರುವಿರೆಂಬ ಆತ್ಮತೃಪ್ತಿಯಿಂದ ಸಂತೋಷವಾಗಿ ಸಾವನ್ನೆದುರಿಸುತ್ತೀರಿ. ಈ ರೀತಿಯಲ್ಲಿ ನೀವು ಆನಂದದಿಂದ, ಸಾವನ್ನಪ್ಪಲು "ಸದಾ ಸಿದ್ಧರಾಗಿರಿ" ಯಾವಾಗಲೂ ನೀವು ದೊಡ್ಡವರಾದ ಮೇಲೂ ಸ್ಕೌಟ್ ಪ್ರತಿಜ್ಞೆಯಂತೆ ನಡೆದುಕೊಳ್ಳಿ ಅದನ್ನು ಸಾಧಿಸಲು ದೇವರು ನಿಮಗೆ ಸಹಾಯ ಮಾಡುತ್ತಾನೆ.

ನಿಮ್ಮ ಗೆಳೆಯ

ಬೇಡನ್ ಪೋವೆಲ್ ಆಫ್ ಗಿಲ್‌ವೆಲ್